ಕನ್ನಡ ಸಾಹಿತ್ಯ-ಸಂಸ್ಕೃತಿ ವಿಮರ್ಶೆ: ಕಿ ರಂ ನಾಗರಾಜ ಮಾದರಿ

ಪಿಎಚ್.ಡಿ ಮಹಾಪ್ರಬಂಧದ ಸಾರಲೇಖ

ಸಂಶೋಧಕರು

ಮುಸ್ತಾಫ ಕೆ ಎಚ್

ಮಾರ್ಗದರ್ಶಕರು

ಪ್ರೊ. ಸೋಮಣ್ಣ

ಪ್ರಾಧ್ಯಾಪಕರು

ಎಸ್ ವಿ ಪಿ ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ-೫೭೪೧೯೯

ಎಸ್ ವಿ ಪಿ ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ-೫೭೪೧೯೯

೨೦೨೨

ಕನ್ನಡ ಸಾಹಿತ್ಯ–ಸಂಸ್ಕೃತಿ ವಿಮರ್ಶೆ: ಕಿ. ರಂ. ನಾಗರಾಜ ಮಾದರಿ

ಅಧ್ಯಾಯ–೧ ಪ್ರಸ್ತಾವನೆ

೧.೧ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ ಕ್ರಮಗಳು

೧.೨ ಪೂರ್ವಾಧ್ಯಯನ ಸಮೀಕ್ಷೆ

ಅಧ್ಯಾಯ–೨

ಕಿ. ರಂ. ನಾಗರಾಜ ಅವರ ಬದುಕು ಮತ್ತು ನಾಟಕಗಳ ಕುರಿತ ವಿವೇಚನೆ

೨.೧ ಕಿ. ರಂ. ನಾಗರಾಜ ಅವರ ಬದುಕು

೨.೧.೧ ಕಿ. ರಂ. ನಾಗರಾಜ ಅವರ ಪರಿಚಯ

೨.೧.೨ ಕೃತಿಗಳು

೨.೧.೩ ಸಂಪಾದಿತ ಕೃತಿಗಳು

೨.೧.೪ ಪ್ರಶಸ್ತಿಗಳು

೨.೧.೫ ಸ್ಮರಣ ಸಂಚಿಕೆಗಳು ಮತ್ತು ಕೃತಿಗಳು

೨.೧.೬ ಕಿ. ರಂ. ನಾಗರಾಜ ಅವರ ಕುರಿತ ಕೃತಿಗಳು

೨.೨ ಕಿ. ರಂ. ನಾಗರಾಜ ಅವರ ನಾಟಕಗಳ ವಿವೇಚನೆ

೨.೨.೧ ನೀಗಿಕೊಂಡ ಸಂಸ, ಕಾಲಜ್ಞಾನಿ ಕನಕ ಮತ್ತು ಮಧ್ಯಮ ವ್ಯಾಯೋಗ

೨.೨.೧.೧ ನೀಗಿಕೊಂಡ ಸಂಸ ನಾಟಕದ ಅನನ್ಯತೆ

೨.೨.೧.೨ ನೀಗಿಕೊಂಡ ಸಂಸ ನಾಟಕದ ರಂಗತಯಾರಿ

೨.೨.೧.೩ ಕಾಲಜ್ಞಾನಿ ಕನಕ ನಾಟಕದ ಅನನ್ಯತೆ

೨.೨.೧.೪ ಮಧ್ಯಮ ವ್ಯಾಯೋಗ

೨.೨.೧.೫ ಕಿ. ರಂ. ಅವರು ನಾಟಕ ಬರೆಯಲು ಕಾರಣವಾದ ಪ್ರಮುಖಾಂಶಗಳು

ಅಧ್ಯಾಯ–೩

ವಿಮರ್ಶೆ, ಸಾಹಿತ್ಯ, ಸಂಸ್ಕೃತಿ, ಮತ್ತು ಮಾದರಿ ಒಂದು ತಾತ್ತ್ವಿಕ ಪ್ರವೇಶ

೩.೧ ವಿಮರ್ಶಾ ಸಿದ್ಧಾಂತಗಳು

೩.೧.೧ ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯಗಳು

೩.೧.೨ ದೇಶಿ ವಿದ್ವಾಂಸರ ಅಭಿಪ್ರಾಯಗಳು

೩.೨ ಸಾಹಿತ್ಯ ವಿಮರ್ಶೆ

೩.೨.೧ ಸಾಹಿತ್ಯ ವಿಮರ್ಶೆಯ ವಿಧಾನಗಳು

೩.೩ ಸಂಸ್ಕೃತಿ ಮತ್ತು ವಿಮರ್ಶೆ: ಪರಿಕಲ್ಪನೆಯ ವಿಶ್ಲೇಷಣೆ

೩.೪ ಮಾದರಿ: ಪರಿಕಲ್ಪನೆಯ ವಿಶ್ಲೇಷಣೆ

೩.೫ ಕನ್ನಡ ಸಾಹಿತ್ಯ ಸಂಸ್ಕೃತಿ ವಿಮರ್ಶೆ ಇಟ್ಟ ಹೆಜ್ಜೆ ತೊಟ್ಟ ರೂಪ

೩.೫.೧ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯ ಧೋರಣೆಗಳು

೩.೫.೨ ನವೋದಯ ವಿಮರ್ಶೆ

೩.೫.೩ ಪ್ರಗತಿಶೀಲ ವಿಮರ್ಶೆ

೩.೫.೪ ನವ್ಯ ವಿಮರ್ಶೆ

೩.೬ ಕನ್ನಡ ವಿಮರ್ಶೆಯ ಚಹರೆಗಳು

೩.೭ ಕನ್ನಡಕ್ಕೆ ಆದಂತಹ ವಿಮರ್ಶಾ ಮಾರ್ಗದ ಚರ್ಚೆ

ಅಧ್ಯಾಯ-೪
ಕನ್ನಡ ಸಾಹಿತ್ಯ-ಸಂಸ್ಕೃತಿ ವಿಮರ್ಶೆ: ಕಿ ರಂ. ನಾಗರಾಜ ಮಾದರಿ
೪.೧ ಕಿ. ರಂ. ನಾಗರಾಜ ಅವರ ವಿಮರ್ಶೆಯ ವೈಶಿಷ್ಟ್ಯಗಳು ಮತ್ತು ಸೈದ್ಧಾಂತಿಕ ಸಂಗತಿಗಳು
೪.೧.೧ ಕಿ. ರಂ. ನಾಗರಾಜ ಅವರ ಪ್ರಕಾರ ವಿಮರ್ಶೆ ಮತ್ತು ವಿಮರ್ಶೆಯ ವ್ಯಾಖ್ಯಾನ
೪.೧.೨ ಕಿ. ರಂ. ನಾಗರಾಜ ಅವರ ವಿಮರ್ಶೆಯ ಭಾಷೆ
೪.೧.೩ ಕಿ. ರಂ. ನಾಗರಾಜ ಮತ್ತು ನವ್ಯ ವಿಮರ್ಶೆ
೪.೧.೪ ಪರಿಮಾಣಧಾರಿತ ವಿಮರ್ಶಾ ಮಾದರಿ
೪.೧.೫ ಕಿ. ರಂ. ನಾಗರಾಜ ಮತ್ತು ವಸಾಹತು ಮನೋಧರ್ಮದ ಮುಖಾಮುಖಿ
೪.೧.೬ ಕಿ. ರಂ. ನಾಗರಾಜ ಅವರ ವಿಮರ್ಶೆಯ ಪಲ್ಲಟಗಳು
೪.೧.೭ ಕಿ. ರಂ. ನಾಗರಾಜ ಅವರ ವಿಮರ್ಶೆಯ ವಿಮರ್ಶೆ

೪.೨ ಮೌಖಿಕ ಮತ್ತು ಸಂಸ್ಕೃತಿ ವಿಮರ್ಶಾ ಮಾದರಿಗಳ ವಿವೇಚನೆ
೪.೨.೧ ಕಿ. ರಂ. ನಾಗರಾಜ ಅವರ ಮೌಖಿಕ ವಿಮರ್ಶೆಯ ತೋಂಡಿ ಮಾರ್ಗದ ಮಾದರಿ
೪.೨.೨ ಸಂಸ್ಕೃತಿ ವಿಮರ್ಶೆ ಮತ್ತು ಕಿ. ರಂ. ನಾಗರಾಜ ಮಾದರಿ

೪.೩ ಬೋಧಕ ವಿಮರ್ಶೆ ಮತ್ತು ಉಪನ್ಯಾಸದ ಮಾದರಿಗಳ ವಿವೇಚನೆ
೪.೩.೧ ಕಿ. ರಂ. ನಾಗರಾಜ ಅವರ ಬೋಧನೆಯ ಮಾದರಿ ಮತ್ತು ಬೋಧಕ ವಿಮರ್ಶೆ
೪.೩.೨ ಕಿ. ರಂ. ನಾಗರಾಜ ಅವರ ಉಪನ್ಯಾಸದ ಮಾದರಿ
೪.೩.೩ ಪೂರ್ವಪಕ್ಷದ ನಿರ್ಮಾಣ
೪.೩.೪ ಪ್ರದರ್ಶನಾತ್ಮಕ ವಿಮರ್ಶಾ ಮಾದರಿ

೪.೪ ಮೀಮಾಂಸೆಯ ವಿನ್ಯಾಸಗಳ ಮಾದರಿ
೪.೪.೧ ಕನ್ನಡ ಕಾವ್ಯಮೀಮಾಂಸೆಯ ಪ್ರಶ್ನೆ ಮತ್ತು ಕಿ. ರಂ. ನಾಗರಾಜ ಮಾದರಿ
೪.೪.೨ ಕಿ. ರಂ. ನಾಗರಾಜ ಮತ್ತು ಅನೇಕಾಂತವಾದದ ಮಾದರಿ

೪.೫ ಓದು ಮತ್ತು ಪಠ್ಯ- ವಿಮರ್ಶಾ ಮಾದರಿ
೪.೫.೧ ಕಿ. ರಂ. ನಾಗರಾಜ ಓದಿನ ಮಾದರಿ
೪.೫.೨ ಕಿ. ರಂ. ನಾಗರಾಜ ಅವರ ಕಾವ್ಯ ಓದಿನ ಮಾದರಿ
೪.೫.೩ ನವಪಠ್ಯ ಮತ್ತು ಪಾಠಾಂತರದ ನೆಲೆ

೪.೬ ಪ್ರಕಾರ ವಿಮರ್ಶೆಯ ವಿನ್ಯಾಸಗಳು
೪.೬.೧ ಮುನ್ನುಡಿ ಎಂಬ ವಿಮರ್ಶೆ ಮಾದರಿ
೪.೬.೨ ಪುಸ್ತಕ ವಿಮರ್ಶೆ ಮತ್ತು ಕಿ. ರಂ. ನಾಗರಾಜ ಮಾದರಿ

ಅಧ್ಯಾಯ-೫

ಕಿ. ರಂ. ನಾಗರಾಜ ಮತ್ತು ಕಾವ್ಯ ವಿಮರ್ಶೆಯ ವಿಶ್ಲೇಷಣೆ

೫.೧ ಕಿ. ರಂ ನಾಗರಾಜ ಅವರ ಕಾವ್ಯ ವಿಮರ್ಶೆಯ ಸ್ವರೂಪ
೫.೨ ಅಭಿಜಾತ ಕನ್ನಡ ಕಾವ್ಯ ವಿಮರ್ಶೆ
೫.೩ ಮಧ್ಯಕಾಲೀನ ಕನ್ನಡ ಕಾವ್ಯ ವಿಮರ್ಶೆ
೫.೪ ಜನಪದ ಕಾವ್ಯ ವಿಮರ್ಶೆ

೫.೫ ಆಧುನಿಕ ಕನ್ನಡ ಕಾವ್ಯ ವಿಮರ್ಶೆ
೫.೫.೧ ಬೇಂದ್ರೆ ಕಾವ್ಯ ವಿಮರ್ಶೆ
೫.೫.೨ ಕುವೆಂಪು ಕಾವ್ಯ ವಿಮರ್ಶೆ
೫.೫.೩ ಗೋಪಾಲಕೃಷ್ಣ ಅಡಿಗ ಕಾವ್ಯ ವಿಮರ್ಶೆ
೫.೫.೪ ಸಿದ್ಧಲಿಂಗಯ್ಯ ಕಾವ್ಯ ವಿಮರ್ಶೆ
೫.೫.೫ ಇತರ ಕನ್ನಡ ಕವಿಗಳ ಕಾವ್ಯ ವಿಮರ್ಶೆ
೫.೬ ಜಾಗತಿಕ ಸಾಹಿತ್ಯ ಮತ್ತು ಕಿ.ರಂ ನಾಗರಾಜ ವಿಮರ್ಶೆ

ಅಧ್ಯಾಯ–೬
ಕಿ. ರಂ. ನಾಗರಾಜ ಸಾಹಿತ್ಯ ಸಂಸ್ಕೃತಿ ವಿಮರ್ಶಾ ವಾಗ್ವಾದಗಳ ಮಾದರಿ
೬. ೧. ರಾಜಕೀಯ, ಸಾಹಿತ್ಯ ಮತ್ತು ಸಾಂಸ್ಕೃತಿಕ ವಾಗ್ವಾದ ಮತ್ತು ವಿಮರ್ಶೆ
೬.೧.೧. ಸಾಮಾಜಿಕ ಪ್ರಶ್ನೆಯ ಸ್ವರೂಪ
೬.೧.೨ ಕಿ. ರಂ. ನಾಗರಾಜ ಅವರ ರಾಜಕೀಯ ಸೈದ್ಧಾಂತಿಕ ಪ್ರಜ್ಞೆ
೬.೧.೩ ಗೋಕಾಕ್ ಚಳುವಳಿಯ ವಾಗ್ವಾದ
೬.೧.೪ ಸರಕಾರಿ ಶಾಲೆಯಲ್ಲಿ ಇಂಗ್ಲಿಶ್ ಶಿಕ್ಷಣ
೬.೧.೫ ತಾಳಮದ್ದಳೆ ಕಲೆಯಲ್ಲ – ಒಂದು ವಾಗ್ವಾದ
೬.೧.೬ ಸಂಸ್ಕೃತ ವಿಶ್ವವಿದ್ಯಾನಿಲಯ ವಾಗ್ವಾದ
೬.೧.೭ ಪುರೋಹಿತಶಾಹಿತ್ವಕ್ಕೆ ಮುಖಾಮುಖಿ
೬.೧.೮ ಸಾರಾಯಿ ನಿಷೇಧ
೬.೧.೯ ಪ್ರತಿಷ್ಠಿತ ಶಕ್ತಿಗಳಿಗೆ ಮುಖಾಮುಖಿ
೬.೧.೧೦ ನಕ್ಸಲ್ ಚಟುವಟಿಕೆಯ ಕುರಿತ ನಿಲುವು
೬.೧.೧೧ ಆಪತ್ಕಾಲೀನ ಕವಿತೆಗಳು
೬.೧.೧೨ ಅಕ್ಷರ ಹೊಸ ಕಾವ್ಯದ ಚರ್ಚೆ

ಅಧ್ಯಾಯ–೭
ಕಿ. ರಂ ನಾಗರಾಜ ಅವರನ್ನು ಕನ್ನಡ ಜಗತ್ತು ಕಂಡ ನೆಲೆ
೭.೧ ಕಿ. ರಂ. ನಾಗರಾಜ ಅವರ ಕುರಿತು ಕನ್ನಡ ಕಾವ್ಯಾಭಿವ್ಯಕ್ತಿಯ ಮಾದರಿ
೭.೨ ಕಿ. ರಂ. ನಾಗರಾಜ ಅವರ ಕುರಿತು ಕನ್ನಡ ಸಾಹಿತಿಗಳ ಅಭಿಪ್ರಾಯಗಳು
೭.೩ ಕಿ. ರಂ ನಾಗರಾಜ ಕೇಂದ್ರಿತ ಸಂಸ್ಥೆಗಳು ಮತ್ತು ನೆನಪಿನ ಕಾರ್ಯಕ್ರಮಗಳು

ಸಮಾರೋಪ

ಅನುಬಂಧಗಳು
ಅನುಬಂಧ ೧:
ಛಾಯಾಚಿತ್ರಗಳು
ಅನುಬಂಧ ೨:
ಪರಾಮರ್ಶನ ಗ್ರಂಥಗಳು
ಅನುಬಂಧ ೩:
ನಿಯತಕಾಲಿಕೆಗಳು
ಅನುಬಂಧ ೪:

ಅಂತರ್ಜಾಲ ಮಾಹಿತಿಗಳು
ಅನುಬಂಧ ೫:
ಸಂದರ್ಶನದ ವಿವರ
ಅನುಬಂಧ ೬:
ವಿಚಾರ ಸಂಕಿರಣದ ಭಾಷಣಗಳು
ಅನುಬಂಧ ೭:
ಸಾಹಿತ್ಯಕ ಕಾರ್ಯಕ್ರಮದ ದಾಖಲಾತಿಗಳು

ಕಿ. ರಂ. ನಾಗರಾಜ ಅವರ ಪರಿಚಯ

ಕಿ. ರಂ. ನಾಗರಾಜ ಅವರು ಕನ್ನಡದ ಹೆಸರಾಂತ ವಿಮರ್ಶರಲ್ಲಿ ಓರ್ವರು. ಅರಕಲಗೋಡು ತಾಲ್ಲೂಕಿನ ಕಿತ್ತಾನೆ ರಂಗಪ್ಪ ಮತ್ತು ಸುಬ್ಬಲಕ್ಷ್ಮಮ್ಮ ದಂಪತಿಗಳ ಹಿರಿಯ ಮಗನಾಗಿ ೧೯೪೩ ಡಿಸೆಂಬರ್ ೨೫ರಂದು ಜನಿಸಿದರು. ತಂದೆ ತೋಟದ ರಂಗಪ್ಪನವರು ಗಂಧದ ಕಡ್ಡಿ ಮತ್ತು ಸುಗಂಧ ವ್ಯಾಪಾರಿಗಳಾಗಿದ್ದರು, ಜೊತೆಗೆ ಕೃಷಿಕರೂ ಆಗಿದ್ದರು. ಕನ್ನಡ ಅಧ್ಯಾಪಕಿ ಮತ್ತು ಅನುವಾದಕಿ ಶ್ರೀಮತಿ ವಿಜಯಲಕ್ಷ್ಮಿ ಅವರು ಕಿ ರಂ. ನಾಗರಾಜ ಅವರ ಬಾಳಸಂಗಾತಿ. ಸಹನ, ಕವನ ಮತ್ತು ಚಂದನ ಕಿ ರಂ ನಾಗರಾಜ ಅವರ ಪುತ್ರಿಯರು.

ಕಿ.ರಂ ನಾಗರಾಜ ಅವರು ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿ ಪಡೆದರು. ನಂತರ ಹಾಸನದಲ್ಲಿ ವ್ಯಾಸಂಗ. ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ ಎ ಪದವಿ ಮತ್ತು ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ ಎ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಕೆಲವು ವರ್ಷ ಕನ್ನಡ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. ಮೂವತ್ತು ವರ್ಷಗಳ ಕಾಲ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಎರಡು ವರ್ಷಗಳ ಕಾಲ ಹಂಪಿ ಕನ್ನಡ ವಿಶ್ವವಿದಾಲಯದಲ್ಲಿ ಪ್ರಾಧ್ಯಾಪಕರಾಗಿಯೂ, ಬೆಂಗಳೂರಿನ ಕನ್ನಡ ವಿಶ್ವವಿದ್ಯಾಲಯದ ಕಾವ್ಯಮಂಡಲ ಸಂಸ್ಥೆಯ ನಿರ್ದೇಶಕರಾಗಿ ಹಲವು ಸಂಶೋಧನಾರ್ಥಿಗಳಿಗೆ ಎಂ. ಫಿಲ್ ಪಿಎಚ್.ಡಿ ಪದವಿಗೆ ಮಾರ್ಗದರ್ಶಕರಾಗಿದ್ದಾರೆ. ಬೆಂಗಳೂರಿನ ನ್ಯಾಷನಲ್ ಕಾಲೇಜು, ಜೈನ್ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯ ಅಕಾಡೆಮಿ, ವಿಶ್ವವಿದ್ಯಾಲಯಗಳ ಪಠ್ಯರಚನಾ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ ಅನುಭವವನ್ನು ಹೊಂದಿದ್ದಾರೆ.

ಕಿ. ರಂ. ನಾಗರಾಜ ಅವರು ನೀಗಿಕೊಕೊಂಡ ಸಂಸ, ಕಾಲಜ್ಞಾನಿ ಕನಕ ಎಂಬ ನಾಟಕಗಳನ್ನು ರಚಿಸಿದ್ದಾರೆ. ಪ್ರತಿಷ್ಠಿತ ಶಕ್ತಿ ಮತ್ತು ಕನ್ನಡ ಸಾಹಿತ್ಯ ಎಂಬ ಸಂಸ್ಕೃತಿ ಚಿಂತನೆಯ ಕಿರು ಹೊತ್ತಿಗೆ, ತೆರೆದ ಪಠ್ಯ (ಸಂ: ನಟರಾಜ್ ಹುಳಿಯಾರ್), ಮತ್ತೆ ಮತ್ತೆ ಬೇಂದ್ರೆ (ಸಂ: ಅಕ್ಷತಾ ಕೆ), ನುಡಿ ಬೆಡಗು (ಸಂ:ಡಾ ಶಿವರಾಜ ಬ್ಯಾಡರಹಳ್ಳಿ) ಎಂಬ ಕಿ. ರಂ. ನಾಗರಾಜ ಅವರ ಬರಹಗಳ ಸಂಕಲನವನ್ನು ಕಾಣಬಹುದು.

ವಚನ ಕಮ್ಮಟ, ಆಪತ್ಕಾಲೀನ ಕವಿತೆಗಳು, ಮಧ್ಯಕಾಲೀನ ಕನ್ನಡ ಕವಿತೆಗಳು (೧೯೭೭) ಸಮಾಜವಾದಿ ಆಚಾರ್ಯ, ಅಂಟಿದ ನಂಟು, ರಸೌಷಧಿ, ಸಿಂಹಾಲೋಕ, ಕುವೆಂಪು ನುಡಿಚಿತ್ರ, ಬಹುರೂಪಿಯಂತಹ ಕೃತಿಗಳ ಸಂಪಾದನೆಯನ್ನು ಮಾಡಿದ್ದಾರೆ. ಭಾಸನ ಮಧ್ಯಮ ವ್ಯಾಯೋಗವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. (ಇದರ ಪ್ರತಿಯು ಕಳೆದುಹೋಗಿದೆ)

ನೂರಕ್ಕೂ ಅಧಿಕ ಲೇಖನಗಳು ಮುನ್ನುಡಿ, ಬೆನ್ನುಡಿಗಳನ್ನು ಬರೆದದ್ದು ಮಾತ್ರವಲ್ಲದೆ ನಾಡಿನಾದ್ಯಂತ ಸಾವಿರಾರು ಉಪನ್ಯಾಸಗಳ ಮೂಲಕ ಹಲವಾರು ಕಮ್ಮಟಗಳ ಸಂಯೋಜಕರಾಗಿ ತಮ್ಮ ವಿಶಾಲ ಜ್ಞಾನ ಪರಂಪರೆಯನ್ನು ಇಡೀ ಕನ್ನಡ ಸಾಹಿತ್ಯಕ್ಕೆ ಧಾರೆ ಎರೆಯುವ ಕಾರ್ಯವನ್ನು ಮಾಡಿದ್ದಾರೆ. ಸಾವಿರಾರು ಸಾಹಿತ್ಯದ ವಿದ್ಯಾರ್ಥಿಗಳಿಗೆ ಅಧ್ಯಾಪನ ಮಾಡಿರುವ ಕಿ.ರಂ. ನಾಗರಾಜ ಅವರು ಕನ್ನಡದ ಶ್ರೇಷ್ಠ ವಿಮರ್ಶಕರನ್ನು, ಪ್ರಾಧ್ಯಾಪಕರನ್ನು, ಉನ್ನತ ಅಧಿಕಾರಿಗಳನ್ನು ಸೃಷ್ಟಿಸುವ ಕಾರ್ಯವನ್ನು ಮಾಡಿದ್ದಾರೆ.

ಕಿ.ರಂ.ನಾಗರಾಜ ಅವರಿಗೆ ವಿಮರ್ಶಾ ಕ್ಷೇತ್ರದ ಅದಮ್ಯ ಸಾಧನೆಗಾಗಿ ಡಾ. ಜಿ.ಎಸ್ ಶಿವರುದ್ರಪ್ಪ ಪ್ರಶಸ್ತಿ, ಡಾ. ಎಲ್ ಬಸವರಾಜು ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಫೆಲೋ, ಕೆಂಪೇಗೌಡ ಪ್ರಶಸ್ತಿ, ಕನ್ನಡ ಪುಸ್ತಕ ಪ್ರಾಧಿಕಾರದ ಜಿ.ಪಿ ರಾಜರತ್ನಂ ಸಾಹಿತ್ಯ

ಪರಿಚಾರಕ ಪ್ರಶಸ್ತಿ, ಎಸ್ ವಿ ಪರಮೇಶ್ವರ ಭಟ್ಟ ಪ್ರಶಸ್ತಿ, ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ, ಮಾನು ಪ್ರಶಸ್ತಿಗಳು ಹಾಗೂ ೨೦೦೭ರ ಹಾಸನ ಜಿಲ್ಲೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವು ಸಂದಿವೆ.

೨೦೧೧ರಲ್ಲಿ ಸಂಚಯ ಸಾಹಿತ್ಯ ಸಂಸ್ಕೃತಿ ದ್ವೈಮಾಸಿಕವು ತನ್ನ ೮೮-೮೯ನೆಯ ಸಂಯುಕ್ತ ಸಂಚಿಕೆಯನ್ನು ಕಿ.ರಂ. ನಾಗರಾಜ ವಿಶೇಷಾಂಕವಾಗಿ ರೂಪಿಸಿದೆ. ಇಲ್ಲಿ ಅವರ ಬಿಡಿ ಲೇಖನಗಳು ಮತ್ತು ಅವರ ಕುರಿತು ಕನ್ನಡದ ವಿಮರ್ಶಕರು ಮಂಡಿಸಿರುವ ವಿಮರ್ಶಾ ಬರಹಗಳನ್ನು ಕಾಣಬಹುದು. ೨೦೧೪ರ 'ಕಾಡುವ ಕಿರಂ' ಕಾರ್ಯಕ್ರಮದ ನೆನಪಿಗಾಗಿ ಸಂಸ ರಂಗಪತ್ರಿಕೆಯು ತನ್ನ ಏಳನೆಯ ಸಂಪುಟವನ್ನು ಕಿ.ರಂ ನಾಗರಾಜ ವಿಶೇಷಾಂಕವಾಗಿ ರೂಪಿಸಿದೆ. 'ಕಾಡುವ ಕಿರಂ' ನೆನಪಿಗಾಗಿ ೨೦೧೭, ೨೦೧೮, ೨೦೧೯ರಲ್ಲಿ ಯುವ ತಲೆಮಾರಿನ ಹೊಸ ಕವಿತೆಗಳನ್ನು 'ಕಿರಂ ಹೊಸ ಕವಿತೆಗಳು' ಎಂಬ ಶಿರ್ಷಿಕೆಯಲ್ಲಿ ಪ್ರಕಟಿಸಲಾಗಿದೆ. ಕೋವಿಡ್ ಕಾರಣದಿಂದಾಗಿ ೨೦೨೦ರಲ್ಲಿ ಕಿರಂ ಹೊಸ ಕವಿತೆಗಳು ಕೃತಿಯು ಬಿಡುಗಡೆಯಾಗಿಲ್ಲ.

ಕಿ. ರಂ. ನಾಗರಾಜ ಅವರ ಕುರಿತು ನಿಜದ ನಾಡೋಜ (ಸಂ: ಪ್ರದೀಪ್ ಮಾಲ್ಗುಡಿ) ಶಿಶು ಕಂಡ ಕನಸು (ಡಾ.ಟಿ ಎನ್ ವಾಸುದೇವ ಮೂರ್ತಿ), ಮಿನಿ ಸೆಂಟ್ರಲ್ ಲೈಬ್ರರಿ ಕಿರಂ (ಪುಂಡಲೀಕ ಕಲ್ಲಿಗನೂರು), ಕಿರಂ ನಾಗರಾಜ (ಎಲ್ ಎನ್ ಮುಕುಂದರಾಜ್), ಕಿರಂ ಲೋಕ (ಶೂದ್ರ ಶ್ರೀನಿವಾಸ) ಎಂಬ ಕೃತಿಗಳು ಪ್ರಕಟವಾಗಿದೆ. ಮಾತ್ರವಲ್ಲ ಕಿ. ರಂ. ನಾಗರಾಜ ಅವರ ವಿಮರ್ಶೆಯ ಕುರಿತು ನೂರಕ್ಕೂ ಅಧಿಕ ಬಿಡಿ ವಿಮರ್ಶಾ ಬರಹಗಳು, ಹಲವಾರು ಭಾಷಣಗಳ ತುಣುಕುಗಳು, ಅಭಿಪ್ರಾಯ ಮಂಡನೆಗಳು, ಚರ್ಚೆಗಳು ಅಭಿವ್ಯಕ್ತಗೊಂಡಿರುವುದನ್ನು ಗಮನಿಸಬಹುದು. ಅವರು ಅಗಸ್ಟ್ ೭, ೨೦೧೦ ರಂದು ಇಹಲೋಕ ತ್ಯಜಿಸಿದರು.

ಪ್ರಸ್ತಾವನೆ

ಕನ್ನಡ ಸಾಹಿತ್ಯ-ಸಂಸ್ಕೃತಿ ವಿಮರ್ಶಕರು ತಮ್ಮದೇ ಆದ ಮಾದರಿಗಳನ್ನು, ಮಾರ್ಗಗಳನ್ನು ರೂಪಿಸಿಕೊಂಡಿರುವುದನ್ನು ಸಾಹಿತ್ಯ ವಿಮರ್ಶೆಯ ಚಾರಿತ್ರಿಕ ಬೆಳವಣಿಗೆಯನ್ನು ಗಮನಿಸುವ ಮೂಲಕ ಅರ್ಥಮಾಡಿಕೊಳ್ಳಬಹುದು. ಬಿ. ಎಂ. ಶ್ರೀ ಅವರಿಂದ ಡಿ. ಆರ್. ನಾಗರಾಜ ಅವರವರೆಗಿನ ವಿಮರ್ಶಕರನ್ನು, ಶಂಬಾ ಜೋಶಿ ಅವರಿಂದ ರಹಮತ್ ತರೀಕೆರೆ ಅವರವರೆಗಿನ ಸಂಸ್ಕೃತಿ ಚಿಂತಕರನ್ನು ಕನ್ನಡ ಜಗತ್ತು ಕಂಡಿದೆ. ಮಾತ್ರವಲ್ಲ ಅವರ ಬರಹಗಳ ಮೂಲಕ ಅಚ್ಚುಕಟ್ಟಾಗಿ ಅವರ ವಿಮರ್ಶೆ ಮತ್ತು ಚಿಂತನೆಗಳನ್ನು ಗ್ರಹಿಸಿದೆ ಕೂಡ.

ಜಿ. ಎಸ್. ಶಿವರುದ್ರಪ್ಪನವರು ತಮ್ಮ ವಿಮರ್ಶೆಯ ಪೂರ್ವಪಶ್ಚಿಮ ಕೃತಿಯಲ್ಲಿ ವಿಮರ್ಶಕನ ಕುರಿತು, ವಿಮರ್ಶೆಯ ಕುರಿತು ತಮ್ಮ ನಿರೂಪಣೆಯೊಂದನ್ನು ಮುಂದಿಟ್ಟಿದ್ದಾರೆ. "ಒಂದು ಸಾಹಿತ್ಯ ಚಳವಳಿ ನಿಲುಗಡೆಯ ಬಿಂದುವನ್ನೋ, ಒಂದು ಶತಮಾನವನ್ನೋ ವಿಮರ್ಶಕ ತನ್ನ ನೆಲೆಯನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಟಿ. ಎಸ್. ಎಲಿಯಟ್ ಈ ಬಗ್ಗೆ ಹೀಗೆ ಸೂಚಿಸುತ್ತಾನೆ. ಕಾಲದಿಂದ ಕಾಲಕ್ಕೆ, ಪ್ರತಿ ನೂರು ವರ್ಷಕ್ಕೊಂದು ಸಲವೋ ಏನೋ, ವಿಮರ್ಶಕನೊಬ್ಬ ಉದಯಿಸಿ ಹಿಂದಿನ ಸಾಹಿತ್ಯವನ್ನು ಪರಿಶೀಲಿಸಿ, ಕವಿಗಳನ್ನೂ ಕೃತಿಗಳನ್ನೂ ಒಂದು ಹೊಸ ಕ್ರಮದಲ್ಲಿ ನೆಲೆಗೊಳಿಸುವುದು ಅಗತ್ಯವಾಗಿದೆ. ಈ ಒಂದು ಕಾರ್ಯ ಕ್ರಾಂತಿಗೆ ಸಂಬಂಧಿಸಿದ್ದಲ್ಲ. ಪುನರ್ ವಿಂಗಡಣೆಗೆ ಸಂಬಂಧಿಸಿದ್ದು" **(ಶಿವರುದ್ರಪ್ಪ. ಜಿ. ಎಸ್, (೨೦೧೦ – ಹತ್ತನೆಯ ಮುದ್ರಣ) ಪುಟ-೧೬)** ಅಂತೆಯೇ ಕನ್ನಡ ನವ್ಯ ಕಾಲದ ಸಾಹಿತ್ಯ ವಿಮರ್ಶೆ ಪೂರೋಗಾಮಿ ನೆಲೆಯಲ್ಲಿ ರೂಪುಗೊಳ್ಳುವ ಸಂದರ್ಭದಲ್ಲಿ ಕಿ. ರಂ. ನಾಗರಾಜ ಎಂಬ ವಿಮರ್ಶಕ ಹುಟ್ಟಿಕೊಳ್ಳುತ್ತಾರೆ. ಅವರ ಹೆಚ್ಚಿನ ವಿಮರ್ಶಾ ಒಳಹುಗಳು ಅಭಿವ್ಯಕ್ತಗೊಂಡಿದ್ದು ಮೌಖಿಕತೆಯ ತಳಹದಿಯಲ್ಲಿ. ಅಂದರೆ ಮಾತಿನ ಮೂಲಕ. ಬರಹ ತೀರಾ ಕಡಿಮೆಯೇ ಸರಿ. ಆದರೂ ಕನ್ನಡ ವಿಮರ್ಶಾ ಪರಂಪರೆಯಲ್ಲಿ ವಿಶಿಷ್ಟ ಮಾರ್ಗದ ಶೋಧನೆಯನ್ನು ಮಾಡುವಲ್ಲಿ ಕಾರ್ಯಪ್ರವೃತ್ತರಾಗಿದ್ದ ಅವರು ಇಂಗ್ಲಿಶ್ ಸಾಹಿತ್ಯವನ್ನು ಚೆನ್ನಾಗಿ ಓದಿ ಅರ್ಥಮಾಡಿಕೊಂಡಿದ್ದರು. ಆದರೆ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಪಡಿನೆರಳಾಗಿ ಕನ್ನಡ ವಿಮರ್ಶೆಯನ್ನು ಅರ್ಥಮಾಡಿಕೊಳ್ಳಲಿಲ್ಲ. ಬದಲಾಗಿ ಸ್ವತಂತ್ರವಾದ ವಿಮರ್ಶಾಧಾರೆಯನ್ನು ಕನ್ನಡದಲ್ಲಿ ರೂಪಿಸುವ ಪ್ರಯತ್ನಕ್ಕೆ ಮುಂದಾದರು. ಇದೇ ಕಾರಣದಿಂದಾಗಿ ಅವರ ವಿಮರ್ಶೆಯ ಮಾದರಿಗಳ ಅಧ್ಯಯನವು ಸಂಶೋಧನಾ ಯೋಗ್ಯ ವಿಷಯವಾಗಿದೆ. ಮಾತ್ರವಲ್ಲ ಪ್ರಮೇಯ ಕೇಂದ್ರಿತ ತಾತ್ತ್ವಿಕತೆಯನ್ನು ರೂಪಿಸಿಕೊಳ್ಳುವ ಸವಾಲು ಕೂಡ ಈ ಸಂಶೋಧನಾ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಪ್ರೇರೇಪಿಸಿದೆ.

ವಿಮರ್ಶೆಯನ್ನು, ವಿಮರ್ಶಕನನ್ನು ಆಧರಿಸಿ ಕನ್ನಡದಲ್ಲಿ ಈಗಾಗಲೇ ಹಲವಾರು ಅಧ್ಯಯನಗಳು ರೂಪುಗೊಂಡಿವೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಗಳನ್ನು ಆಕರವಾಗಿಸಿಕೊಂಡ ಈ ಅಧ್ಯಯನಗಳ ಮೂಲ ಉದ್ದೇಶ ವಿಮರ್ಶಕ ಕಟ್ಟಿಕೊಟ್ಟ ವಿಮರ್ಶಾ ಸಿದ್ಧಾಂತಗಳ ಮೌಲ್ಯಮಾಪನವನ್ನು ನಿರ್ವಹಿಸುವುದೇ ಆಗಿದೆ. ಆದರೆ ನನ್ನ ಅಧ್ಯಯನದಲ್ಲಿ ಕಿ. ರಂ. ನಾಗರಾಜ ಎಂಬ ವಿಮರ್ಶಕನ ವಿಮರ್ಶಾ ಮಾದರಿಗಳನ್ನು ಶೋಧಿಸಿ ನಂತರದಲ್ಲಿ ಮೌಲ್ಯಮಾಪನ ಪ್ರಕ್ರಿಯೆಗೆ ಒಳಪಡಿಸುವುದೇ ಆಗಿದೆ.

ಅಧ್ಯಯನದ ಉದ್ದೇಶ

ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿರುವ ಈ ಅಧ್ಯಯನದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಆಕರವಾಗಿಸಿ ವಿಮರ್ಶೆಯನ್ನು ಶೋಧನೆಯ ಮಾರ್ಗವಾಗಿ ರೂಪಿಸಲಾಗಿದೆ.

ಶೋಧನೆಯಿಂದ ದೊರೆತ ಫಲಿತಗಳೇ ಕಿ. ರಂ. ನಾಗರಾಜ ಅವರ ವಿಮರ್ಶೆಯ ಮಾದರಿಯಾಗಿ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಒಟ್ಟು ಕಿ. ರಂ. ನಾಗರಾಜ ಅವರು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ವಿಮರ್ಶೆಗೆ ನೀಡಿದ ಮಾದರಿಗಳ ಶೋಧವನ್ನು ಕಂಡುಕೊಳ್ಳುವುದೇ ಈ ಅಧ್ಯಯನದ ಮೂಲ ಉದ್ದೇಶ. ಜೊತೆಗೆ ಅವರ ಸಾಹಿತ್ಯ ಸಂಸ್ಕೃತಿ ವಿಮರ್ಶೆಯ ವಸ್ತುನಿಷ್ಠವಾದ ಅನಾವರಣ ಮಾಡುತ್ತಲೇ ಲಿಖಿತ ಮತ್ತು ಮೌಖಿಕ ಆಕರಗಳ ಸಂಗ್ರಹದ ಮೂಲಕ ಹೊಸಬಗೆಯ ಸಾಂಪ್ರದಾಯಿಕ ವಿಮರ್ಶಾ ಮಾದರಿಗಳನ್ನು ಭಿನ್ನವಾಗಿಸಿಕೊಂಡ ದೃಷ್ಟಿಕೋನವನ್ನು ಕಟ್ಟಿಕೊಡುವುದು ಸಹ ಈ ಅಧ್ಯಯನದ ಉದ್ದೇಶ. ಆ ಮೂಲಕ ಪ್ರಮೇಯವೇ ಇಡೀ ಅಧ್ಯಯನದ ಕೇಂದ್ರನೆಲೆಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲಾಗಿದ್ದು, ಆ ಪ್ರಮೇಯಗಳ ಮೂಲಕ ಕಿ. ರಂ. ನಾಗರಾಜ ಅವರ ವಿಮರ್ಶೆಯನ್ನು ತಾತ್ತ್ವಿಕಗೊಳಿಸುವ ಸಣ್ಣದೊಂದು ಪ್ರಯತ್ನವನ್ನು ಈ ಸಂಶೋಧನೆಯ ಮೂಲಕ ಕಾಣಿಸಲಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಕಿ. ರಂ. ನಾಗರಾಜ ಎಂಬ ಕನ್ನಡದ ಸಾಹಿತ್ಯ ಸಂಸ್ಕೃತಿ ಚಿಂತಕ- ವಿಮರ್ಶಕನ ಬಗ್ಗೆ ಯಾವುದೇ ಪೂರ್ವಯೋಜಿತ ಸಂಶೋಧನೆಗಳು ನಡೆದಿರುವುದಿಲ್ಲ. ಆ ಕೊರತೆಯನ್ನು ಈ ಅಧ್ಯಯನ ಸ್ವಲ್ಪಮಟ್ಟಿಗೆ ನಿವಾರಿಸುವ ಪ್ರಯತ್ನವನ್ನು ಮಾಡುತ್ತದೆ; ಮಾತ್ರವಲ್ಲ ಇದು ಕೂಡ ಸಂಶೋಧನೆಯ ಮೂಲ ಉದ್ದೇಶಗಳಲ್ಲಿ ಒಂದು ಎಂಬುದನ್ನು ಇಲ್ಲಿ ಸ್ಪಷ್ಟಪಡಿಸುತ್ತೇನೆ.

ಅಧ್ಯಯನದ ವ್ಯಾಪ್ತಿ

ಇಡೀ ಸಂಶೋಧನೆಯು ಕಿ. ರಂ. ನಾಗರಾಜ ಅವರ ಸಾಹಿತ್ಯ ಸಂಸ್ಕೃತಿ ವಿಮರ್ಶೆ ಮತ್ತು ಆ ಮೂಲಕ ಕಟ್ಟಲ್ಪಡುವಂತಹ ಮಾದರಿಯನ್ನೇ ಸಂಶೋಧನಾ ವ್ಯಾಪ್ತಿಯನ್ನಾಗಿ ರೂಪಿಸಿಕೊಂಡಿದೆ. ಒಟ್ಟು ಅಧ್ಯಯನವು ಸಾಹಿತ್ಯಚರಿತ್ರೆಯ ಸರಳ ಮಾದರಿಗಳಾದ ಅಭಿಜಾತ, ಅನುಭಾವ, ಆಧುನಿಕತೆಯಲ್ಲಿ ಕಾವ್ಯ ಮತ್ತು ನಾಟಕ ಪ್ರಕಾರಗಳನ್ನು ಕಿ. ರಂ. ನಾಗರಾಜ ಅವರ ಬರಹ ಮತ್ತು ಭಾಷಣಗಳ ಹಿನ್ನೆಲೆಯಲ್ಲಿ ವ್ಯಾಪ್ತಿಯನ್ನಾಗಿಸಿಕೊಂಡಿದೆ.

ಕನ್ನಡ ಸಾಹಿತ್ಯ ವಿಮರ್ಶೆಯ ಜೊತೆಗೆ ಪಾಶ್ಚಾತ್ಯ, ಮತ್ತು ಸಂಸ್ಕೃತ ಕಾವ್ಯ ಮೀಮಾಂಸೆಯ ವಿವಿಧ ಪ್ರಸ್ಥಾನಗಳನ್ನು ಅಧ್ಯಯನದ ವ್ಯಾಪ್ತಿಯಾಗಿ ನಿಗದಿಪಡಿಸಲಾಗಿದೆ. ಬಹುಮುಖ್ಯವಾಗಿ ಕಿ. ರಂ. ನಾಗರಾಜ ಅವರ ಚಿಂತನಾ ಮಾದರಿಗಳನ್ನು ಜನಪದ ಮತ್ತು ಆಧುನಿಕ ಪರಂಪರೆಗಳಲ್ಲಿನ ಕೆಲವು ಮಾದರಿಗಳ ಜೊತೆಗೆ ಅನುಸಂಧಾನ ಮಾಡುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ. ಕಿ. ರಂ. ನಾಗರಾಜ ಅವರು ಕನ್ನಡ ಸಾಂಸ್ಕೃತಿಕ ಚಹರೆಗಳೊಂದಿಗೆ ಮುಖಾಮುಖಿಯಾದ ಹಲವು ವಾಗ್ವಾದಗಳನ್ನು ಈ ಅಧ್ಯಯನದ ವ್ಯಾಪ್ತಿಯಾಗಿ ಗುರುತಿಸಬಹುದು. ಕಿ. ರಂ. ನಾಗರಾಜ ಅವರನ್ನು ಕಂಡ ಕನ್ನಡ ಜಗತ್ತನ್ನು, ಆ ಕಾಲದ ಸಾಹಿತಿಗಳನ್ನು, ರಾಜಕೀಯ ಪ್ರಜ್ಞೆಯನ್ನು, ಸಾಮಾಜಿಕ ಆಯಾಮಗಳನ್ನು ವ್ಯಾಪ್ತಿಯಾಗಿ ಪರಿಗಣಿಸಲಾಗಿದೆ. ಕಿ. ರಂ. ನಾಗರಾಜ ಅವರು ನಮ್ಮ ಜೊತೆಗೆ ಇಲ್ಲದಿರುವುದರಿಂದ ಕ್ಷೇತ್ರಕಾರ್ಯದ ಮೂಲಕ ಕಿ. ರಂ. ನಾಗರಾಜ ಅವರ ಒಡನಾಡಿಗಳು, ಸ್ನೇಹಿತರು, ವಿದ್ಯಾರ್ಥಿಗಳು, ಕುಟುಂಬದವರನ್ನು ಸಂದರ್ಶನ ಮಾಡಿ ಮಾಹಿತಿ ಸಂಗ್ರಹಣೆ ಮಾಡಿ ಆ ಮಾಹಿತಿಗಳ ಮೂಲಕವೇ ಒಂದಿಷ್ಟು ಮಾದರಿಗಳ ಶೋಧವನ್ನು ಮಾಡಲಾಗಿದೆ.

ಅಧ್ಯಯನದ ವಿಧಾನ ಕ್ರಮಗಳು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ ಕ್ರಮ ಇವೆಲ್ಲವೂ ಒಂದಕ್ಕೊಂದು ಸಂಬಂಧಿಸಿದವುಗಳಾಗಿವೆ. ಹಾಗಾಗಿಯೇ ಇವು ಒಂದನ್ನೊಂದು ನಿರ್ಧರಿಸುತ್ತವೆ, ನಿರೂಪಿಸುತ್ತವೆ,

ಸಂಘಟಿಸುತ್ತವೆ, ಸಂಯೋಜಿಸುತ್ತವೆ. ಯಾವುದೇ ಒಂದು ಅಧ್ಯಯನದ ವಸ್ತುವನ್ನು ಒಂದು ನಿರ್ದಿಷ್ಟ ತಾತ್ತ್ವಿಕತೆಯ ಆಧಾರದಲ್ಲಿ ಅಥವಾ ವಿಧಾನ ಕ್ರಮದ ವಿನ್ಯಾಸದಲ್ಲಿ ವಿಶ್ಲೇಷಿಸಲು ಸಾಧ್ಯ ಎಂಬ ನಂಬಿಕೆಯು ಈಗ ಇಲ್ಲ. ಬದಲಾಗಿ ಇತ್ತೀಚಿನ ಅಧ್ಯಯನಗಳು ಬಹುಶಿಸ್ತೀಯ ಅಧ್ಯಯನಗಳಾಗಿ ಮಾತ್ರ ಕಾಣಿಸದೆ ಬಹು ಸೈದ್ಧಾಂತಿಕ ಅಧ್ಯಯನಗಳಾಗಿ ಮಾರ್ಪಟ್ಟಿವೆ. ಈ ಹಿನ್ನೆಲೆಯಲ್ಲಿ ಕಿ. ರಂ. ನಾಗರಾಜ ಅವರ ವಿಮರ್ಶೆಯನ್ನು ಸಾಹಿತ್ಯ ಮತ್ತು ಸಂಸ್ಕೃತಿಯ ಪರಿಪ್ರೇಕ್ಷೆಯಲ್ಲಿಟ್ಟು ತಾತ್ವಿಕ ಮತ್ತು ಸೈದ್ಧಾಂತಿಕ ವಿವೇಚನೆಗಳನ್ನು ಬಳಸಿಕೊಂಡು ವಿವರಿಸುವ ವಿಶ್ಲೇಷಿಸುವ, ವಿಮರ್ಶಿಸುವ, ಸಾಬೀತುಪಡಿಸುವ, ಸಂಯೋಜಿಸುವ, ಸಂಘಟಿಸುವ, ತೌಲನಿಕಗೊಳಿಸುವ, ಮಾನದಂಡಗಳನ್ನು ಮುಂದಿಡುವ, ಮೌಲ್ಯಮಾಪನಕ್ಕೆ ಮುಂದಾಗುವ ಹಲವು ಬಗೆಯ ಸಂಶೋಧನಾ ವೈಧಾನಿಕತೆಯನ್ನು ಇಡೀ ಅಧ್ಯಯನದೊಳಗೆ ಪ್ರಜ್ಞಾಪೂರ್ವಕವಾಗಿ ರೂಪಿಸುವ ಪ್ರಯತ್ನವನ್ನು ಮಾಡಲಾಗಿದೆ. ಜೊತೆಗೆ ಪ್ರಮೇಯ ರೂಪಿಸುತ್ತಲೇ ಅದನ್ನು ತಾತ್ತ್ವೀಕರೀಸುವಾಗಲೂ ಹೆಚ್ಚಾಗಿ ಊಹನಾತ್ಮಕ ಸಿದ್ಧಾಂತದ ಮೊರೆಹೋಗಲಾಗಿದೆ. ಸಾಹಿತ್ಯ ಚರಿತ್ರೆ, ಸಾಹಿತ್ಯ ವಿಮರ್ಶೆ, ಸಾಹಿತ್ಯ ಸಿದ್ಧಾಂತ ಮುಂತಾದ ತತ್ತ್ವಧಾರಿತ ವಿಚಾರಧಾರೆಗಳನ್ನು ಬಳಸಿಕೊಳ್ಳಲಾಗಿದೆ. ಜೊತೆಗೆ ಕಿ.ರಂ. ನಾಗರಾಜ ಅವರ ಚಿಂತನಾಧಾರೆಗೆ ಪೂರಕವಾಗಿ ಕನ್ನಡದ ಹಲವು ಚಿಂತಕರ, ವಿಮರ್ಶಕರ ಚಿಂತನೆಗಳನ್ನು ಬಳಸಿಕೊಂಡು ತೌಲನಿಕ ವಿಶ್ಲೇಷಣೆಗೆ ಪ್ರಯತ್ನಿಸಲಾಗಿದೆ. ಅಧ್ಯಯನಕ್ಕೆ ಪೂರಕವಾಗಿ ಸಮಾಜವಾದಿ ಚಿಂತನಾ ಮಾದರಿಗಳನ್ನು, ಅನುಭಾವ ಸಾಹಿತ್ಯ ಪರಂಪರೆಯ ಅಧ್ಯಯನಕ್ಕೆ ಪೂರಕವಾದ ಕೃತಿಗಳನ್ನು, ಸಾಂಸ್ಕೃತಿಕ ಮುಖಾಮುಖಿಯೊಂದರ ಮೂಲಕ ಕಟ್ಟಿಕೊಟ್ಟ ಹೊಸ ಬಗೆಯ ವಾಗ್ವಾದಗಳನ್ನು ಕ್ರಮಬದ್ಧವಾಗಿ ಕಿ. ರಂ. ನಾಗರಾಜರ ಜ್ಞಾನಪರ್ವದೊಂದಿಗೆ ಮುಖಾಮುಖಿಯಾಗಿಸುವ ವಿಧಾನವನ್ನು ಕಂಡುಕೊಳ್ಳಲಾಗಿದೆ. ಒಟ್ಟಿನಲ್ಲಿ ವಿಶ್ಲೇಷಣಾತ್ಮಕ, ವಿವರಣಾತ್ಮಕ, ರಚನಾತ್ಮಕ, ವಸ್ತುನಿಷ್ಠ, ವ್ಯಕ್ತಿನಿಷ್ಠ, ಅವಲೋಕನ, ಸಂದರ್ಶನ, ಮೌಲ್ಯಮಾಪನ, ತೌಲನಿಕ ಎಂಬ ಮಾದರಿಗಳನ್ನು ಈ ಅಧ್ಯಯನದೊಳಗೆ ವೈಧಾನಿಕವಾಗಿ ಅಳವಡಿಸಲಾಗಿದೆ.

ಆಕರ ಸಾಮಗ್ರಿಗಳು (ಪ್ರಕಟಿತ ಬರಹಗಳು, ಶ್ರವ್ಯ ಮತ್ತು ದೃಶ್ಯ ಭಾಷಣಗಳು, ಸಂದರ್ಶನಗಳು)

ಕಿ. ರಂ. ನಾಗರಾಜ ಅವರ ವಿಮರ್ಶಾ ಬರಹಗಳು ಮತ್ತು ಭಾಷಣಗಳನ್ನು ಪ್ರಾಥಮಿಕ ಮತ್ತು ಆನುಷಂಗಿಕ ಮಾಹಿತಿಯನ್ನಾಗಿ ಬಳಸಿಕೊಳ್ಳಲಾಗಿದೆ. ಜೊತೆಗೆ ಕಿ. ರಂ. ನಾಗರಾಜ ಅವರ ಬಿಡಿ ಬರಹಗಳ ಸಮಗ್ರ ಸಂಪಾದನೆಗಳನ್ನು ಅಧ್ಯಯನಕ್ಕಾಗಿ ಬಳಸಿಕೊಳ್ಳಲಾಗಿದೆ. ಕಿ. ರಂ. ನಾಗರಾಜ ಅವರ ಶಿಷ್ಯವೃಂದ, ಆಪ್ತರು ಅವರ ಕುರಿತು ಬರೆದ ಕೃತಿ, ಲೇಖನ, ಬರಹಗಳನ್ನು ಅಧ್ಯಯನದ ಮುಖ್ಯ ಆಕರವಾಗಿ ಬಳಸಿಕೊಳ್ಳಲಾಗಿದೆ. ಕಿ. ರಂ. ನಾಗರಾಜ ಅವರು ಭಾಷಣಗಳನ್ನು ಶ್ರವ್ಯ, ದೃಶ್ಯ, ಎಂದು ವಿಂಗಡಿಸಲಾಗಿದೆ. ಜೊತೆಗೆ ಇತರ ಸಾಹಿತ್ಯ ಕೃತಿಗಳಿಗೆ ಕಿ. ರಂ. ನಾಗರಾಜ ಅವರು ಬರೆದ ಮುನ್ನುಡಿ, ಹಿನ್ನುಡಿಗಳನ್ನು ವರ್ಗೀಕರಿಸಿ ಅಧ್ಯಯನಕ್ಕಾಗಿ ಬಳಸಿಕೊಳ್ಳಲಾಗಿದೆ. ಕನ್ನಡದ ಹೆಸರಾಂತ ನಿಯತಕಾಲಿಕೆಗಳಾದ ಸಾಕ್ಷಿ, ಶೂದ್ರ, ರುಜುವಾತು, ಸಂಕ್ರಮಣ, ಹೊಸತು, ಸಂವಾದ, ಹಂಪಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ, ಭಾಷಾಂತರ ಅಧ್ಯಯನ, ಹಸ್ತಪ್ರತಿ ಅಧ್ಯಯನಗಳಲ್ಲಿ ಪ್ರಕಟವಾದ ಕಿ. ರಂ. ನಾಗರಾಜ ಅವರ ಲೇಖನಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಗೊಂಡಿರುವ ಸಾಂಸ್ಕೃತಿಕ ಮುಖಾಮುಖಿ ಸರಣಿಯಲ್ಲಿ ಅಭಿವ್ಯಕ್ತಗೊಂಡ ಕಿ. ರಂ. ನಾಗರಾಜ ಅವರ ಬರಹಗಳನ್ನು ಆಕರವಾಗಿ ಬಳಸಿಕೊಳ್ಳಲಾಗಿದೆ. ನಿನಾಸಂ, ರಂಗಾಯಣ, ರಂಗಶಂಕರ, ಕಾವ್ಯಮಂಡಲ, ಆರ್. ಆರ್. ಸಿ ಯಂತಹ ಸಾಂಸ್ಕೃತಿಕ ಕೇಂದ್ರಗಳಲ್ಲಿ ದೊರಕಿರುವ ಕಿ. ರಂ. ನಾಗರಾಜ ಅವರ ಭಾಷಣಗಳನ್ನು ವರ್ಗೀಕರಿಸಿ ಅಭ್ಯಸಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯಗಳಲ್ಲಿ ಕಿ. ರಂ. ನಾಗರಾಜ ಅವರು ಪ್ರಾಧ್ಯಾಪಕರಾಗಿ ದುಡಿದಿರುವುದರಿಂದ ಎರಡು ವಿಶ್ವವಿದ್ಯಾಲಯಗಳ ಗ್ರಂಥಾಲಯ, ವಾರ್ಷಿಕಾಂಕಗಳನ್ನು ಪರಾಮರ್ಶಿಸಲಾಗಿದೆ. ಅಂತರ್‌ಜಾಲ ತಾಣಗಳಲ್ಲಿ ಕಿ. ರಂ. ನಾಗರಾಜರ ಕುರಿತು

ವಿಶೇಷವಾದಂತಹ ಹುಡುಕಾಟ ಮತ್ತು ಆಕರಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ. ಇವುಗಳನ್ನು ಅನುಬಂಧದ ಭಾಗದಲ್ಲಿ ಸ್ಪಷ್ಟವಾಗಿ ಲಿಂಕ್‌ಗಳನ್ನು ನೀಡುವ ಮೂಲಕ ಜೋಡಿಸಲಾಗಿದೆ.

ಪೂರ್ವಾಧ್ಯಯನ ಸಮೀಕ್ಷೆ

ಕಿ.ರಂ. ನಾಗರಾಜ ಅವರ ಕುರಿತು ಪೂರ್ಣಮಟ್ಟದ ಸಂಶೋಧನಾಧ್ಯಯನಗಳು ನಡೆದಿರುವುದಿಲ್ಲ. ಆದ್ದರಿಂದ ಅವರ ಕುರಿತು ಬಂದ ಕೃತಿಗಳನ್ನು, ಅವರ ಬರಹಗಳ ಸಂಪಾದಿತ ಗ್ರಂಥಗಳಿಗೆ ಮೌಲಿಕತೆಯನ್ನು ಹೆಚ್ಚಿಸಿದ ಸಂಪಾದಕರ ಮುನ್ನುಡಿಯ ಮಾತುಗಳನ್ನು, ಅವರ ಬಗ್ಗೆ ಬಂದಿರುವ ಕೃತಿಗಳು ಬರಹಗಳ ಕುರಿತ ವಿಸ್ತೃತವಾದ ವಿವರವನ್ನು ಈ ಭಾಗದಲ್ಲಿ ಅಡಕಗೊಳಿಸಲಾಗಿದೆ.

ತೆರೆದ ಪಠ್ಯ (ನಟರಾಜ್ ಹುಳಿಯಾರ್(ಸಂ) ೨೦೧೨, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು): ಕಿ. ರಂ ನಾಗರಾಜ ಅವರ ಕಾಲಜ್ಞಾನಿ ಕನಕ ಮತ್ತು ನೀಗಿಕೊಂಡ ಸಂಸ ಎಂಬ ಎರಡು ನಾಟಕಗಳು ಈ ಕೃತಿಯಲ್ಲಿದೆ. ಅದರ ಜೊತೆಗೆ ಕಿ. ರಂ. ನಾಗರಾಜ ಅವರು ಬರೆದ ಪ್ರಮುಖ ಲೇಖನಗಳನ್ನು ಡಾ ನಟರಾಜ್ ಹುಳಿಯಾರ್ ಈ ಕೃತಿಯಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ. ಪ್ರತಿಷ್ಠಿತ ಶಕ್ತಿ ಮತ್ತು ಕನ್ನಡ ಸಾಹಿತ್ಯ ಎಂಬ ಲೇಖನದಿಂದ ಆರಂಭವಾಗುವ ಕಿ. ರಂ. ನಾಗರಾಜರ ಬರಹ ಕವಿರಾಜಮಾರ್ಗ, ಕನ್ನಡ ಕಾವ್ಯಪರಂಪರೆ, ಮೀಮಾಂಸೆಯ ನೆಲೆ, ಪಂಪ, ಬಸವಣ್ಣ, ಮಂಟೇಸ್ವಾಮಿ, ಕುಮಾರವ್ಯಾಸರಂತಹ ದೇಸಿ ಕವಿಗಳನ್ನು ಹಾದು ಕುವೆಂಪು, ಅಡಿಗ, ಬೇಂದ್ರೆ, ಲಂಕೇಶ್, ಶಿವಪ್ರಕಾಶ್, ದೇವನೂರು ಕಡೆಗೂ ಚಲಿಸಿ ಮತ್ತೆ ಜನಪದ ಮತ್ತು ಪ್ರಸ್ತುತ ಸಂದರ್ಭದ ಹಲವು ಸಾಹಿತ್ಯಕ ವಾಗ್ವಾದಗಳ ಕಡೆಗೆ ಮುಖ ಮಾಡುವುದನ್ನು ಗುರುತಿಸಬಹುದು.

ಆ ಮೂಲಕ ಕಿ. ರಂ. ನಾಗರಾಜ ಅವರು ಪಠ್ಯಗಳನ್ನು ಪ್ರಾಚೀನ ಮಧ್ಯಕಾಲೀನ ಮತ್ತು ಆಧುನಿಕವೆಂದು ಪರಿಭಾವಿಸದೆ ಕಾಲಾತೀತವಾದ ಸಾಹಿತ್ಯವನ್ನು ಕವಿಮನಸ್ಸುಗಳ ಮಾನದಂಡವನ್ನು ಸ್ಥಾಪಿಸುವ ಪ್ರಯತ್ನವನ್ನು ಮಾಡುತ್ತಾರೆ. ಈ ಪ್ರಕ್ರಿಯೆ ಜನಪದದ ಒಳಹುಗಳನ್ನು ಬಿತ್ತುವ ಪ್ರಯತ್ನದಂತೆ ತೋರುತ್ತದೆ. ಇಡೀ ಕೃತಿಯು ಈ ನೆಲೆಯ ಲೇಖನಗಳನ್ನು ಕಟ್ಟಿಕೊಡುತ್ತದೆ. ವಿಶೇಷವೆಂದರೆ ನಟರಾಜ್ ಹುಳಿಯಾರ್ ಕಿ. ರಂ. ನಾಗರಾಜರ ಕೆಲವು ಲೇಖನಗಳಲ್ಲಿ ಒಡಮೂಡಿದ ಚರ್ಚೆಗಳನ್ನು, ಸಮಾರೋಪ ಭಾಷಣಗಳನ್ನು ಸಮ್ಮಿಳಿತಗೊಳಿಸಿದ್ದಾರೆ. ಇದೇ ಕಾರಣಕ್ಕಾಗಿ ಅಧ್ಯಯನದ ದೃಷ್ಟಿಯಿಂದ ಮೂಲ ಲೇಖನಗಳನ್ನು ಮತ್ತು ಸಂಪಾದಿತ ಲೇಖನಗಳನ್ನು ಹೆಚ್ಚಾಗಿ ಗಮನಿಸಲಾಗಿದೆ. ನಟರಾಜ್ ಹುಳಿಯಾರ್ ಅವರ ಮುನ್ನುಡಿಯು ಇಡೀ ಕೃತಿಯನ್ನು ಅರ್ಥಮಾಡಿಕೊಳ್ಳಲು ಪೂರಕವಾಗಿದೆ. ಮಾತ್ರವಲ್ಲ ಈ ಮುನ್ನುಡಿಯು ಹಲವು ಮಹತ್ವ ಪೂರ್ಣ ವಿಮರ್ಶಾ ತಾತ್ತ್ವಿಕತೆಯನ್ನು ಕಲಿಸಿಕೊಡುವ ಪ್ರಯತ್ನ ಮಾಡಿದೆ.

ಮತ್ತೆ ಮತ್ತೆ ಬೇಂದ್ರೆ (ಅಕ್ಷತ ಕೆ ಹುಂಚದಕಟ್ಟೆ (ಸಂ) ೨೦೧೫ ಅಹರ್ನಿಶಿ ಪ್ರಕಾಶನ ಶಿವಮೊಗ್ಗ): ಕಿ. ರಂ. ನಾಗರಾಜ ಅವರು ತಮ್ಮ ಬದುಕಿನುದ್ದಕ್ಕೂ ಮಾತನಾಡಿದ್ದು, ಚರ್ಚಿಸಿದ್ದು, ವಿಶ್ಲೇಷಿಸಿದ್ದು ಕಾವ್ಯದ ಬಗ್ಗೆ. ಕನ್ನಡ ಕಾವ್ಯದಲ್ಲಿಯು ಬೇಂದ್ರೆ ಎಂದರೆ ಕಿ. ರಂ. ನಾಗರಾಜ ಅವರಿಗೆ ಎಲ್ಲಿಲ್ಲದ ಆಸಕ್ತಿ ಮತ್ತು ತಲ್ಲೀನತೆ. ಈ ಕಾರಣದಿಂದಾಗಿ ಕಿ. ರಂ. ಬೇಂದ್ರೆಯವರ ಕಾವ್ಯದ ಬಗ್ಗೆ ಹೆಚ್ಚು ಮಾತನಾಡಿದ್ದರು. ಕಿ. ರಂ ನಾಗರಾಜ ಅವರು ತೀರಿಕೊಂಡ ನಂತರದಲ್ಲಿ ಕವಯಿತ್ರಿ ಅಕ್ಷತಾ ಹುಂಚದಕಟ್ಟೆ ಅವರು ನೀನಾಸಂ ಸಂಸ್ಕೃತಿ ಶಿಬಿರದಲ್ಲಿ ಕಿ. ರಂ. ನಾಗರಾಜ ಅವರು ಮಾತನಾಡಿದ್ದ ಭಾಷಣಗಳನ್ನು, ಶೂದ್ರ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಕಿ. ರಂ ನಾಗರಾಜರ ಬೇಂದ್ರೆ ಕಾವ್ಯದ ಕುರಿತ ಲೇಖನಗಳನ್ನು ಒಟ್ಟುಮಾಡಿ ಅಹರ್ನಿಶಿ ಪ್ರಕಾಶನದ ಮೂಲಕ ಪ್ರಕಟಿಸಿದ್ದಾರೆ.

ಸುಮಾರು ಐದು ಲೇಖನಗಳಿರುವ ಈ ಪುಸ್ತಕವು ಬೇಂದ್ರೆ ಕಾವ್ಯದ ಕುರಿತು ವಿವಿಧ ಮಜಲುಗಳನ್ನು ಸೂಕ್ಷ್ಮವಾಗಿ ಶೋಧಿಸುವ ಮತ್ತು ಕನ್ನಡದ ಇತರ ವಿಮರ್ಶಕರು ಬೇಂದ್ರೆಯನ್ನು ಗ್ರಹಿಸಿದ್ದಕ್ಕಿಂತಲೂ ಭಿನ್ನವಾಗಿ ಕವಿತ್ವದ ಸಂಕೀರ್ಣತೆಗಳನ್ನು ಸ್ಥಾಪಿಸುವ ಸಾಕ್ಷಾತ್ಕಾರದ ನೆಲೆಗಳನ್ನು ಕಿ. ರಂ. ನಾಗರಾಜ ಅವರು ಕಾಣಿಸಿದ್ದಾರೆ. ಈ ಕೃತಿಗೆ ಓ ಎಲ್ ನಾಗಭೂಷಣ ಸ್ವಾಮಿಯವರು ಮುನ್ನುಡಿಯನ್ನು ಬರೆದಿದ್ದಾರೆ. ಅವರ ಮುನ್ನುಡಿಯು ಇಡೀ ಕೃತಿಯನ್ನು ಭಿನ್ನ ದೃಷ್ಟಿಕೋನದಿಂದ ನೋಡುವ ವಿಮರ್ಶಕನ ಪ್ರಜ್ಞೆಯನ್ನು ಮುಂದಿಡುತ್ತದೆ.

ನಿಜದ ನಾಡೋಜ (ಪ್ರದೀಪ್ ಮಾಲ್ಗುಡಿ- ೨೦೧೧ ಸಂಸ ಪ್ರಕಾಶನ ಬೆಂಗಳೂರು): ಕಿ. ರಂ. ನಾಗರಾಜರ ವಿದ್ಯಾರ್ಥಿ, ಸುದ್ದಿ ೨೪*೭ನ ಭಾಷಾಂತರ ವಿಭಾಗದ ಮುಖ್ಯಸ್ಥರಾದ ಪ್ರದೀಪ್ ಮಾಲ್ಗುಡಿಯವರು ಸಂಸ ಪ್ರಕಾಶನದ ಮೂಲಕ ಸಂಪಾದಿಸಿದ ಕೃತಿ ನಿಜದ ನಾಡೋಜ. ಕೆ ಮರುಳಸಿದ್ದಪ್ಪ, ಬಸವರಾಜ ಕಲ್ಗುಡಿ, ಶಿವಪ್ರಕಾಶ್ ಎಚ್ ಎಸ್, ಶೂದ್ರ ಶ್ರೀನಿವಾಸ, ರಹಮತ್ ತರೀಕೆರೆ, ಬಂಜಗೇರಿ ಜಯಪ್ರಕಾಶ್, ಟಿ.ಗೋವಿಂದರಾಜು ಮುಂತಾದವರು ಕಿ. ರಂ. ನಾಗರಾಜರ ವ್ಯಕ್ತಿತ್ವದ ವಿವಿಧ ಆಯಾಮಗಳನ್ನು, ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದಂತೆ ಅವರ ಚಿಂತನಾ ಮಾದರಿಗಳ ಕುರಿತು ಬರೆದಿರುವುದನ್ನು ಗುರುತಿಸಲು ಸಾಧ್ಯವಾಗುತ್ತದೆ. ಅದರ ಜೊತೆಗೆ ಕಿ. ರಂ. ನಾಗರಾಜರ ಮೇಲೆ ಹಲವು ಮಂದಿ ಶಿಷ್ಯಂದಿರು ರಚಿಸಿರುವ ಕವನಗಳನ್ನು ಸಹ ಈ ಕೃತಿಯಲ್ಲಿ ನೋಡಲು ಸಾಧ್ಯವಾಗುತ್ತದೆ.

ಅಶೋಕ್ ಕುಮಾರ್ ವೈ. ಜಿ – ಮುಕ್ಕಣ್ಣ ಮುನೇಶ್ವರ, ಸಂತೈಸುವ ಅವ್ವ, ಅಕ್ಷತಾ ಕೆ – ಪ್ರೀತಿಯ ಕಿ.ರಂ ಸರ್, ಕರಿಸ್ವಾಮಿ ಕೆ – ಕಿತ್ತಾನೆ ರಂಗಪ್ಪ ನಾಗರಾಜರ ಲಾಸ್ಟ್ ಲೆಕ್ಚರ್, ಕೃಪಾ ಎ– ನಮ್ಮ ಮೇಷ್ಟ್ರು, ಗಂಗಾಧರಯ್ಯ ಎಸ್ – ರಗ್ಗು ಕೊಟ್ಟು ಹೋದ ಕಿರಂ, ಗುಬ್ಬಿ ರೇವಣಾರಾಧ್ಯ– ಕಿ. ರಂ ಮತ್ತು ನಾನು, ಗೋವಿಂದರಾಜು ಟಿ (ಡಾ)– ಕಾವ್ಯ ಜೀವಿ ಕಿ.ರಂ, ಗೌರಿ ಲಂಕೇಶ್ – ಕಿ. ರಂ. ಕುರಿತ ಕೆಲವು ನೆನಪುಗಳು, ಚಂದ್ರಶೇಖರ ಪಾಟೀಲ– ಕಿ. ರಂ : ತೋಂಡಿ ಪರಂಪರೆಯ ಮಹಾಜ್ಞಾನಿ, ಚಂದ್ರಶೇಖರ್– ಕಿ.ರಂ. ಮೇಷ್ಟ್ರು ನಾನು ಕಂಡಂತೆ, ಜ್ಯೋತಿ ಗುರುಪ್ರಸಾದ್– ಕಿ.ರಂ. ಬಗ್ಗೆ ಒಂದು ಟಿಪ್ಪಣಿ, ಡೊಮಿನಿಕ್ (ಡಾ)– ಮೊದಲ ತಲೆಮಾರಿನ ಕೊನೆಯ ದೊರೆ ಪ್ರೊಫೆಸರ್ ಕಿ.ರಂ.ನಾಗರಾಜ, ಪುಷ್ಪ ಎಚ್.ಎಲ್ (ಡಾ)– ಮರೆತೇನೆಂದರೂ ಮರೆಯಲಿ ಹ್ಯಾಂಗ, ಪ್ರದೀಪ್ ಮಾಲ್ಗುಡಿ– ಕಿ.ರಂ ಮೇಷ್ಟರ ಅನಂತ ಮುಖಗಳು, ಪ್ರಹ್ಲಾದ್ ಡಿ ವಿ – ಕಾವ್ಯಗಾರುಡಿಗನ ಕೊನೇ ಷೋ, ಬಸವರಾಜ ಕಲ್ಗುಡಿ, ಕಿ.ರಂ. ಕನ್ನಡ ಕಾವ್ಯಲೋಕದ ಮಾಯಾಕಿನ್ನರಿ, ಬಂಜಗೆರೆ ಜಯಪ್ರಕಾಶ– ಸಾಹಿತ್ಯವಧೂತನ ಕಣ್ಮರೆ, ಬಲ್ಲೇನಹಳ್ಳಿ ಮಂಜುನಾಥ್– ಕಿರಂ ಮೇಷ್ಟ್ರಿಗೊಂದು ನುಡಿ ನಮನ, ಬಸವರಾಜು– ಅನಿಸಿದ್ದನ್ನು ಆಡಿ ಆಟ ಮುಗಿಸಿ ಹೋದ ಕಿರಂ, ಮಂಗಳಾ. ಬಿ. ಎಂ. (ಡಾ)– ಕಿ.ರಂ.ಗೊಂದು ಪತ್ರ, ಮಾಧವರಾವ್ ಹೆಚ್. ಎಸ್ – ಆಪತ್ ಕಾಲೀನ ಕವಿತೆಗಳು– ಒಂದು ಪರಿಚಯ, ಮುಕುಂದರಾಜ್ ಎಲ್ ಎನ್ – ಸ್ಯಾಫೋ ಕಾವ್ಯದ ವಿಜಯಲಕ್ಷ್ಮಿ ಮೇಡಂ, ಯಲ್ಲಪ್ಪ ಟಿ (ಡಾ)– ಕಿ.ರಂ ಬೋಧನಾ ವಿಧಾನ, ಯೋಗಿಶ ಪಿ _ ಕಾಲಜ್ಞಾನಿ ಕನಕ, ರಂಗನಾಥ ಕಂಟನಕುಂಟೆ (ಡಾ) –ಕಿ.ರಂ ಜನಪರ ಚಳವಳಿಗಳ ಸಖ, ರಂಗನಾಥ ಕಂಟನಕುಂಟೆ (ಡಾ), ಕಿ.ರಂ ಜೀವನದರ್ಶನದ ಪೂರ್ವಪೀಠಿಕೆ : ಕೆಲವು ಟಿಪ್ಪಣಿಗಳು, ರಹಮತ್ ತರೀಕೆರೆ– ಮಾತೇ ಮಾಧ್ಯಮವಾಗಿದ್ದ ಕಿ.ರಂ, ರಾಜಶೇಖರ ಕಿಗ್ಗ– ಸುಮ್ಮನೇ ಕುಳಿತಿದ್ದ ಕಿರಂ, ರುದ್ರೇಶ್ ಬಿ. ಅದರಂಗಿ– ಕೈಯ ಸುಳಿಯ ಮೋಡಿಗಾರ, ಲಕ್ಷ್ಮೀಕಾಂತ್ ಎಸ್ ಬಿ– ಮಾತು ಮಥಿಸಿ ಅಕ್ಷರ ಹೇಳಿಕೊಟ್ಟ ಕಿರಂ ಎಂಬ ಮಹಾಪ್ರಕಾಶದ ಬೆಳಗು, ವಾಸುದೇವಮೂರ್ತಿ ಟಿ. ಎನ್ (ಡಾ)– ಕಿ.ರಂ. ಸಾವಿನ ನೆನಪು, ವಿಜಯ ಶಂಕರ್ ಎಸ್ ಆರ್ – ಹುಟ್ಟು ಮತ್ತು ಸಾವು– ಕಿ.ರಂ ಕೊನೆಯ ಮಾತು, ವಿಜಯಶಂಕರ ಎಸ್ ಆರ್ – ಅಖಂಡ ಆಶಿಸಿದ ಅವಧೂತ, ಶಿವಪ್ರಕಾಶ್ ಎಚ್.ಎಸ್ – ಎಲ್ಲರಂತಿರಲಿಲ್ಲ ಈ ಕಿ.ರಂ, ಶ್ರೀನಿವಾಸಮೂರ್ತಿ ಕಾ.ವೆಂ – ಕನ್ನಡ

ಕಾವ್ಯಮೀಮಾಂಸೆ ಮತ್ತು ಪ್ರೊ. ಕಿ.ರಂ ನಾಗರಾಜ, ಶ್ರೀನಿವಾಸಮೂರ್ತಿ. ಜೆ – ಮಾರ್ಗದೇಸಿಗಳ ದಾಯಾದಿ ಸಂಬಂಧ (ಕಿ.ರಂ. ನಾಗರಾಜ ಅವರ 'ಭಾಸನ ಮಧ್ಯಮ ವ್ಯಾಯೋಗ'ದ ಅನುವಾದ ಕುರಿತು), ಶೂದ್ರ ಶ್ರೀನಿವಾಸ– ಕಿರಂ ನಾಗರಾಜ ಕಟ್ಟಿಕೊಟ್ಟ ಮನೋಲೋಕ, ಶೈಲಜಾ ಹಿರೇಮಠ – ಕಿ.ರಂ ಎನ್ನುವ ಕಿನ್ನರ ಜೋಗಿ, ಸಂಧ್ಯಾದೇವಿ –ಕಾವ್ಯವನ್ನೇ ಕುಡಿಯುತ್ತಿದ್ದ ಕಿ.ರಂ, ಸತ್ಯಮೂರ್ತಿ ಆನಂದೂರು– ಕಿರಂ ಎಂಬ ಕಾರಣ ಪುರುಷ, ಸತ್ಯನಾರಾಯಣ ರಾವ್. ಎಸ್ – ಕಿ.ರಂ. ಕನ್ನಡದ ಅರಿಸ್ಟಾಟಲ್, ಸುರೇಶ್ ನಾಗಲ ಮಡಿಕೆ (ಡಾ)– ಅನುಭಾವ ಮತ್ತು ರೂಪಕಗಳ ಬೆನ್ನು ಹತ್ತಿ (ಕಿರಂ ಎರಡು ನಾಟಕಗಳ ಕುರಿತು), ಸುಬ್ರಹ್ಮಣ್ಯಸ್ವಾಮಿ – ಗುರು ಸಂಸ್ಕೃತಿಯ ದಾರ್ಶನಿಕ ಕಿ.ರಂ, ಸೌಮ್ಯ ಡಿ. ಕೆ – ಕನ್ನಡ ಸಾಹಿತ್ಯ ಲೋಕದಲ್ಲಿ ಕಿ.ರಂ, ಹಾಲ್ಕುರಿಕೆ ಶಿವಶಂಕರ್– ಅಮೂರ್ತ ಲೋಕದ ವಾಸ್ತವಿಕ ಮನುಷ್ಯ : ಕಿರಂ ನಾಗರಾಜ ಎಂಬ ಸುಮಾರು ೫೦ ಲೇಖನಗಳನ್ನು ಈ ಕೃತಿಯು ಒಳಗೊಂಡಿದೆ.

ಜೊತೆಗೆ ಸುಮಾರು ೧೨ ಕವಿತೆಗಳಿರುವ ನಿಜದ ನಾಡೋಜ ಕೃತಿಯು ಸ್ವಾಭಾವಿಕವಾಗಿ ಅಭಿನಂದನಾ ಗ್ರಂಥದಂತೆ ಗೋಚರಿಸಿದರು, ಕಿ. ರಂ. ನಾಗರಾಜರ ಕುರಿತ ಅಧ್ಯಯನಕ್ಕೆ ಮಹತ್ವದ ದಾಖಲೆಯಾಗಿಯು, ಕನ್ನಡ ಸಾಹಿತ್ಯದಲ್ಲಿ ಕಿ. ರಂ. ನಾಗರಾಜ ಎಂಬ ವಿಮರ್ಶಕನ ಮೌಖಿಕ ಪರಂಪರೆಯ ದಾರ್ಶನಿಕತೆಗೆ ಮಾರ್ಗಸೂಚಿಯಾಗಿಯು ಕಂಗೊಳಿಸುತ್ತದೆ.

ನುಡಿ ಬೆಡಗು (ಸಂ: ಡಾ ಶಿವರಾಜ ಬ್ಯಾಡರಹಳ್ಳಿ–೨೦೨೦) ಈ ಕೃತಿಯ ಮೊದಲ ಭಾಗದಲ್ಲಿ ಕಿ. ರಂ. ನಾಗರಾಜ ಅವರ ವಿಮರ್ಶೆಗಳಿದ್ದರೆ ಎರಡನೆಯ ಭಾಗದಲ್ಲಿ ಅವರ ಭಾಷಣಗಳ ಬರಹ ರೂಪಗಳಿವೆ. ಸಂಪಾದಕರ ನುಡಿಯು ಇಡೀ ಕೃತಿಯನ್ನು ಸಂಪಾದಿಸುವ ಅನಿವಾರ್ಯತೆಯನ್ನು ಸ್ಪಷ್ಟಪಡಿಸಿದೆ.

ಪಠ್ಯದ ಭವಾವಳಿ (ವಿಕ್ರಮ ವಿಸಾಜಿ– ೨೦೨೦) ಈ ಕೃತಿಯಲ್ಲಿ ಕಿ.ರಂ. ನಾಗರಾಜ ಅವರ ಸಾಹಿತ್ಯ ವಿಮರ್ಶೆಯ ಕುರಿತ ಸಂದರ್ಶನಾತ್ಮಕ ಚರ್ಚೆಯನ್ನು ಗಮನಿಸಬಹುದು. ಕಿ.ರಂ. ನಾಗರಾಜ ಅವರ ಪ್ರಿಯ ಶಿಷ್ಯರಾದ ಪ್ರೊ. ನಟರಾಜ್ ಹುಳಿಯಾರ್ ಅವರನ್ನು ಲೇಖಕರಾದ ವಿಕ್ರಮ ವಿಸಾಜಿಯವರು ಸಂದರ್ಶಿಸಿದ್ದಾರೆ. ಆ ಮೂಲಕ ಸಾಹಿತ್ಯ ತತ್ವಜ್ಞಾನಿಯಾಗಿ ಕಿ.ರಂ. ನಾಗರಾಜ ಅವರನ್ನು ಕಾಣಿಸುವ ಪ್ರಯತ್ನವು ಈ ಸಂದರ್ಶನದ ಮೂಲಕ ಸಾಧಿತಗೊಂಡಿದೆ.

ಕಿರಂ ಲೋಕ (ಶೂದ್ರ ಶ್ರೀನಿವಾಸ): ಕಿ. ರಂ. ನಾಗರಾಜ ಅವರ ಜೊತೆಗೆ ತುಂಬಾ ಆತ್ಮೀಯ ಒಡನಾಟವನ್ನೊಂದಿದ್ದ ಶೂದ್ರ ಶ್ರೀನಿವಾಸ್ ಅವರು ಬಹುರೂಪಿ ಪುಸ್ತಕ ಪ್ರಕಾಶನದ ಮೂಲಕ ಹೊರತಂದ ಕೃತಿಯೇ ಕಿರಂ ಲೋಕ. ಪೂರ್ಣಪ್ರಮಾಣದಲ್ಲಿ ಕಿ. ರಂ. ನಾಗರಾಜ ಅವರ ಸಾಹಿತ್ಯ, ಸಂಸ್ಕೃತಿ ಚಿಂತನೆ ಹಾಗೂ ಬೋಧನೆ, ಅಧ್ಯಯನಗಳ ಕುರಿತ ಸಮಷ್ಟಿ ಆಲೋಚನೆಗಳನ್ನು ಕಥನ ಮಾದರಿಯಲ್ಲಿ ಕಟ್ಟುವ ಪ್ರಯತ್ನವನ್ನು ಈ ಕೃತಿಯಲ್ಲಿ ಮಾಡಲಾಗಿದೆ. ಇದೇ ಕಾರಣದಿಂದಾಗಿ ಈ ಕೃತಿಯು ತುಂಬಾ ಮಹತ್ವ ಪೂರ್ಣ ಮಾಹಿತಿಗಳನ್ನು ಮುಂದಿಟ್ಟಿದೆ. ಮಾತ್ರವಲ್ಲ ಖ್ಯಾತ ವಿಮರ್ಶಕರಾದ ಎಚ್. ದಂಡಪ್ಪ ಅವರ ಮುನ್ನುಡಿಯು ಕೃತಿಯ ಮೌಲಿಕತೆಯನ್ನು ದ್ವಿಗುಣಗೊಳಿಸಿದೆ.

ಕತ್ತಾಲೆ ಬೆಳದಿಂಗಳೊಳಗ (ಸಿ.ಜಿ.ಕೆ) ೨೦೦೩ರಲ್ಲಿ ಸಿಜಿಕೆ ಅವರು ಬರೆದ ಕತ್ತಾಲೆ ಬೆಳದಿಂಗಳೊಳಗ ಎಂಬ ಆತ್ಮಕತೆಯಲ್ಲಿ ನೀಗಿಕೊಂಡ ಸಂಸ ಮತ್ತು ಕಾಲಜ್ಞಾನಿ ಕನಕ ನಾಟಕಗಳ ಕುರಿತು ವಿವರವಾದ ಚರ್ಚೆ ಇದೆ. ಮಾತ್ರವಲ್ಲ ನಾಟಕ ರಚನಾಕಾರರಾಗಿ ಕಿ. ರಂ. ನಾಗರಾಜ ಅವರ ವ್ಯಕ್ತಿತ್ವದ ಅನಾವರಣವನ್ನು ಈ ಕೃತಿಯೊಳಗೆ ಲೇಖಕರು ಮಾಡಿಕೊಟ್ಟಿದ್ದಾರೆ. ಈ ಕೃತಿಯ ಮತ್ತೊಂದು ವಿಶೇಷವೆಂದರೆ ಕೃತಿಗೆ ಮಹತ್ವಪೂರ್ಣ ಮುನ್ನುಡಿಯನ್ನು ಕಿ. ರಂ. ನಾಗರಾಜ ಅವರೇ ಬರೆದಿರುವುದಾಗಿದೆ.

ಶಿಶುಕಂಡ ಕನಸು –ಕಿರಂ ನೆನಪು (ವಾಸುದೇವ ಮೂರ್ತಿ): ಕಿ. ರಂ ನಾಗರಾಜರ ಕುರಿತು ವಾಸುದೇವ ಮೂರ್ತಿಯವರು ಬರೆದ ಕೃತಿಯೇ ಶಿಶುಕಂಡ ಕನಸು. ಈ ಕೃತಿಯಲ್ಲಿ ಕಿ. ರಂ. ನಾಗರಾಜ ಅವರ ವಿಮರ್ಶೆಯ ಕುರಿತ ಒಳನೋಟಗಳನ್ನು, ವ್ಯಕ್ತಿತ್ವದೊಳಗೆ ಅಡಗಿರುವ ವಿಶಿಷ್ಟ ಗುಣದೋಷಗಳನ್ನು ಕೂಲಂಕಷವಾಗಿ ತೆರೆದಿಡುವ ಪ್ರಯತ್ನವನ್ನು ಮಾಡಲಾಗಿದೆ. ಈ ಕೃತಿಯ ವೈಶಿಷ್ಟ್ಯಪೂರ್ಣ ಒಳನೋಟಗಳ ಕಾರಣದಿಂದಾಗಿ ಇತ್ತೀಚೆಗೆ ಎರಡನೆಯ ಮುದ್ರಣವನ್ನು ಕಂಡಿದೆ.

ಕಾವ್ಯ ಜೀವಿ ಕಿ.ರಂ (ಸಂ: ಪುಂಡಲಿಕ ಕಲ್ಲಿಗನೂರು) ಲೇಖಕ ಪುಂಡಲಿಕ ಕಲ್ಲಿಗನೂರು ಅವರು ಸಂಪಾದಿಸಿರುವ ಈ ಕೃತಿಯಲ್ಲಿ ಕನ್ನಡದ ಹಲವು ಮಹತ್ವದ ಲೇಖಕರು ಕಿ. ರಂ. ನಾಗರಾಜ ಅವರ ವಿಮರ್ಶೆಯ ಬಗ್ಗೆ ಕಂಡುಕೊಂಡ ರಹದಾರಿಗಳ ಬಗೆಗಿನ ವಿವರವನ್ನು ಮುಂದಿಡುವ ಪ್ರಯತ್ನವನ್ನು ಮಾಡುತ್ತದೆ.

ಅಂತಃಪಠ್ಯ ಮತ್ತು ಇತರ ಪ್ರಬಂಧಗಳು, (ಅಕ್ಷರ ಕೆ ವಿ): ಕಿ.ರಂ. ನಾಗರಾಜ ಅವರ ಭಾಷಣ ಮತ್ತು ಉಪನ್ಯಾಸಗಳ ಮಾದರಿಯ ಕುರಿತ ಚರ್ಚೆಯನ್ನು ಈ ಕೃತಿಯಲ್ಲಿ ಕಾಣಬಹುದು.

ಯಕ್ಷಗಾನ ಸ್ಥಿತಿಗತಿ (ಪ್ರಭಾಕರ ಜೋಶಿ ಎಂ): ತಾಳಮದ್ದಳೆ ಕಲೆಯಲ್ಲ ಎಂಬ ಕಿ.ರಂ. ನಾಗರಾಜ ಅವರ ಪ್ರತಿಕ್ರಿಯೆಗೆ ವಾಗ್ವಾದದ ಸ್ವರೂಪದಲ್ಲಿನ ಉತ್ತರವನ್ನು ಈ ಕೃತಿಯೊಳಗೆ ಕಾಣಬಹುದು.

ಇಂತಿ ನಮಸ್ಕಾರಗಳು (ನಟರಾಜ್ ಹುಳಿಯಾರ್, ೨೦೧೪ ಪಲ್ಲವ ಪ್ರಕಾಶನ ಚೆನ್ನಪಟ್ಟಣ): ಕನ್ನಡದ ಶ್ರೇಷ್ಠ ಚಿಂತಕರಾದ ಡಿ. ಆರ್. ನಾಗರಾಜ ಮತ್ತು ಲೇಖಕ ಪಿ. ಲಂಕೇಶ್ ಅವರ ಕುರಿತ ಅನುಭವಜನ್ಯ ನೆನಪಿನ ಕಥನಗಳ ಸಂಗ್ರಹ ಇಂತಿ ನಮಸ್ಕಾರಗಳು. ನಟರಾಜ್ ಹುಳಿಯಾರ್ ಈ ಕೃತಿಯ ಮೂಲಕ ಡಿ. ಆರ್. ನಾಗರಾಜ ಮತ್ತು ಲಂಕೇಶರ ನಡುವೆ ಸಂಭವಿಸಿತು ಎನ್ನಲಾದ, ಕನ್ನಡದ ಸಾಹಿತ್ಯ ಚರಿತ್ರೆಯಲ್ಲಿ ಬಚ್ಚಿಡಲ್ಪಟ್ಟ (**ಆಫ್ ದಿ ರೆಕಾರ್ಡ್**) ಹಲವು ಸತ್ಯಗಳ ಬಹಿರಂಗ ರೂಪವನ್ನು ತೆರೆದಿಡುವ ಪ್ರಯತ್ನ ಮಾಡಿದ್ದಾರೆ. ಕಿ. ರಂ. ನಾಗರಾಜ ಅವರು ಲಂಕೇಶ್ ಮತ್ತು ಡಿ ಆರ್. ನಾಗರಾಜ ಅವರಿಗೆ ತುಂಬಾ ಆಪ್ತರಾಗಿದ್ದ ಕಾರಣದಿಂದಾಗಿ ಕೆಲವು ಘಟನೆಗಳ ಜೊತೆಗೆ ಕಿ. ರಂ. ನಾಗರಾಜ ಅವರು ತಳುಕು ಹಾಕಿಕೊಂಡಿದ್ದಾರೆ. ಆ ಮೂಲಕ ಲಂಕೇಶ್, ಕಿ ರಂ, ಡಿ ಆರ್ ಹೇಗೆ ಕನ್ನಡ ಜಗತ್ತಿಗೆ ಬದಲಾಗುವ ನೆಲೆಯಲ್ಲಿ ಪ್ರತಿಸ್ಪಂದಿಸಿದರು, ಕಾಲದ ಬಿಕ್ಕಟ್ಟುಗಳೇನು, ಹೇಗೆಲ್ಲಾ ಅವರ ನಡುವೆ ವಾಗ್ವಾದ ಸ್ವರೂಪದ ಚಿಂತನಾ ಮಾದರಿಗಳು ಹೊರಹೊಮ್ಮಿದ್ದವು ಎಂಬ ವಿಷಯಗಳನ್ನು ಕೃತಿಯುದ್ದಕ್ಕೂ ಗುರುತಿಸಲು ಸಾಧ್ಯವಾಗುತ್ತದೆ.

ಓದಿನ ಜಾಡು– ಸಾಹಿತ್ಯ ಸಂಸ್ಕೃತಿ ಬರಹಗಳು (ರಂಗನಾಥ ಕಂಟನಕುಂಟೆ ೨೦೧೬ ಲಡಾಯಿ ಪ್ರಕಾಶನ ಗದಗ): ರಂಗನಾಥ ಕಂಟನಕುಂಟೆಯವರು ಕಿ. ರಂ. ನಾಗರಾಜರ ಶಿಷ್ಯರಲ್ಲಿ ಒಬ್ಬರು. ಈ ಕೃತಿಯಲ್ಲಿ ಕಿ ರಂ. ನಾಗರಾಜ ಅವರು ಸಾಹಿತ್ಯ ಓದುತ್ತಿದ್ದ ಬಗೆಯನ್ನು ವಿವರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಓದನ್ನು ಕೇಂದ್ರವಾಗಿಸಿ ವಿಮರ್ಶೆಯನ್ನು ಪ್ರತಿಷ್ಠಾಪಿಸುವ ಕಲೆಯನ್ನು ಕಿ. ರಂ. ನಾಗರಾಜ ಅವರು ಮಾಡುತ್ತಿದ್ದರು ಎಂಬುದನ್ನು ಈ ಲೇಖನದ ಮೂಲಕ ಕಂಡುಕೊಳ್ಳಬಹುದಾಗಿದೆ.

ಕಾಮನ ಹುಣ್ಣಿಮೆ (ನಟರಾಜ್ ಹುಳಿಯಾರ್) ಇದು ನಟರಾಜ್ ಹುಳಿಯಾರ್ ಅವರ ಕಾದಂಬರಿ. ಈ ಕಾದಂಬರಿಯೊಳಗೆ ಕಿ. ರಂ. ನಾಗರಾಜ ಅವರು ಒಂದು ಪಾತ್ರವಾಗಿ ಬರುವುದನ್ನು ಗಮನಿಸಬಹುದು.

ಹುಳಿಮಾವಿನ ಮರ (ಪಿ ಲಂಕೇಶ್ ೧೯೯೭, ಲಂಕೇಶ್ ಪ್ರಕಾಶನ ಬೆಂಗಳೂರು): ಲಂಕೇಶರ ಹುಳಿಮಾವಿನ ಮರ ಕನ್ನಡ ಕಂಡ ಬಿಚ್ಚುನುಡಿಯ ಆತ್ಮಕತೆಗಳಲ್ಲಿ ಬಹುಮುಖ್ಯವಾದದ್ದು. ೧೯೯೭ರಲ್ಲಿ

ಪ್ರಕಟವಾದ ಈ ಕೃತಿಯಲ್ಲಿ ಲಂಕೇಶರ ಬದುಕಿನ ವಿವಿಧ ಆಯಾಮಗಳನ್ನು ಆತ್ಮಶೋಧನೆಯ ದೃಷ್ಟಿಯಲ್ಲಿ, ಕನ್ನಡ ಸಾಹಿತ್ಯದ ಉತ್ತುಂಗ ಕಾಲವಾದ ನವ್ಯದ ತಳುಕುಬಳುಕುಗಳನ್ನು ಬಹಳ ಸೊಗಸಾಗಿ ಕಟ್ಟಿಕೊಡಲಾಗಿದೆ. ಕಾಮಕೇಂದ್ರಿತ ನೆಲೆಯ ಚಿಂತನೆಗಳೇ ಆತ್ಮಶೋಧನೆ ಎಂಬಂತೆ ಚಿತ್ರಿತಗೊಂಡಿರುವ ಹುಳಿಮಾವಿನ ಮರದಲ್ಲಿ ಕಿ. ರಂ. ನಾಗರಾಜ ಎಂಬ ಕಾವ್ಯಜಂಗಮನ ಉಲ್ಲೇಖಗಳು ಅಲ್ಲಲ್ಲಿ ಚದುರಿದಂತೆ ಗೋಚರಿಸುತ್ತದೆ. "ಈ ಪುಸ್ತಕವನ್ನು ನಾನು ಬರೆದ ಮೂರು ವರ್ಷದಲ್ಲಿ ಎಂತೆಂತದೋ ನಡೆದಿದೆ; ನಾನು ಕಂಡವರು, ಮೆಚ್ಚಿದವರು, ಇಷ್ಟವದವರು ನೂರಾರು ಜನ. ಇದೆಲ್ಲದರ, ಇವರೆಲ್ಲರ ಮಧ್ಯೆ ಕಿ. ರಂ. ನಾಗರಾಜ, ಮಹಾಬಲಮೂರ್ತಿ, ಕೆ. ರಾಮದಾಸ್, ಡಿ. ಆರ್. ನಾಗರಾಜ, ಬಸವರಾಜು, ಸಿ. ಎಸ್. ದ್ವಾರಕನಾಥ್. ಟಿ. ಕೆ ತ್ಯಾಗರಾಜ ಮತ್ತೆ ಮತ್ತೆ ಬಂದು ಹೋಗುತ್ತಾರೆ" **(ಲಂಕೇಶ್–ಹುಳಿಮಾವಿನ ಮರ, ೧೯೯೭ ಮುನ್ನುಡಿ)**

ಹುಳಿಮಾವು ಮತ್ತು ನಾನು (ಇಂದಿರಾ ಲಂಕೇಶ್ ೨೦೧೪ ಲಂಕೇಶ್ ಪ್ರಕಾಶನ ಬೆಂಗಳೂರು): ಲಂಕೇಶ್ ಪ್ರಕಾಶನವು ೨೦೧೪ರಲ್ಲಿ ಪ್ರಕಟಿಸಿದ ಇಂದಿರಾ ಲಂಕೇಶ್ ಅವರ ಸ್ವಗತವೆ ಹುಳಿಮಾವು ಮತ್ತು ನಾನು. ಲಂಕೇಶರ ಹುಳಿಮಾವಿನ ಮರ ಕೃತಿಗೆ ಪ್ರತಿಸ್ಪಂದನೆಗಳ ಜೊತೆಗೆ ಪ್ರತಿಕ್ರಿಯಾತ್ಮಕವಾಗಿ ಹಲವು ಸತ್ಯಗಳನ್ನು ಅನಾವರಣಗೊಳಿಸಿದ ಕೃತಿ ಇದು. ಈ ಕೃತಿಯ ಕೆಲವು ಭಾಗಗಳಲ್ಲಿ ಕಿ. ರಂ. ನಾಗರಾಜ ಅವರ ಸಾಹಿತ್ಯದಿಂದ ಹೊರನಿಂತು ನೋಡಲ್ಪಡುವ ವೈವಾಹಿಕ ಬದುಕು, ವಿಜಯಲಕ್ಷ್ಮಿ ಅವರ ಜೊತೆಗಿನ ಪ್ರಣಯ ಪಸಂಗದ ಕುರಿತ ವಿಚಾರಧಾರೆಗಳನ್ನು ಕಟ್ಟಿಕೊಡಲಾಗಿದೆ.

ಸುರಗಿ (ಡಾ.ಯು. ಆರ್ ಅನಂತ ಮೂರ್ತಿ ೨೦೧೨ ಅಕ್ಷರ ಪ್ರಕಾಶನ ಹೆಗ್ಗೋಡು): ಕನ್ನಡದ ಶ್ರೇಷ್ಠ ಲೇಖಕರಾದ ಡಾ. ಯು. ಆರ್. ಅನಂತಮೂರ್ತಿಯವರ ಆತ್ಮಕಥನವೇ ಸುರಗಿ. ಜ. ನಾ. ತೇಜಶ್ರೀ ಅವರ ನಿರೂಪಣೆ ಮತ್ತು ಸಂಯೋಜನೆಯಲ್ಲಿ ಒಡಮೂಡಿದ ಈ ಕೃತಿಯು ಅನಂತಮೂರ್ತಿಯವರ ಬದುಕಿನ ಅನುಭವಗಳನ್ನೊಳಗೊಂಡ ಕನ್ನಡ ಸಾಹಿತ್ಯದ ಜೊತೆಗಿನ ಸಮಗ್ರ ಚಲನಶೀಲತೆಯನ್ನು ಕಟ್ಟಿಕೊಡುವಂತಹ ಕೃತಿಯಾಗಿದೆ. ಕೃತಿಯಲ್ಲಿ ಸಾಹಿತ್ಯ ಸಂಸ್ಕೃತಿಯೊಂದಿಗೆ ಕಿ. ರಂ. ನಾಗರಾಜ ಮತ್ತು ಅನಂತಮೂರ್ತಿಯವರ ನಡುವೆ ನಡೆದ ಹಲವು ಬಹುಮುಖ್ಯವಾದ ಪ್ರಸಂಗಗಳನು ಆತ್ಮಕಥೆಯ ಸೋಗಿನಲ್ಲಿ ನೆನಪಿನಾಳದಿಂದ ಚಿತ್ರಿಸುವ ಪ್ರಯತ್ನವನ್ನು ಅನಂತಮೂರ್ತಿಯವರು ಮಾಡಿದ್ದಾರೆ.

ಊರು ಕೇರಿ ಭಾಗ ೧ ಮತ್ತು ೨ (ಸಿದ್ದಲಿಂಗಯ್ಯ): ಡಾ. ಸಿದ್ದಲಿಂಗಯ್ಯನವರ ಬದುಕಿನ ಭಾವಶೀಲತೆಯನ್ನು, ದಲಿತ ಸಂವೇದನೆಯ ಪ್ರಖರತೆಯನ್ನು, ಗಟ್ಟಿನೆಲೆಯ ತಾತ್ತ್ವಿಕ ಆಯಾಮಗಳ ಜೊತೆಗೆ ಕಟ್ಟಿಕೊಡುವಂತಹ ಅನುಭವ ಕಥನವೇ ಊರು ಕೇರಿ ಭಾಗ ೧ ಮತ್ತು ೨. ಈ ಎರಡು ಕೃತಿಗಳು ಸಹ ದಲಿತ ಚಳುವಳಿಯ ಒಟ್ಟು ಚಾರಿತ್ರಿಕ ಘಟನೆಗಳ ಜೊತೆಗೆ, ಡಾ ಸಿದ್ಧಲಿಂಗಯ್ಯನವರ ಬಾಲ್ಯ, ವಿದ್ಯಾಭ್ಯಾಸ, ಸಾಹಿತ್ಯ, ಅಧ್ಯಾಪನ, ರಾಜಕಾರಣ ಮುಂತಾದ ಘಟಕಗಳನ್ನು ದಾಖಲಿಸುವ ಪ್ರಯತ್ನ ಮಾಡಿದೆ. ಸಿದ್ಧಲಿಂಗಯ್ಯನವರ ಪ್ರಾಧ್ಯಾಪಕರಾಗಿದ್ದ ಕಿ. ರಂ. ನಾಗರಾಜರ ಕುರಿತ ಕೆಲವು ಪ್ರಸಂಗಗಳು ಈ ಕೃತಿಯಲ್ಲಿಯೂ ದಾಖಲಾಗಿರುವುದನ್ನು ಗುರುತಿಸಲು ಸಾಧ್ಯವಾಗುತ್ತದೆ. ಸಿದ್ಧಲಿಂಗಯ್ಯನವರ ಮೊದಲ ಕವನ ಸಂಕಲನ ಹೊಲೆಮಾದಿಗರ ಹಾಡು ಪ್ರಕಟವಾಗಲು ಕಿ ರಂ ನಾಗರಾಜ ಅವರು ಕಾರಣ.

ಮೈಯೇ ಸೂರು ಮನವೇ ಮಾತು: ಪ್ರೊ ಬಸವರಾಜ ಕಲ್ಗುಡಿಯವರು ಅಭಿನವ ಪ್ರಕಾಶನದ ಮೂಲಕ ೨೦೧೩ರಲ್ಲಿ ಪ್ರಕಟಿಸಿದ ಕೃತಿ ಮೈಯೇ ಸೂರು ಮನವೆ ಮಾತು. ಐದು ಭಾಗದಲ್ಲಿ ವಿನ್ಯಾಸಗೊಂಡಿರುವ ಮೂವತ್ತೆರಡು ಲೇಖನಗಳ ಸಂಗ್ರಹವಾದ ಈ ಕೃತಿ ಸಂಸ್ಕೃತಿ ಚಿಂತನೆಯ ಹಲವು ಮಗ್ಗುಲುಗಳನ್ನು ಇಡೀ ಪುಸ್ತಕದ ಮೂಲಕ ಅಸಾಮಾನ್ಯವಾಗಿ ಚಿತ್ರಿಸುವ ಪ್ರಯತ್ನ ಮಾಡಿದೆ. ಕೃತಿಯ

ಮೂರನೇ ಭಾಗದಲ್ಲಿ ಸಮಕಾಲೀನ ಸಾಹಿತ್ಯಕ– ಸಾಂಸ್ಕೃತಿಕ ವ್ಯಕ್ತಿಗಳಾದ ಜಿ ಎಸ್ ಶಿವರುದ್ರಪ್ಪ, ಕಿ ರಂ ನಾಗರಾಜ ಮತ್ತು ಶ್ರೀನಿವಾಸರಾಜು ಅವರ ಕುರಿತ ವ್ಯಕ್ತಿ ಚಿತ್ರಣಗಳಿವೆ.

ಖಾಸಗಿ ವಿಮರ್ಶೆ: ವಸಂತ ಪ್ರಕಾಶನ ಬೆಂಗಳೂರು ಕೆ ಸತ್ಯನಾರಾಯಣ ಅವರ ಖಾಸಗಿ ವಿಮರ್ಶೆ ಎಂಬ ಲೇಖನಗಳ ಸಂಗ್ರಹವನ್ನು ಪ್ರಕಟಿಸಿದೆ. ಈ ಕೃತಿಯಲ್ಲಿ ರಿಲ್ಕೆ ಕವಿಯನ್ನು ಕಿ. ರಂ. ನಾಗರಾಜ ಅವರು ಹೇಗೆ ದರ್ಶಿಸಿದರು ಎಂಬಂತಹ ವಿವರಣೆಗಳನ್ನು ರಿಲ್ಕೆ ಕಂಡ ಕಿ ರಂ ಎಂಬ ಲೇಖನದಲ್ಲಿ ಆಪ್ತ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಒಡನಾಟದ ನೆನಪು: ಕಾಳೇಗೌಡ ನಾಗವಾರ ಅವರ ವ್ಯಕ್ತಿತ್ವದ ಕುರಿತ ಬರಹಗಳ ಸಮುಚ್ಛಯವೇ ಈ ಕೃತಿ. ಡಾ ಜೆ ಸೋಮಣ್ಣ ಅವರು ಈ ಕೃತಿಯನ್ನು ಸಂಪಾದಿಸಿದ್ದು, ಸಂತನ ಗುಣದ ಸ್ನೇಹಿತ ಎಂಬ ಲೇಖನವನ್ನು ಕಾಳೇಗೌಡ ನಾಗವಾರ ಅವರು ಬರೆದಿದ್ದಾರೆ. ಸಂತನ ವ್ಯಕ್ತಿತ್ವವನ್ನು ಹೊಂದಿರುವ ಕಿ ರಂ ನಾಗರಾಜರ ಕುರಿತ ಅನುಭವ ಕಥನವೇ ಈ ಲೇಖನವಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಿ ರಂ. ನಾಗರಾಜ ಅವರು ಮತ್ತು ಕಾಳೇಗೌಡ ನಾಗವಾರ ಅವರು ಸಹೋದ್ಯೋಗಿಗಳಾಗಿದ್ದಾಗಿನ ಅನುಭವ, ಚಳುವಳಿಗಳ ಒಡನಾಟವನ್ನು ಈ ಲೇಖನದಲ್ಲಿ ಕಾಣಬಹುದು.

ಕಿ ರಂ ನಾಗರಾಜ ನೆನಪು: ಆಳ್ವಾಸ್ ನುಡಿಸಿರಿ ೨೦೧೦ರ ನಾಡು ನುಡಿಯ ರಾಷ್ಟ್ರೀಯ ಸಮ್ಮೇಳನದ ಸಮಗ್ರ ವಾಙ್ಮಯದಲ್ಲಿ ಕೆ ಸಿ ಶಿವಾರೆಡ್ಡಿಯವರು ಕಿ. ರಂ. ನಾಗರಾಜ ಅವರ ಕುರಿತು ನೆನಪಿನ ಬುತ್ತಿಯನ್ನು ಕಟ್ಟಿಕೊಡುವ ಭಾಷಣದ ಬರಹ ರೂಪವಿದೆ. ಕೆ ಸಿ ಶಿವಾರೆಡ್ಡಿಯವರು ಕಿ ರಂ ನಾಗರಾಜರ ಶಿಷ್ಯರಲ್ಲಿ ಬಹುಮುಖ್ಯರಾದವರು. ಅವರ ಕುರಿತು ಅವರ ಚಿಂತನ ಮಾದರಿಯ ಕುರಿತು ಸಮಗ್ರವಾಗಿಯೂ ಸ್ಪಷ್ಟವಾಗಿಯೂ ಮಾತನಾಡಬಲ್ಲವರಲ್ಲಿ ಇವರು ಬಹುಮುಖ್ಯರು.

ಮೈಸೂರ್ ಪೋಸ್ಟ್ ಬ್ಲಾಗ್ ತಾಣ (ಸಂಪಾದಕರು– ಅಬ್ದುಲ್ ರಶೀದ್) ಕಡಲು ಮತ್ತು ಮುಳುಗುತ್ತಿರುವ ಹಡಗು ಮತ್ತು **ಕಿರಂ ಎಂಬ ಗಾರುಡಿಗ:** ಈ ಎರಡು ಲೇಖನವನ್ನು ಅಬ್ದುಲ್ ರಶೀದ್ ಸುಂಟಿಕೊಪ್ಪ ಅವರು ಮೈಸೂರ್ ಪೋಸ್ಟ್ ಬ್ಲಾಗ್ ತಾಣದಲ್ಲಿ ಬರೆದಿದ್ದಾರೆ. ಇಲ್ಲಿ ಕಿ. ರಂ. ನಾಗರಾಜ ಅವರ ವ್ಯಕ್ತಿತ್ವ ಮತ್ತು ಪ್ರತಿಭೆಯ ಕುರಿತ ವಿವರಗಳಿವೆ. ಕಿ ರಂ ಅವರ ಕಾವ್ಯ ಪ್ರೀತಿಯ ಬಗ್ಗೆ ಅಪಾರವಾದ ಒಲವಿನ ನುಡಿ ಹಾಗೂ ಕಾವ್ಯವನ್ನು ರೂಪಕದ ಹಿನ್ನೆಲೆಯಲ್ಲಿ ಕಾಣುವ ಮನಸ್ಸಿನ ಒಳವನ್ನು ಚಿತ್ರಿಸುವ ಪ್ರಯತ್ನ ಮಾಡಲಾಗಿದೆ.

ಪ್ರಗತಿಪರ ಚಿಂತಕ ಕಿ. ರಂ. ನಾಗರಾಜ್: ಜನಶಕ್ತಿ ವರ್ಡ್ ಪ್ರೆಸ್.ಕಾಂನಲ್ಲಿ ಕೆ ಎಸ್. ವಿಮಲಾ ಅವರು ಕಿ. ರಂ. ನಾಗರಾಜ ಅವರ ರಾಜಕೀಯ ಮತ್ತು ಸಾಮಾಜಿಕ ಧೋರಣೆಯನ್ನು, ಸಮಾಜವಾದಿ ತಾತ್ವಿಕ ಆಯಾಮವನ್ನು ಈ ಲೇಖನದ ಮೂಲಕ ಸ್ಪಷ್ಟಪಡಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಇವ್ರಿರೋದೇ ಹೀಗೆ: ಡೀರಂಗೆ ಪ್ರಾಸವಾಗಿ ಕೀರಂ! ಒನ್ ಇಂಡಿಯಾ. ಕಾಂನಲ್ಲಿ ಎಂ ಆರ್ ಮಣಿಕಾಂತ್ ಅವರು ಬರೆದಿರುವ ಇವ್ರಿರೋದೇ ಹೀಗೆ: ಡೀರಂಗೆ ಪ್ರಾಸವಾಗಿ ಕೀರಂ! ಎಂಬ ಹಾಸ್ಯ ಭರಿತ ವ್ಯಕ್ತಿತ್ವ ನಿರೂಪಣೆಯ ಲೇಖನವನ್ನು ಇಲ್ಲಿ ಗುರುತಿಸಬಹುದು.

ಬದುಕಿನ ವಿಮರ್ಶೆ ಮುಗಿಸಿದ ಕಿ ರಂ: ಗಲ್ಫ್ ಕನ್ನಡ ೨೦೧೦ ಅಗಸ್ಟ್ ೮ರಂದು ಕಿ. ರಂ. ನಾಗರಾಜ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಉದ್ದೇಶದಿಂದ ವಿಸ್ತೃತ ಲೇಖನವೊಂದನ್ನು ಸಿದ್ದಪಡಿಸಿತು. ಈ ಲೇಖನದಲ್ಲಿ ಕನ್ನಡದ ಹಿರಿಯ ಲೇಖಕರು, ಚಿಂತಕರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

ಕಟುವಿಮರ್ಶೆ: ಕಿ. ರಂ ನಾಗರಾಜ ವಿಶೇಷ: ಪ್ರಜಾವಾಣಿ ಪತ್ರಿಕೆ ಕಿ. ರಂ. ನಾಗರಾಜ ಅವರು ನಿಧನರಾದ ಸಂದರ್ಭದಲ್ಲಿ ಈ ಲೇಖನವನ್ನು ಪ್ರಕಟಿಸಿತು. ಕಿ ರಂ ನಾಗರಾಜರ ಕಟುವಿಮರ್ಶೆಯ ಮಾದರಿಯನ್ನು ಈ ಲೇಖನ ಮುಂದಿಟ್ಟಿದೆ.

ಅವಧೂತರಂತೆ ಬದುಕಿದ ಕಿ ರಂ ನಾಗರಾಜ: ನಲ್ಲೂರ್ ಪ್ರಸಾದ್ ಅವರು ಕಿ. ರಂ. ನಾಗರಾಜ ಅವರು ಹೇಗೆ ಅವಧೂತರಂತೆ ಬದುಕಿದರು ಎಂಬ ವಿವರಣೆಯನ್ನೊತ್ತಂತಹ ಅಭಿಪ್ರಾಯ ಮಂಡನೆಯನ್ನು ಈ ಲೇಖನದಲ್ಲಿ ಮಾಡಿದ್ದಾರೆ. ಅವಧೂತ ಪರಿಕಲ್ಪನೆಗೆ ವಿಭಿನ್ನ ಆಯಾಮವನ್ನು ಈ ಲೇಖನ ಒದಗಿಸುತ್ತದೆ.

ಬಳಿ ಬಂದವರಿಗೆ ಗಂಧವನ್ನು ಹಚ್ಚಿದವರು– ಕಿ ರಂ: ನಾ ಸೋಮೇಶ್ ಅವರು ಕಿ. ರಂ. ನಾಗರಾಜ ಅವರ ನೆನಪಿನ ಬುತ್ತಿಯನ್ನು ಈ ಲೇಖನದ ಮೂಲಕ ಬಿಚ್ಚಿಡುವ ಪ್ರಯತ್ನವನ್ನು ಮಾಡಿದ್ದಾರೆ. ಕ್ರೈಸ್ಟ್ ಕನ್ನಡ ಸಂಘದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಕಿ. ರಂ. ನಾಗರಾಜ ಅವರು ಮತ್ತು ನಾಸೋ ಅವರು ಭೇಟಿಯಾದಾಗ ನಡೆದ ಘಟನೆಗಳ ಸುತ್ತ ಈ ಲೇಖನ ಕಟ್ಟಲ್ಪಟ್ಟಿದೆ.

ಕಿ ರಂ ಸಾರ್ ಸ್ಸಾರೀ... ರಜನಿ ಬರಹ: ಮಹಿಪಾಲ ರೆಡ್ಡಿಯವರು ಕಿ. ರಂ. ನಾಗರಾಜ ಅವರ ಜೊತೆಯಲ್ಲಿ ಕ್ಷಮಾಪಣೆ ಕೇಳುವಂತಹ ಬರಹದಂತೆ ಈ ಬರಹ ನಿರೂಪಣೆಗೊಂಡಿದೆ.

ಸಂಚಯ ನೆನಪಿನ ಸಂಚಿಕೆ: ಕಿ. ರಂ. ನಾಗರಾಜ ಅವರ ಸಾವಿನ ಸಂದರ್ಭ ಅವರ ಕುರಿತು ಸಂಚಯ ನಿಯತಕಾಲಿಕೆಯು ವಿಶೇಷ ಸಂಚಿಕೆಯೊಂದನ್ನು ಹೊರತರುವ ಮೂಲಕ ಕಾವ್ಯಜೀವಿ ಕಿ. ರಂ. ನಾಗರಾಜ ಅವರಿಗೆ ನಮನವನ್ನು ಸಲ್ಲಿಸಿತು. ಈ ನಿಯತಕಾಲಿಕೆಯನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಲಾಗಿದೆ.

ಜನ ಸಂಸ್ಕೃತಿ ಮಾಸಿಕ: ಜನಸಂಸ್ಕೃತಿ ಮಾಸಿಕದಲ್ಲಿಯೂ ಕಿ ರಂ ನಾಗರಾಜ ಅವರ ಕುರಿತು ಹಲವಾರು ಲೇಖನಗಳು ಪ್ರಕಟಗೊಂಡಿರುವುದನ್ನು ಗುರುತಿಸಲು ಸಾಧ್ಯವಾಗುತ್ತದೆ.

ಅಂಕಣ: ೧೯೮೭ರ ಅಂಕಣ ಹಳೆಯ ಸಂಚಿಕೆಯಲ್ಲಿ ಕಿ. ರಂ. ನಾಗರಾಜ ಅವರ ಕುರಿತು ಸಂಪಾದಕರಾದ ಶ್ರೀನಿವಾಸ ರಾಜು ಅವರು ವೇದನೆಗೆ ದನಿಕೊಟ್ಟ ಕವಿ ಕಿರಂ ಎಂಬ ಲೇಖನವನ್ನು ವ್ಯಕ್ತಿವಿಶ್ಲೇಷಣೆಯ ರೂಪದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ.

ಅನ್ವೇಷಣೆ– ಮರೆತೆನೆಂದರೂ ಮರೆಯಲಿ ಹ್ಯಾಂಗ: ೨೦೧೧ರ ಜುಲೈ ಮತ್ತು ಸೆಪ್ಟಂಬರ್ ತಿಂಗಳ ಅನ್ವೇಷಣಾ ಪತ್ರಿಕೆಯಲ್ಲಿ ಡಾ ಎಚ್ ಎಲ್ ಪುಷ್ಪ ಅವರು ತಮ್ಮ ಗುರುಗಳಾದ ಕಿ. ರಂ. ನಾಗರಾಜರ ಕುರಿತು ಮರೆತೆನೆಂದರೂ ಮರೆಯಲಿ ಹ್ಯಾಂಗ ಎಂಬ ಲೇಖನದ ಕುರಿತು ಬರೆದಿದ್ದಾರೆ. ಗುರುವಿನ ಪಾಠ, ಪ್ರವಚನದ ಕುರಿತ ವಿಸ್ತೃತ ಕಲ್ಪನೆ ಈ ಭಾಗದಲ್ಲಿದೆ.

ಕಿ ರಂ ತೋಂಡಿ ಪರಂಪರೆಯ ಮಹಾಜ್ಞಾನಿ: ಸಂಕ್ರಮಣ ಪತ್ರಿಕೆಯ ಸಂಪುಟ ೪೫, ಸಂಚಿಕೆ ೪ರಲ್ಲಿ ಚಂದ್ರಶೇಖರ ಪಾಟೀಲರು ಕಿರಂ ನಾಗರಾಜರ ಮೌಖಿಕ ನಿರೂಪಣೆಯನ್ನು ಜನಪದ ದೃಷ್ಟಿಕೋನದಲ್ಲಿ ಕಟ್ಟಿಕೊಡುವ ತೋಂಡಿ ಮಾರ್ಗದ ಕಲ್ಪನೆಯನ್ನು ಮುಂದಿಡುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಿದ್ದಾರೆ. ತೋಂಡಿ ಮಾರ್ಗ ಎಂದರೇನು? ಆ ಮೂಲಕ ಕಿ ರಂ ಕಟ್ಟಿಕೊಟ್ಟ ಸಾಹಿತ್ಯ ಪರಿಕರಗಳಾವು? ಎಂಬುದನ್ನು ಈ ಲೇಖನ ಚರ್ಚಿಸುವ ಪ್ರಯತ್ನ ಮಾಡಿದೆ.

ಸಂವಾದ– ಕಿ ರಂ ಎನ್ನುವ ಕಿನ್ನರ ಜೋಗಿ: ಇಂದೂಧರ ಹೊನ್ನಾಪುರ ಅವರ ಸಂಪಾದಕತ್ವದಲ್ಲಿ ೨೦೧೦ರಲ್ಲಿ ಸಂಪುಟ ೮, ಸಂಚಿಕೆ ೧೨ರಲ್ಲಿ ಡಾ ಶೈಲಜಾ ಹಿರೇಮಠ ಅವರು ಕಿ ರಂ ನಾಗರಾಜರ ಕುರಿತು ವ್ಯಕ್ತಿಚಿತ್ರವನ್ನು ಬರೆದಿದ್ದಾರೆ. ಜೋಗಿಯಂತೆ ಜಂಗಮನಾಗಿ ಬದುಕಿದ ಕಿರಂ ನಾಗರಾಜರ ಆದರ್ಶ ಬದುಕಿನ ಚಿತ್ರಣಗಳು ಈ ಲೇಖನದಲ್ಲಿದೆ.

ಗಾಂಧಿ ಬಜಾರ್– ಸಾಹಿತ್ಯ ಮಾಸಿಕ_ ನಮ್ಮ ಪ್ರೀತಿಯ ಮೇಷ್ಟ್ರು ಕಿರಂ: ಗಾಂಧಿ ಬಜಾರ್ ಸಾಹಿತ್ಯ ಮಾಸಿಕದ ೨೪ನೇ ಸಂಪುಟ ಮತ್ತು ೮ನೇ ಸಂಚಿಕೆಯಲ್ಲಿ ಕಿ ರಂ ನಾಗರಾಜರ ಕುರಿತು ಬಾಕಿನ ಅವರು ಎರಡು ಲೇಖನಗಳನ್ನು ಬರೆದಿದ್ದಾರೆ. ಮೊದಲ ಲೇಖನದಲ್ಲಿ ಕಿ ರಂ ನಾಗರಾಜರ ವ್ಯಕ್ತಿತ್ವದ ಅನಾವರಣವನ್ನು ಗುರುತಿಸಲು ಸಾಧ್ಯವಾಗುತ್ತದೆ.

ದಂತ ಕಥೆಯಾದ ಕಿ ರಂ ಮೇಷ್ಟ್ರು: ಇದು ಕಿ ರಂ ನಾಗರಾಜರು ಸಾವನ್ನಪ್ಪಿದಾಗ ಅವರಿಗೆ ಸಲ್ಲಿಸಲ್ಪಟ್ಟಂತಹ ಶ್ರದ್ಧಾಂಜಲಿ ಬರಹವಾಗಿದೆ. ಈ ಎರಡು ಲೇಖನವನ್ನು ಬಾಕಿನ ಅವರು ೨೦೧೦ರಲ್ಲಿ ಗಾಂಧಿ ಬಜಾರ್ ಸಾಹಿತ್ಯ ಮಾಸಿಕದಲ್ಲಿ ಪ್ರಕಟಿಸಿದ್ದಾರೆ.

ಕಸ್ತೂರಿ ಮಾಸಿಕ_ ಕಿ ರಂ ಎಂಬ ಗುರುವಿನ ಸಂಗೀತ ಲೋಕ: ಕಸ್ತೂರಿ ಮಾಸಿಕದಲ್ಲಿ ಏಪ್ರಿಲ್ ೨೦೧೭ರ ಸಂಚಿಕೆಯಲ್ಲಿ ಶೂದ್ರ ಶ್ರೀನಿವಾಸ್ ಅವರು ಕಿ ರಂ ನಾಗರಾಜರ ಕಲಾ ಅಭಿವ್ಯಕ್ತಿಯ ನೆಲೆ, ಕಿ ರಂ ಗೆ ಸಂಗೀತ ಮತ್ತು ಪುಸ್ತಕದ ಮೇಲಿನ ವ್ಯಾಮೋಹ ಆ ಮೂಲಕ ಕಿ ರಂ ಕಂಡುಕೊಂಡ ಹೊಸಬಗೆಯ ಆಲೋಚನಾ ಕ್ರಮಗಳನ್ನು ಈ ಲೇಖನ ಕಲಾತ್ಮಕವಾಗಿ ಪ್ರತಿಬಿಂಬಿಸುವ ಪ್ರಯತ್ನ ಮಾಡಿದೆ.

ಚಿಂತನ ಬಯಲು– ಕಿ ರಂ ನಾಗರಾಜರ ತೋಂಡಿ ಮಾರ್ಗ: ಡಾ ರಾಮಲಿಂಗಪ್ಪ ಟಿ ಬೇಗೂರು ಚಿಂತನ ಬಯಲು ಸಂಶೋಧನಾ ಪತ್ರಿಕೆಯ ಸಂಪುಟ ೨ ಮತ್ತು ಸಂಚಿಕೆ ೧ರಲ್ಲಿ ಕಿ ರಂ ನಾಗರಾಜರ ವಿಮರ್ಶಾ ನೆಲೆಗಟ್ಟನ್ನು ಮೌಖಿಕ ನೆಲೆಯ ತೋಂಡಿ ಮಾರ್ಗದ ಮೂಲಕ ಕಟ್ಟುವ ಪ್ರಯತ್ನವನ್ನು ಮಾಡಿದ್ದಾರೆ. ಇಡೀ ತೋಂಡಿ ಮಾರ್ಗದ ಕುರಿತು ವಿವರಣಾತ್ಮಕವಾದ ರೂಪುರೇಷೆಗಳನ್ನು, ತೋಂಡಿ ಮಾರ್ಗದ ಇತಿಹಾಸ ಸ್ವರೂಪ ಮುಂತಾದ ಹಲವು ಸಂಗತಿಗಳ ಕುರಿತು ಈ ಲೇಖನ ಚರ್ಚಿಸುತ್ತದೆ. ಕಿರಂ ನಾಗರಾಜ ಅವರು ತಮ್ಮ ಆಸಕ್ತಿಯನ್ನು ಪುಸ್ತಕ ಸಂಪಾದನೆಯ ಕ್ಷೇತ್ರಕ್ಕೂ ಸಹ ವ್ಯಾಪಿಸಿಕೊಂಡಿದ್ದರು. ಆ ಮೂಲಕ ಸಂಪಾದನೆಯ ಕಾರ್ಯವನ್ನು ಭಿನ್ನ ದೃಷ್ಟಿಕೋನದಲ್ಲಿ ನೋಡುವ ಪ್ರಯತ್ನ ಮಾಡಿದ್ದಾರೆ.

ಅಧ್ಯಯನದ ಮಹತ್ವ

ಕಿ. ರಂ. ನಾಗರಾಜ ಅವರ ಕುರಿತು ಈವರೆಗೆ ಯಾವುದೇ ಪಿಎಚ್.ಡಿ ಮಹಾಪ್ರಬಂಧಗಳಾಗಿರಬಹುದು, ಸಮಗ್ರ ಅಧ್ಯಯನಗಳಾಗಿರಬಹುದು ನಡೆದಿರುವುದಿಲ್ಲ. ಬದಲಾಗಿ ಅವರ ಕುರಿತು ಬಂದ ಹೆಚ್ಚಿನ ಬರಹಗಳು, ಕೃತಿಗಳು ವೈಯಕ್ತಿಕ ಬದುಕಿನ ಸಾರ್ವಜನಿಕ ಅನಾವರಣಗಳಾಗಿವೆ. ಮತ್ತೆ ಕೆಲವು ಬರಹಗಳು, ಕೃತಿಗಳು ಅವರ ಶಿಷ್ಯರು, ಸ್ನೇಹಿತರು, ಆಪ್ತವಲಯದ ವೈಯಕ್ತಿಕ ಕಥನಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ಇನ್ನೂ ಕಿ. ರಂ. ನಾಗರಾಜ ಅವರು ಬರವಣಗೆಯನ್ನು ಹೆಚ್ಚಾಗಿ ರೂಡಿಸಿಕೊಂಡದ್ದಕ್ಕಿಂತಲೂ ಮಾತಿನ ಮೂಲಕ ಕಟ್ಟಿಕೊಟ್ಟ ವಿಚಾರಧಾರೆಗಳು ಹೆಚ್ಚು. ಹಲವರು ಕಿ. ರಂ. ನಾಗರಾಜರ ಭಾಷಣ, ಉಪನ್ಯಾಸವನ್ನು ಕೇಳಿ ಪ್ರಶಂಶಿಸಿದರು. ಮತ್ತೆ ಕೆಲವರು ಅವರು ಬರವಣಿಗೆ ಮಾಡದಿರುವ ಕುರಿತು, ಅವರ ವೈಯಕ್ತಿಕ ಬದುಕಿನಲ್ಲಿ ಅವರ ಚಟಗಳ ಕುರಿತು ಟೀಕಿಸಿದ್ದೆ ಹೆಚ್ಚು. ಆದರೂ ಅವರ ವಿಮರ್ಶೆಯ ಒಳನೋಟಗಳು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ.

ಬರವಣಿಗೆ ಮಾಡಿಲ್ಲದ ಮಾತ್ರಕ್ಕೆ ಅವರ ಚಿಂತನೆಗಳನ್ನು ಹಾಗೇ ಅಭ್ಯಸಿಸದೆ ಕಡೆಗಣಿಸುವುದು ಯಾಕೋ ಅಪಾಯಕಾರಿ ಅಭಿವ್ಯಕ್ತಿ ಎಂದು ನಾನಾದರೂ ಭಾವಿಸಿಕೊಳ್ಳುತ್ತೇನೆ. ಮಾತ್ರವಲ್ಲ ಲಿಖಿತ–ಮೌಖಿಕ, ಶಿಷ್ಟ–ಜನಪದವೆಂಬ ಭೇದವೆಣಿಸದೆ ಸಾಹಿತ್ಯವನ್ನು ಸಮಷ್ಟಿ ಪ್ರಜ್ಞೆಯಿಂದ ಅಭ್ಯಸಿಸಬೇಕೆಂಬುದು ನನ್ನ ಆಶಯ. ಈ ದೃಷ್ಟಿಯಿಂದ ಕಿ. ರಂ. ನಾಗರಾಜ ಅವರ ವಿಮರ್ಶೆಯ ಬಹು ಸಾಧ್ಯತೆಗಳಿಂದ ನಿರ್ಮಾಣವಾದ ವಿಮರ್ಶಾ ಮಾದರಿಗಳನ್ನು ಶೋಧಿಸುವುದು ಇಡೀ ಸಂಶೋಧನೆಯ ಮೂಲ ಮತ್ತು ಮಹತ್ವದ ಆಯಾಮವೆಂದು ಪರಿಗಣಿಸಲಾಗಿದೆ.

ಇನ್ನೊಂದು ಸಮಸ್ಯೆಯನ್ನು ಈ ಭಾಗದಲ್ಲಿ ಸ್ಪಷ್ಟಪಡಿಸುವ ಪ್ರಯತ್ನವನ್ನು ಮಾಡಬೇಕಾಗಿದೆ. ಕಿ. ರಂ ನಾಗರಾಜರ ಶಿಷ್ಯವೃಂದ, ಸಹೋದ್ಯೋಗಿಗಳು ಹೆಚ್ಚಾಗಿ ಕಿ. ರಂ. ನಾಗರಾಜ ಕುರಿತ ಒಡನಾಟದ ನೆನಪುಗಳನ್ನು ಮೆಲುಕು ಹಾಕುತ್ತಾರೆ ವಿನಃ ಅವರ ಸಾಹಿತ್ಯ– ಸಂಸ್ಕೃತಿಯನ್ನು ವಿಮರ್ಶಿಸಿದ ದೃಷ್ಟಿಕೋನವನ್ನು ಸ್ಪಷ್ಟಪಡಿಸಲು ಕಷ್ಟಪಡುತ್ತಾರೆ. ಇದೇ ಬಗೆಯ ತೊಡಕು ಅಧ್ಯಯನದ ಉದ್ದಕ್ಕೂ ನಾನು ಸಹ ಎದುರಿಸಿದ್ದೇನೆ. ಇದಕ್ಕೆ ಕಾರಣವೂ ಇದೆ. ಕಿ. ರಂ. ನಾಗರಾಜ ಅವರು ಸಿದ್ಧ ಮಾದರಿಯ ಓದಿಗೆ, ಅಧ್ಯಯನಕ್ಕೆ ತಮ್ಮನ್ನು ತೊಡಗಿಸಿಕೊಂಡವರಲ್ಲ. ಅವರದು ಬಹುಶ್ರುತ ಮಾದರಿಯ ಓದು ಮತ್ತು ಅಧ್ಯಯನ. ಅವರ ವಿಮರ್ಶೆಗೆ ಸದಾ ಕ್ರಿಯಾಶೀಲತೆಯನ್ನು ಪ್ರತಿಪಾದಿಸುವ ಪ್ರಯೋಗಶೀಲ ಗುಣವಿದೆ. ಎಷ್ಟೋ ಮಂದಿ ಶಿಷ್ಯರು ಕಿ. ರಂ. ನಾಗರಾಜರ ಮೇಲೆ ಅತಿಯಾದ ಭಾವುಕ ಪ್ರೀತಿ, ಕಾಳಜಿಯ ಮೂಲಕ ನಿರಂತರತೆಯನ್ನು ಕಾಯ್ದುಕೊಂಡಿದ್ದಾರೆ. ಆದರೆ ಕನ್ನಡದಲ್ಲಿ ಕಿ. ರಂ. ನಾಗರಾಜ ಅವರ ಮನೋಲೋಕ ಯಾವುದು ಎಂಬುದನ್ನು ಹಿಡಿದಿಡಲು ಅವರಿಂದಲೋ, ನನ್ನಿಂದಲೋ ಇನ್ನೂ ಸಾಧ್ಯವಾಗಿಲ್ಲ. ಈ ತೊಡಕುಗಳನ್ನು ಸ್ವಲ್ಪಮಟ್ಟಿಗೆ ದೂರವಾಗಿಸಿ ಸಾಧ್ಯತೆಯ ಹಾದಿಯಲ್ಲಿ ಈ ಒಂದು ಸಂಶೋಧನೆಯನ್ನು ರೂಪಿಸುವುದು ಈ ಅಧ್ಯಯನದ ಮಹತ್ತರವಾದ ಮತ್ತು ಮಹತ್ವವಾದ ಚಟುವಟಿಕೆ ಎಂಬುದನ್ನು ಸ್ಪಷ್ಟಪಡಿಸುತ್ತೇನೆ.

ಇಡೀ ಸಂಶೋಧನೆಯು ಕಿ. ರಂ. ನಾಗರಾಜ ಅವರನ್ನು ಅಸಾಮಾನ್ಯ ಎಂದು ಚಿತ್ರಿಸುವ ಭಾವುಕತೆಯನ್ನಾಗಲಿ, ಪೂರ್ವಗ್ರಹ ಪೀಡಿತವಾದ ಸಾಂಸ್ಕೃತಿಕ ರಾಜಕಾರಣವನ್ನಾಗಲಿ ಮುಂದಿಡದೆ; ಕನ್ನಡ ವಿಮರ್ಶಾ ವಲಯದಲ್ಲಿ ಕಿ. ರಂ. ನಾಗರಾಜ ಅವರ ಅಸ್ಮಿತೆ ಏನು? ಅವರ ಪ್ರಯೋಗಶೀಲತೆಗಳಾವುವು? ಅವರಿಂದ ಕನ್ನಡ ಜಗತ್ತು ಪಡೆದುಕೊಂಡಿದ್ದು ಏನು? ಅವರು ಕನ್ನಡದಿಂದ ಪಡೆದು ಇತರರಿಗೆ ಹಂಚಿದ್ದು ಎಷ್ಟು? ಒಟ್ಟಾಗಿ ಕಿ.ರಂ ನಾಗರಾಜ ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಏನು? ಕಿ. ರಂ. ನಾಗರಾಜ ಅವರ ವಿಮರ್ಶಾ ಮಾದರಿ ಎಂಬುದು ಇದೆಯೆ? ಎಂಬ ಹಲವು ಬಗೆಯ ಪ್ರಶ್ನೆಗಳನ್ನು ಸಂಶೋಧನೆಯ ಸಮಸ್ಯೆಯಾಗಿ ರೂಪಿಸಲಾಗಿದೆ. ಈ ತಾತ್ತ್ವಿಕ ಪ್ರಶ್ನೆಗಳೇ ಅಧ್ಯಯನದ ಮಹತ್ವವನ್ನು ಸ್ಪಷ್ಟಪಡಿಸುತ್ತದೆ.

ಒಂದು ಸಣ್ಣ ಘಟನೆಯನ್ನು ಇಲ್ಲಿ ಹೇಳಲೇಬೇಕು. ಕನ್ನಡದ ಖ್ಯಾತ ವಿಮರ್ಶಕರಾದ ಜಿ.ಎಚ್. ನಾಯಕ್ ಅವರಿಗೆ ನಾನೊಂದು ಪತ್ರ ಬರೆದಿದ್ದೆ. ಅಲ್ಲಿ ಕಿ. ರಂ. ನಾಗರಾಜ ಅವರ ಕುರಿತು ಸಂಶೋಧನೆ ಮಾಡುವುದಾಗಿ ತಿಳಿಸಿದ್ದೆ. ದೂರವಾಣಿಯ ಮೂಲಕ ಅವರು ನನಗೆ ಉತ್ತರಿಸಿದ್ದರು ಕೂಡ. ಆ ಉತ್ತರ ನನಗಂತೂ ತುಂಬು ಆಘಾತವನ್ನುಂಟು ಮಾಡಿದ್ದು ಸುಳ್ಳಲ್ಲ. "ಕನ್ನಡ ಸಾಹಿತ್ಯ ವಿಮರ್ಶೆಗೆ ಕಿ. ರಂ. ನಾಗರಾಜ ಅವರು ಯಾವುದೇ ಮಹತ್ವದ ಕೊಡುಗೆಯನ್ನು ನೀಡಲಿಲ್ಲ. ಬದಲಾಗಿ ಜೋಳಿಗೆಯನ್ನು ನೇತುಹಾಕಿ ಜಂಗಮನಂತೆ ತಿರುಗಿ ತನಗನ್ನಿಸಿದ ವಿಚಾರಗಳನ್ನು ತನ್ನ ಮಾತು ಕೇಳಲು ಬಂದ ಜನರ ಗುಂಪಿನ ಮುಂದೆ ಅಭಿವ್ಯಕ್ತಿಸಿದರು. ಇದು ಸಿದ್ಧಮಾದರಿಯ ಸಾಹಿತ್ಯ ವಿಮರ್ಶೆಯ ಚೌಕಟ್ಟಲ್ಲ. ಬದಲಾಗಿ ಆ ಕ್ಷಣ ವ್ಯಕ್ತವಾಗುವ ತಾತ್ಕಾಲಿಕ ಸಂವೇದನೆಯಾಗಿದೆ. ಈ ಬಗೆಯ ಸಂವೇದನೆ ಜನಮಾನಸದಲ್ಲಿ ಹೆಚ್ಚುಕಾಲ ಉಳಿಯಲಾರದು" ಎಂಬ ವಾದವನ್ನು ಮುಂದಿಟ್ಟಿದ್ದರು **(ನಾಯಕ್ ಜಿ. ಎಚ್. ದೂರವಾಣಿ**

ಸಂದರ್ಶನ, ೨೦೧೭). ಈ ವಾದ ಕನ್ನಡ ಸಾಹಿತ್ಯ ಲೋಕದ ಸಾಂಸ್ಕೃತಿಕ ರಾಜಕಾರಣದ ತತ್‌ಕ್ಷಣದ ಪ್ರತಿಕ್ರಿಯೆ ಅಷ್ಟೇ. ಜಿ.ಎಚ್. ನಾಯಕ್‌ರಂತಹ ಹಿರಿಯ ವಿಮರ್ಶಕರಿಗೆ ಬರಹದ ಮೂಲಕ ಸಾಕ್ಷಾತ್ಕಾರಗೊಂಡ ಸಿದ್ಧಮಾದರಿಯ ವಿಮರ್ಶೆ ಹೆಚ್ಚು ಕಾಲ ಉಳಿಯುತ್ತದೆ ಎಂಬ ಮನೋಭಾವವಿದೆ; ಅದು ನಿಜವೂ ಇರಬಹುದು. ಆದರೆ ಮೌಖಿಕತೆಗಳು ಸದಾ ಜನಮಾನಸದೊಂದಿಗೆ ಮುಖಾಮುಖಿಯಾಗುತ್ತಾ, ಸಂವಾದ ವಾಗ್ವಾದಗಳನ್ನು ರೂಪಿಸುತ್ತಾ ಮುನ್ನುಗ್ಗುವ ಪ್ರಯತ್ನವನ್ನು ಮಾಡುತ್ತದೆ; ಎಂಬ ಸಣ್ಣ ನಂಬಿಕೆ ಜಿ. ಎಚ್. ನಾಯಕ್‌ರಲ್ಲಿ ಇದ್ದಿದ್ದರೆ ಕಿ. ರಂ. ನಾಗರಾಜ ಅವರನ್ನೂ ಓರ್ವ ವಿಮರ್ಶಕ ಎಂದು ಒಪ್ಪಿಕೊಳ್ಳುತ್ತಿದ್ದರೇನೊ. ಜಿ. ಎಚ್. ನಾಯಕರ ಈ ಅಭಿಪ್ರಾಯ ಭೇದವನ್ನು ಗೌರವಿಸುತ್ತಲೇ ಹಲವು ಸಾಧ್ಯತೆಗಳ ಕಡೆಗೆ ಚಲಿಸುವ ಅವಕಾಶವನ್ನು ಈ ಒಂದು ಸಂಶೋಧನಾ ಪ್ರಯತ್ನದಲ್ಲಿ ಅವರ ಜೊತೆಗಿನ ದೂರವಾಣಿ ಸಂಭಾಷಣೆ ನನಗೆ ನೀಡಿದೆ. ಆದ್ದರಿಂದ ಕಿ. ರಂ. ನಾಗರಾಜ ಅವರ ಬಗೆಗಿನ ಈ ಒಂದು ಅಧ್ಯಯನವು ಸಾಂಸ್ಕೃತಿಕ ರಾಜಕಾರಣಕ್ಕೊಂದು ಉತ್ತರ ಎಂಬ ದೃಷ್ಟಿಯಲ್ಲಿ ಮಹತ್ವವನ್ನು ಪಡೆದುಕೊಂಡಿದೆ. ಅಂದರೆ ಸಾಹಿತ್ಯಕ ವಿರೋಧ ಮತ್ತು ಶೂನ್ಯದಿಂದ ವಿಚಾರವನ್ನು ಹುಟ್ಟಿಸುವ ಪ್ರಯತ್ನಕ್ಕೆ ಈ ಸಂಶೋಧನೆಯು ಪೂರ್ವ ತಯಾರಿಯಾಗಿದೆ.

ಅಧ್ಯಾಯ–೨ ಕಿ. ರಂ. ನಾಗರಾಜ ಅವರ ಬದುಕು ಮತ್ತು ನಾಟಕಗಳ ಕುರಿತ ವಿವೇಚನೆ

ಕಿ. ರಂ. ನಾಗರಾಜ ಅವರ ಪರಿಚಯವನ್ನು ಹೆಚ್ಚು ವಿಸ್ತರಿಸಬೇಕಾದ ಅನಿವಾರ್ಯತೆ ಇರುವುದರಿಂದ ಎರಡನೆಯ ಅಧ್ಯಾಯದ ಮೊದಲ ಭಾಗದ ಮೂಲಕ ವ್ಯಕ್ತಿಚಿತ್ರದ ಮಾದರಿಯ ವಿವರಗಳನ್ನು ಪೋಣಿಸುವ ಪ್ರಯತ್ನವನ್ನು ಮಾಡಲಾಗಿದೆ. ಉಪಶೀರ್ಷಿಕೆಯಾಗಿ ಅವರ ಕೃತಿಗಳು, ಸಂಪಾದಿತ ಕೃತಿಗಳು ಅವರಿಗೆ ದೊರೆತ ಪ್ರಶಸ್ತಿಗಳ ವಿವರ, ಸ್ಮರಣ ಸಂಚಿಕೆಗಳು, ಅವರ ಬಗ್ಗೆ ಬಂದಿರುವ ಕೃತಿಗಳು ಇತ್ಯಾದಿ ವಿವರಗಳನ್ನು ಪರಿಚಯಾತ್ಮಕ ವಿನ್ಯಾಸದಲ್ಲಿ ಹೇಳಲಾಗಿದೆ. ಇದೇ ಅಧ್ಯಾಯದ ಎರಡನೆಯ ಭಾಗದಲ್ಲಿ ಕಿ. ರಂ. ನಾಗರಾಜ ಅವರ ಸೃಜನಶೀಲ ಕೃತಿಗಳಾದ ನೀಗಿಕೊಂಡ ಸಂಸ, ಕಾಲಜ್ಞಾನಿ ಕನಕ ಹಾಗೂ ಮಧ್ಯಮವ್ಯಾಯೋಗ ನಾಟಕದ ಬಗೆಗಿನ ಚರ್ಚೆಗಳನ್ನು ನಿರೂಪಿಸಲಾಗಿದೆ. ಕಿ. ರಂ. ನಾಗರಾಜ ಅವರ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಕುರಿತು ಸಮಗ್ರತೆ ಬರಲಿ ಎಂಬ ಕಾರಣಕ್ಕಾಗಿ ಸೃಜನಶೀಲ ಕೃತಿಗಳ ಕುರಿತ ಚರ್ಚೆಯನ್ನು ಸೇರಿಸಲಾಗಿದೆಯಷ್ಟೆ. ಜೊತೆಗೆ ನೀಗಿಕೊಂಡ ಸಂಸ ಮತ್ತು ಕಾಲಜ್ಞಾನಿ ಕನಕ ನಾಟಕದ ಅನನ್ಯತೆ ಏನು? ಕನ್ನಡ ರಂಗಭೂಮಿಯಲ್ಲಿ ರಂಗಪಠ್ಯವಾಗಿ ಈ ಎರಡು ನಾಟಕಗಳು ಹೇಗೆ ಯಶಸ್ವಿಯಾಗಿವೆ. ಕಿ. ರಂ. ನಾಗರಾಜ ಅವರು ಈ ಎರಡು ನಾಟಕವನ್ನು ಬರೆಯಲು ನಿರ್ಮಾಣವಾದ ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರಣಗಳೇನು? ಈ ಎರಡು ನಾಟಕಗಳ ಮೂಲಕ ಪ್ರಭುತ್ವವನ್ನು ನೋಡಬೇಕಾದ ನೋಟ ಕ್ರಮ ಯಾವುದು? ಸಾಂಸ್ಕೃತಿಕವಾಗಿ ಈ ಎರಡು ನಾಟಕಗಳ ಮಹತ್ವವೇನು? ಈ ನಾಟಕ ರಚನೆಯ ಹಿಂದಿರುವ ಚಾರಿತ್ರಿಕ ವಿಷಯಗಳಾವು ಎಂಬ ಅಂಶವನ್ನು ಈ ಭಾಗದಲ್ಲಿ ಕೂಲಂಕಷವಾಗಿ ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ. ಇಲ್ಲಿ ಸಂಶೋಧನೆಯ ಜೊತೆಗೆ ನಾಟಕಗಳನ್ನು ವಿಮರ್ಶಿಸುವ ಕಾರ್ಯವೂ ನಡೆದಿದೆ.

ಅಧ್ಯಾಯ–೩ ವಿಮರ್ಶೆ, ಸಾಹಿತ್ಯ, ಸಂಸ್ಕೃತಿ, ಮತ್ತು ಮಾದರಿ ಒಂದು ತಾತ್ತ್ವಿಕ ಪ್ರವೇಶ

ಅಧ್ಯಯನದ ಅಧ್ಯಾಯ ಮೂರರಲ್ಲಿ ವಿಮರ್ಶೆಯ ಕುರಿತ ಸ್ಥೂಲವಾದ ವಿವೇಚನೆಯನ್ನು ಭಾರತೀಯ ಮತ್ತು ಪಾಶ್ಚಿಮಾತ್ಯ ವಿಮರ್ಶಾ ಮಾದರಿಗಳನ್ನು ಆಕರವಾಗಿಸಿಕೊಂಡು ನಿರ್ವಹಿಸಲಾಗಿದೆ. ವಿಮರ್ಶೆಯ ಹುಟ್ಟು, ವಿಮರ್ಶಾ ಸಿದ್ಧಾಂತಗಳ ಸರಳೀಕೃತವಾದ ಪರಿಚಯ, ವಿಮರ್ಶೆಯ ಕುರಿತು ದೇಶಿ ಮತ್ತು ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯಗಳು, ಸಾಹಿತ್ಯ ವಿಮರ್ಶೆಯ ಕುರಿತ ಚರ್ಚೆ, ಸಾಹಿತ್ಯ ಸಂಸ್ಕೃತಿ ಮತ್ತು ಮಾದರಿಯ

ಕುರಿತು ಪರಿಕಲ್ಪನೆಯ ವಿಶ್ಲೇಷಣೆಯನ್ನು ಮುಂದಿಡುವ ಪ್ರಯತ್ನವನ್ನು ಮಾಡಲಾಗಿದೆ. ಹಳಗನ್ನಡ ಪಠ್ಯಗಳಲ್ಲಿ ವಿಮರ್ಶೆಯ ಸಾಧ್ಯತೆಯ ಬಗೆಗಿನ ವಿವೇಚನೆ, ಕನ್ನಡದ ಪ್ರಮುಖ ವಿಮರ್ಶಾ ಮಾದರಿಗಳ ಬಗೆಗಿನ ಚರ್ಚೆಯನ್ನು ಬಿ.ಎಂಶ್ರೀ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕುವೆಂಪು, ಎಸ್. ವಿ. ರಂಗಣ್ಣ, ಬೇಂದ್ರೆ, ಮುಂತಾದವರ ವಿಮರ್ಶೆಯ ಸ್ಥೂಲ ಪರಿಚಯ ಹಾಗೂ ನವ್ಯ ಮತ್ತು ಪ್ರಗತಿಶೀಲ ವಿಮರ್ಶೆಯ ಕುರಿತ ನಿರೂಪಣೆಗಳನ್ನು ಈ ಅಧ್ಯಾಯದಲ್ಲಿ ಕಾಣಬಹುದು.

ನವೋದಯ ಸಂದರ್ಭದಲ್ಲಿ ಬಿ ಎಂ ಶ್ರೀ ಅವರ 'ಕನ್ನಡ ಮಾತು ತಲೆ ಎತ್ತುವ ಬಗೆ', ಕುವೆಂಪು ಅವರ 'ರಸೋ ವೈಸಃ' ಬೇಂದ್ರೆಯವರ 'ಸಾಹಿತ್ಯ ವಿರಾಟ್ ಸ್ವರೂಪ', ಪುತಿನ ಅವರ ಭವ್ಯತೆಯ ಬಗೆಗಿನ ವಿಮರ್ಶಾ ಲೇಖನವನ್ನು ಅಧ್ಯಯನದ ದೃಷ್ಟಿಯಿಂದ ಓದಿಕೊಳ್ಳಲಾಗಿದೆ. ಜೊತೆಗೆ ಕೀರ್ತಿನಾಥ ಕುರ್ತಕೋಟಿ ಅವರ ಯುಗಧರ್ಮ ಮತ್ತು ಸಾಹಿತ್ಯ, ಜಿ ಎಚ್ ನಾಯಕರು ಸಂಪಾದಿಸಿರುವ ಕನ್ನಡ ಸಾಹಿತ್ಯ ಚರಿತ್ರೆ ಭಾಗ ಒಂದು ಮತ್ತು ಎರಡನ್ನು ಗಮನಿಸಲಾಗಿದೆ. ಪ್ರಗತಿಶೀಲ ವಿಮರ್ಶೆಯ ಸ್ಥೂಲ ಚಿತ್ರಣವನ್ನು ನಿರಂಜನ, ಅನಕೃ ಮುಂತಾದವರ ಕೆಲವು ಲೇಖನಗಳನ್ನು ಅಧ್ಯಯನ ಮಾಡುವ ಮೂಲಕ ವಿವರಿಸಿಕೊಳ್ಳಲಾಗಿದೆ. ಅಂದರೆ ವಿಮರ್ಶೆಯ ಬಗೆಗೆ ಇರುವ ಕೆಲವು ಸೂಚನೆಗಳನ್ನು ಮಾತ್ರ ಅಧ್ಯಯನ ಮಾಡಲು ಈ ಬಗೆಯ ಓದಿನ ಮೊರೆ ಹೋಗಲಾಗಿದೆ. ಪೂರ್ಣ ಪ್ರಮಾಣದ ವಿಮರ್ಶೆಯ ಮೌಲ್ಯಮಾಪನ ಮಾದರಿಯನ್ನು ಇಲ್ಲಿ ಅನುಸರಿಸಿಲ್ಲ. ಸ್ಥೂಲವಾಗಿ ಮಾತ್ರ ಗಮನಿಸಲಾಗಿದೆ.

ಹೀಗೆ ವಿವರಣಾತ್ಮಕ ವಿಮರ್ಶೆ, ರಸವಾದಿ ವಿಮರ್ಶೆ (ಕಾವ್ಯಮೀಮಾಂಸೆ ಮತ್ತು ವಿಮರ್ಶೆ) ನಂತರ ಐವತ್ತರ ದಶಕಕ್ಕಾಗಲೇ ಕೃತಿ ಕೇಂದ್ರಿತ ವಿಮರ್ಶೆ, ರೂಪನಿಷ್ಠ ವಿಮರ್ಶೆ ಮತ್ತು ನವ್ಯ ವಿಮರ್ಶೆಯ ಬಗ್ಗೆ ಚಾರಿತ್ರಿಕವಾದ ತಿಳುವಳಿಕೆಯನ್ನು ಈ ಮಹಾಪ್ರಬಂಧದೊಳಗೆ ಚರ್ಚಿಸಲಾಗಿದೆ. ಅಲ್ಲಿಂದ ಮುಂದೆ ಸಾಮಾಜಿಕ ಸಿದ್ಧಾಂತ, ರಾಜಕೀಯ ಸಿದ್ಧಾಂತ ರೂಪಿಸಿದ ವಿಮರ್ಶೆಗಳು ಕನ್ನಡವನ್ನು ವ್ಯಾಪಿಸಿಕೊಂಡ ಬಗೆಯನ್ನು ಉಲ್ಲೇಖಿಸಲಾಗಿದೆ. ಪ್ರಗತಿಶೀಲ ವಿಮರ್ಶೆಯಲ್ಲಿ ಆ ಬಗೆಯ ನೆಲೆಯನ್ನು ಗಮನಿಸಬಹುದು. ರಾಜಕೀಯ ಸಿದ್ಧಾಂತ ಪ್ರೇರಿತವಾದ ವಿಮರ್ಶೆಯು ಸಾಹಿತ್ಯ ವಿಮರ್ಶೆಯಲ್ಲಿ ಇನ್ನೊಂದು ಪಲ್ಲಟವನ್ನು ನಿರ್ಮಿಸಿತು.

೭೦ರ ದಶಕದಲ್ಲಿ ಗೋಪಾಲಕೃಷ್ಣ ಅಡಿಗರ ಸಾಕ್ಷಿಯ ಮೊದಲ ಸಂಚಿಕೆಯ ಲೇಖನದಲ್ಲಿ ಮುಂದಿನ ಸಾಹಿತ್ಯ ಮತ್ತು ಮುಂದಿನ ವಿಮರ್ಶೆ ಹೇಗಿರಬೇಕು ಎಂಬ ವ್ಯಕ್ತವಾದ ಚಿತ್ರಣ ನಮಗೆ ದೊರೆಯುತ್ತದೆ. ಅಲ್ಲಿ ವ್ಯಕ್ತವಾಗುವ ನಿಲುವುಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ತಂದು ನಿಲ್ಲಿಸುವ ಪ್ರಯತ್ನವನ್ನು ಮಾಡಲಾಗಿದೆ.

ಸಾಮಾನ್ಯವಾಗಿ ಸಾಹಿತ್ಯ ವಿಮರ್ಶೆ ಉದಯಗೊಳ್ಳುವ ಸಂದರ್ಭದಲ್ಲಿ ಒರ್ವ ಬರಹಗಾರ, ಒರ್ವ ವಿಮರ್ಶಕ ಹುಟ್ಟುಕೊಳ್ಳುತ್ತಾನೆಂಬ ಪ್ರತೀತಿ ನಮ್ಮ ವಿದ್ವಾಂಸರ ನಡುವೆ ಇದೆ. ನವ್ಯ ಕಾಲದ ಸಾಹಿತ್ಯ ವಿಮರ್ಶೆ ಪೂರೋಗಾಮಿ ನೆಲೆಯಲ್ಲಿ ರೂಪುಗೊಳ್ಳುವ ಹಂತಕ್ಕೆ ಕಿ. ರಂ. ನಾಗರಾಜ ಎಂಬ ವಿಮರ್ಶಕ ಹುಟ್ಟಿಕೊಳ್ಳುತ್ತಾರೆ. ಕಿ. ರಂ. ನಾಗರಾಜ ಅವರು ಬರುವವರೆಗಿನ ಕಾಲದ ಹಿಂದಣ ವಿಮರ್ಶೆಗೆ ಇರುವ ಪ್ರತಿಸ್ಪಂದನ ಏನು? ಮುಂದೆ ಅವರು ಆ ವಿಮರ್ಶೆಯ ಮೂಲಕ ಸಾಹಿತ್ಯವನ್ನು ಅನುಸಂಧಾನಿಸಿದ ಬಗೆ ಯಾವುದು ಎಂಬುದನ್ನು ಗಮನಿಸಲಾಗಿದೆ. ಒಟ್ಟಿನಲ್ಲಿ ತನ್ನ ಕಾಲದಲ್ಲಿ ಚಾಲ್ತಿಯಲ್ಲಿರುವ ನವ್ಯ, ಅಥವಾ ರೂಪನಿಷ್ಠ ಅಥವಾ ಕೃತಿಕೇಂದ್ರಿತ ವಿಮರ್ಶೆಯನ್ನು ಕಿ. ರಂ. ನಾಗರಾಜ ಅವರು ಹೇಗೆ ಬೋಧನೆಯಲ್ಲಿ ಮತ್ತು ವಿಮರ್ಶೆಯಲ್ಲಿ ಒಳಗೊಳ್ಳುತ್ತಾರೆ ಎಂಬುದನ್ನು ಈ ಸಂಶೋಧನೆಯಲ್ಲಿ ನಿರೂಪಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ–೪ ಕನ್ನಡ ಸಾಹಿತ್ಯ ಸಂಸ್ಕೃತಿ ವಿಮರ್ಶೆ:– ಕಿ ರಂ ನಾಗರಾಜ ಮಾದರಿ

ಅಧ್ಯಾಯ ನಾಲ್ಕರಲ್ಲಿ ಇಡೀ ಅಧ್ಯಯನದ ಮೂಲ ಸತ್ವ ಅಡಗಿದೆ. ಕಾರಣ ಸಂಶೋಧನಾ ವಿಷಯವಾದಂತಹ **'ಕನ್ನಡ ಸಾಹಿತ್ಯ ಸಂಸ್ಕೃತಿ ವಿಮರ್ಶೆ: ಕಿ ರಂ ನಾಗರಾಜ ಮಾದರಿ'** ಎಂಬ ಶಿರ್ಷಿಕೆಯ ಮೂಲಾಂಶಗಳನ್ನು ಈ ಅಧ್ಯಾಯದಲ್ಲಿ ವಿವರಿಸುವ ಪ್ರಯತ್ನವನ್ನು ಮಾಡುಲಾಗಿದೆ.

ಕೃತಿ ಕೇಂದ್ರಿತ ವಿಮರ್ಶೆ, ಕರ್ತೃನಿಷ್ಠ ವಿಮರ್ಶೆ, ಮನೋವೈಜ್ಞಾನಿಕ ವಿಮರ್ಶೆ, ರೂಪನಿಷ್ಠ ವಿಮರ್ಶೆ–ರಶ್ಯನ್, ಬ್ರಿಟನ್, ಅಮೆರಿಕನ್, ನಿರಚನ ಅಥವಾ ರಾಚನಿಕ ವಿಮರ್ಶೆ, ಸ್ತ್ರೀವಾದಿ ವಿಮರ್ಶೆ, ಚಾರಿತ್ರಿಕ ವಿಮರ್ಶೆ, ವಾಚಕ ಕೇಂದ್ರಿತ ವಿಮರ್ಶೆ, ದರ್ಶನ ವಿಮರ್ಶೆ, ಸಮಾಜಶಾಸ್ತ್ರೀಯ ವಿಮರ್ಶೆ, ತೌಲನಿಕ ವಿಮರ್ಶೆ ಮತ್ತು ಸಾಂಸ್ಕೃತಿಕ ವಿಮರ್ಶೆ ಎಂಬ ಸಾಹಿತ್ಯ ವಿಮರ್ಶೆಯ ಪ್ರಮುಖ ಪ್ರಸ್ಥಾನಗಳನ್ನು ಗಮನಿಸಬಹುದು. ಈ ಪ್ರಸ್ಥಾನಗಳು ಕಾಲದಿಂದ ಕಾಲಕ್ಕೆ ಸಾಹಿತ್ಯ ಸೃಷ್ಟಿಯ ಸ್ಥಾನಪಲ್ಲಟಗಳನ್ನು ಗಮನಿಸಿಕೊಂಡು ವಿಮರ್ಶೆಯ ಬದಲಾವಣೆಯ ಹಾದಿಯನ್ನು ತುಳಿಯುವುದನ್ನು ಕಾಣಬಹುದು. ಆ ಮೂಲಕ "ಸಾಹಿತ್ಯವೆಂಬುದು ಸಾರ್ವಕಾಲಿಕ ಹಾಗೂ ಸ್ವತಂತ್ರ ಘಟಕವಲ್ಲ. ಅದೊಂದು ಬಗೆಯ ಕಾಲ್ಪನಿಕ ನಿರ್ಮಾಣ (Imaginative construct) ಎಂದರೆ, ಒಂದು ಭಾಷಿಕ ಸಮುದಾಯ ಒಂದು ಕಾಲಘಟ್ಟದಲ್ಲಿ ತನ್ನ ಸಮಕಾಲೀನ ವೈಚಾರಿಕ ಮತ್ತು ಸಾಮಾಜಿಕ ಅವಶ್ಯಕತೆ ಇವುಗಳನ್ನು ಆಧರಿಸಿ 'ಇದು ಸಾಹಿತ್ಯ' ಇದನ್ನು ಅರ್ಥೈಸುವ ಬಗೆ ಹೀಗೆ; ಇದು ಸಾಹಿತ್ಯವಲ್ಲ' ಎಂದು ವರ್ಗಗಳನ್ನು (categories) ನಿರ್ಮಿಸುತ್ತದೆ. **(ರಾಮಚಂದ್ರನ್. ಸಿ.ಎನ್. ೨೦೧೬, ಪುಟ–೪೪)** ಸಾಹಿತ್ಯ ಸ್ವರೂಪ, ಸಮಾಜದಲ್ಲಿ ಸಾಹಿತ್ಯದ ಸ್ಥಾನ ಮತ್ತು ಕೃತಿ, ಲೇಖಕ, ಓದುಗನ ಸಂಬಂಧಗಳು ಬದಲಾದಂತೆ ಸಾಹಿತ್ಯ ಮತ್ತು ಅದನ್ನು ಅರ್ಥೈಸಲಿರುವ ವಿಮರ್ಶಾ ಪ್ರಸ್ಥಾನಗಳು ಬದಲಾಗುತ್ತವೆ. ಇಂತಹ ಬದಲಾವಣೆಯ ಮಾದರಿಯನ್ನು Paradigm shift ಎಂದು ವಿದ್ವಾಂಸರು ಕರೆಯುತ್ತಾರೆ. ಇಂತಹ ಅವಸ್ಥಾಂತರಗಳನ್ನು, ಸಾಹಿತ್ಯ ವಿಮರ್ಶೆಯ ಪಲ್ಲಟಗಳನ್ನು ಕಿ. ರಂ. ನಾಗರಾಜ ಅವರ ವಿಮರ್ಶೆಯ ಮಾದರಿಯಲ್ಲಿಯೂ ಗುರುತಿಸಬಹುದಾಗಿದೆ.

ಕಿ. ರಂ. ನಾಗರಾಜ ಅವರ ವೈಶಿಷ್ಟ್ಯಗಳು ಮತ್ತು ಸೈದ್ಧಾಂತಕ ಸಂಗತಿಗಳು, ಅವರ ಪ್ರಕಾರ ವಿಮರ್ಶೆ ವ್ಯಾಖ್ಯಾನ, ವಿಮರ್ಶೆಯ ಭಾಷೆ, ನವ್ಯ ವಿಮರ್ಶೆ, ಮೌಖಿಕ ವಿಮರ್ಶೆಯ ತೋಂಡಿ ಮಾರ್ಗದ ಮಾದರಿ, ಸಾಹಿತ್ಯವನ್ನು ವಸಾಹತು ಮನೋಧರ್ಮದಿಂದ ಮುಕ್ತಗೊಳಿಸಿದ ನೆಲೆ, ಬೋಧನೆಯ ಮಾದರಿ ಮತ್ತು ಬೋಧಕ ವಿಮರ್ಶೆ, ಉಪನ್ಯಾಸದ ಮಾದರಿ, ಕನ್ನಡ ಕಾವ್ಯಮೀಮಾಂಸೆಯ ಪ್ರಶ್ನೆ ಮತ್ತು ಕಿ. ರಂ. ನಾಗರಾಜ ಮಾದರಿ, ವಿಮರ್ಶೆಯಲ್ಲಿ ಬಹುಶಿಸ್ತೀಯ, ಅಂತರ್‌ಶಿಸ್ತೀಯ ಅಥವಾ ಅನ್ಯಶಿಸ್ತೀಯ ವಿಮರ್ಶಾ ವಿದ್ಯಮಾನ, ಅನೇಕಾಂತವಾದದ ಮಾದರಿ, ಸಂಸ್ಕೃತಿ ವಿಮರ್ಶೆ ಮತ್ತು ಕಿ. ರಂ. ನಾಗರಾಜ ಮಾದರಿ, ಪ್ರಕಾರ ಕೇಂದ್ರಿತ, ಕೃತಿ ಕೇಂದ್ರಿತ ಮತ್ತು ಕರ್ತೃ ಕೇಂದ್ರಿತ ವಿಮರ್ಶಾ ಮಾದರಿ., ಕಾವ್ಯ ಪ್ರಸ್ತುತಿ ಮತ್ತು ಪ್ರದರ್ಶನಾತ್ಮಕ ವಿಮರ್ಶಾ ಮಾದರಿ, ಓದು ಮತ್ತು ಅರ್ಥನಿರಂತರತೆ, ಪೂರ್ವಪಕ್ಷದ ನಿರ್ಮಾಣ, ನವಪಠ್ಯ ಮತ್ತು ಪಾಠಾಂತರದ ನೆಲೆ, ವಿಮರ್ಶೆಯ ವಿಮರ್ಶೆಯ ಸಾಧ್ಯತೆ, ವಿಮರ್ಶೆಯ ಹೈರಾರ್ಕಿ, ಕಿ. ರಂ. ನಾಗರಾಜ ಅವರು ಕಾವ್ಯವನ್ನು ನೋಡುತ್ತಿದ್ದ ಬಗೆ, ಮುನ್ನುಡಿ ಎಂಬ ವಿಮರ್ಶೆ ಮಾದರಿ, ವಿಮರ್ಶೆಯ ಪಲ್ಲಟಗಳು, ಪುಸ್ತಕ ವಿಮರ್ಶೆ ಮತ್ತು ಕಿ. ರಂ. ನಾಗರಾಜ ಮಾದರಿ ಮತ್ತು ಓದಿನ ಮಾದರಿ ಎಂಬ ವಿಚಾರಗಳನ್ನು ಈ ಭಾಗದಲ್ಲಿ ಚರ್ಚಿಸುವ ಪ್ರಯತ್ನವನ್ನು ತಾತ್ತ್ವಿಕವಾಗಿಯೂ ಪ್ರಮೇಯ ಕೇಂದ್ರಿತ ಊಹನಾತ್ಮಕ ಸಿದ್ಧಾಂತದ ಹಿನ್ನೆಲೆಯಲ್ಲಿಯೂ ಮಾಡಲಾಗಿದೆ.

ಕಿ. ರಂ. ನಾಗರಾಜ ಅವರು ಕೇವಲ ಸಾಹಿತ್ಯ ವಿಮರ್ಶಕರು ಮಾತ್ರ ಅಲ್ಲ. ಬದಲಾಗಿ ಕಿ. ರಂ. ಓರ್ವ ಬೋಧಕ ವಿಮರ್ಶಕ (ಅಧ್ಯಾಪಕ) ಎಂಬ ಪರಿಕಲ್ಪನೆಯನ್ನು ಮುಂದಿಟ್ಟಾಗಲೇ ಅವರ ವಿಮರ್ಶೆಯ ಮಾದರಿ ಅರ್ಥಮಾಡಿಕೊಳ್ಳಲು ಸಾಧ್ಯ. ಸಾಹಿತ್ಯ ಪರಂಪರೆಯೊಳಗೆ ವಿಮರ್ಶಕರನ್ನು Poet critic (ಕಾವ್ಯ ವಿಮರ್ಶಕ)ರನ್ನಾಗಿ ಗುರುತಿಸುವ ನೆಲೆಯನ್ನು ಕಾಣಬಹುದು. ಎಲಿಯೇಟ್ ಪೋಯೆಟ್ ಕ್ರಿಟಿಕ್‌ಗೆ ಅತ್ಯುತ್ತಮ ಉದಾಹರಣೆ. ಕನ್ನಡದಲ್ಲಿ ಗೋಪಾಕಲೃಷ್ಣ ಅಡಿಗರು ಮತ್ತು ಲಂಕೇಶ್ ಅವರನ್ನು ಪೋಯೆಟ್ ಕ್ರಿಟಿಕ್ ಆಗಿ ಗುರುತಿಸಬಹುದು. ಅಂತೆಯೇ ಅಧ್ಯಾಪನವನ್ನೇ ಬದುಕಿನುದ್ದಕ್ಕೂ ನಿರ್ವಹಿಸಿದ ಕಿ. ರಂ. ನಾಗರಾಜ ಅವರನ್ನು ಓರ್ವ ಟೀಚರ್ ಕ್ರಿಟಿಕ್ (ಅಧ್ಯಾಪಕ ವಿಮರ್ಶಕ) ಎಂದು ಅಧ್ಯಯನದ ದೃಷ್ಟಿಯಿಂದ ನಿರೂಪಿಸುವ ಪ್ರಯತ್ನವನ್ನು ಮಾಡಲಾಗಿದೆ. ಯು. ಆರ್. ಅನಂತಮೂರ್ತಿ ಅವರು ಸಹ ಓರ್ವ ಅತ್ಯುತ್ತಮ ಟೀಚರ್ ಕ್ರಿಟಿಕ್ ಎಂಬುದನ್ನು ಗಮನಿಸಬಹುದು. **(ಟೀಚರ್ ಕ್ರಿಟಿಕ್ ಎಂಬ ಪದವನ್ನು ಪರಿಚಯಿಸಿದವರು ಪ್ರೊ. ನಟರಾಜ್ ಹುಳಿಯಾರ್ ಅವರು)**

ಇನ್ನು ಕಿ ಒಟ್ಟಿನಲ್ಲಿ ಟೀಚರ್ ಕ್ರಿಟಿಕ್ ಅಥವಾ ಬೋಧಕ ವಿಮರ್ಶಕ, ಅಧ್ಯಾಪಕ ವಿಮರ್ಶಕ ಎಂಬ ಪರಿಕಲ್ಪನೆಯನ್ನು ಅಧ್ಯಯನದೊಳಗೆ ಉದ್ದೇಶ ಪೂರ್ವಕವಾಗಿ ರೂಪಿಸುತ್ತಿದ್ದೇನೆಂದರೆ ಅದಕ್ಕೆ ಕಾರಣ ಕಿ. ರಂ. ನಾಗರಾಜ ಅವರ ಬದುಕಿನ ಬಹುಭಾಗವೂ ತರಗತಿಯೊಳಗಿನ ಪ್ರವೃತ್ತಿಗೆ ಮೀಸಲಾಗಿತ್ತು. ತರಗತಿಯೊಳಗೆ ಅವರು ಬೋಧನೆಯನ್ನು ಕೈಗೊಳ್ಳುತ್ತಲೇ, ಚರ್ಚೆ ಮಾಡುತ್ತಾ ಅವರ ವಿಮರ್ಶಾ ಮಾದರಿಗಳು ನೆಲೆಗೊಳ್ಳುತ್ತಾ ಹೋಗಿವೆ. ಮಾತ್ರವಲ್ಲ ಬೋಧಕ ವಿಮರ್ಶೆಯಲ್ಲಿ ಹೆಚ್ಚಾಗಿ ವಿವರಣಾತ್ಮಕ ವಿಧಾನ ಸೇರಿಕೊಳ್ಳುತ್ತದೆ ಎಂಬುದನ್ನು ಈ ಅಧ್ಯಯನದ ನಾಲ್ಕನೆಯ ಅಧ್ಯಾಯದಲ್ಲಿ ತೋರಿಸಲಾಗಿದೆ.

. ರಂ. ನಾಗರಾಜ ಅವರು ಪಠ್ಯಗಳನ್ನು, ಕವಿಯನ್ನು, ಬರಹಗಾರನನ್ನು ವಿಮರ್ಶೆಗಾಗಿ ಆಯ್ಕೆ ಮಾಡಿಕೊಳ್ಳುವ ವಿಧಾನ; ಆಯ್ಕೆಯ ಮೂಲಕ ನಿರ್ಣಯಕ್ಕೆ ಬರುವ ಮಾದರಿ; ಜೊತೆಗೆ ಮೌಲ್ಯಮಾಪನ ಪ್ರಕ್ರಿಯೆಗೆ ತೆರೆದುಕೊಳ್ಳುವ ಬಗೆಯನ್ನು ಅವರ ತರಗತಿಯೊಳಗಿನ ಬೋಧಕ ವಿಮರ್ಶೆಯು ನಿರ್ವಹಿಸಿದೆ. ತೌಲನಿಕ ವಾದಗಳ ಮೂಲಕ ಅವರು ಆ ಕಾಲ ಘಟ್ಟದ ವಿಮರ್ಶಾ ನೋಟ ಕ್ರಮವನ್ನು ರೂಪಿಸಿಕೊಳ್ಳಲು ಪ್ರಯತ್ನ ಮಾಡಿದ್ದರು. ಓರ್ವ ಬೋಧಕ ವಿಮರ್ಶಕನಾಗಿ ಅವರನ್ನು ಸೂಕ್ಷ್ಮ ರೀತಿಯಲ್ಲಿ ಅಧ್ಯಯನ ಮಾಡಲು ಅವರ ವಿದ್ಯಾರ್ಥಿಗಳ ಸಂದರ್ಶನ, ತರಗತಿ ಪಾಠದ ಕುರಿತು ಅವರ ವಿದ್ಯಾರ್ಥಿಗಳು ಬರೆದ ಲೇಖನವನ್ನು ಆಕರವಾಗಿ ಬಳಸಲಾಗಿದೆ. ಈ ಮಾದರಿ ಪೂರ್ಣ ಪ್ರಮಾಣದಲ್ಲಿ ರೂಪ ಪಡೆದುಕೊಂಡಿರುವುದು ಅವರ ವಿದ್ಯಾರ್ಥಿಗಳು ಬರೆದ ಲೇಖನ ಮತ್ತು ಕೆಲವಾರು ಸಂದರ್ಶನಗಳ ಹಿನ್ನೆಲೆಯಿಂದ.

ಅಂತೆಯೇ ಬೋಧಕ ವಿಮರ್ಶಕರ ಸಂಖ್ಯೆ ಕನ್ನಡದಲ್ಲಿ ದೊಡ್ಡ ಮಟ್ಟದಲ್ಲಿದೆ. ವಿಮರ್ಶಕ ಒಂದು ಪುಸ್ತಕವನ್ನು ಓದಿ ವಿಮರ್ಶೆ ಮಾಡಿ ಸುಮ್ಮನಿರುತ್ತಾನೆ. ಆದರೆ ಬೋಧಕ ವಿಮರ್ಶಕ ತನ್ನ ಮುಂದೆ ಕುಳಿತ ನಲವತ್ತು ಐವತ್ತು ಮಂದಿ ವಿದ್ಯಾರ್ಥಿಗಳ ವಿಮರ್ಶಾ ಪ್ರಜ್ಞೆಯನ್ನು ತಿದ್ದುವ ಕೆಲಸವನ್ನು ಮಾಡುತ್ತಾನೆ. ಕಿ. ರಂ ನಾಗರಾಜ ಅವರು ತಮ್ಮ ೨೪ ವರ್ಷ ವಯಸ್ಸಿನಿಂದ ಉಪನ್ಯಾಸಕ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಸುಮಾರು ೬೫ ವರ್ಷ ವಯಸ್ಸಾಗುವವರೆಗೂ ಎಂ. ಎ ಎಂಫಿಲ್ ತರಗತಿಗಳಿಗೆ ಪಾಠ ಪ್ರವಚನ, ಸೆಮಿನಾರ್, ಸಣ್ಣಪುಟ್ಟ ಹರಟೆಗಳನ್ನು ಮಾಡುತ್ತಲೇ ಬಂದವರು. ಅಧ್ಯಾಪನ ವೃತ್ತಿಯಲ್ಲಿ ಸುಮಾರು ೪೦ ವರ್ಷಗಳ ಸ್ವಾರ್ಥರಹಿತ ಕೊಡುಗೆಯನ್ನು ಕಿ.ರಂ ನಾಗರಾಜ ಅವರು ನೀಡಿದ್ದಾರೆ. ಈ ಕಾಲಾವಧಿಯಲ್ಲಿ ಅವರ ಅಧ್ಯಾಪನ, ಬೋಧನೆ, ಉಪನ್ಯಾಸ, ಭಾಷಣ ಇತ್ಯಾದಿಗಳು ಅವರ ವಿಮರ್ಶೆಯ ಮಾದರಿಯಾಗಿ ಹೇಗೆ ರೂಪ ಪಡೆದುಕೊಳ್ಳುತ್ತಿತ್ತು ಎಂಬುದನ್ನು ಅಧ್ಯಾಯ ನಾಲ್ಕರಲ್ಲಿ ಕಾಣಿಸಲಾಗಿದೆ.

ಅಧ್ಯಯನದ ಸಮಸ್ಯೆಯನ್ನು ಮತ್ತಷ್ಟು ವಿಸ್ತರಿಸುತ್ತಾ ಹೋದಂತೆ ಕೇಂದ್ರೀಕೃತವಾಗಿ ಗಮನಿಸಿದ ಅಂಶವೆಂದರೆ ಕಿ.ರಂ. ಸಾಹಿತ್ಯವನ್ನು ಹೇಗೆ ವಿವರಿಸಿಕೊಂಡರು? ಸಾಹಿತ್ಯವನ್ನು ಹೇಗೆ ವಿವರಿಸಿದರು? ಮೀಮಾಂಸೆಯನ್ನು ಹೇಗೆ ತಮ್ಮ ವಿಮರ್ಶೆಯೊಳಗೆ ರೂಪಿಸಿಕೊಂಡರು? ಸಾಹಿತ್ಯ ಕೃತಿಗಳನ್ನು ನೋಡುವ ಕ್ರಮವನ್ನು ಹೇಗೆ ನಿರ್ವಹಿಸಿದರು? ಆ ನಂತರ ಓದುಗರಿಗೆ ವಿಮರ್ಶೆಯನ್ನು ಹೇಗೆ ತಲುಪಿಸಿದರು? ಹೊಸ ಹೊಸ ಪಠ್ಯಗಳನ್ನು ಹೇಗೆ ನಿರ್ಮಾಣ ಮಾಡಿದರು? ಮತ್ತು ನಿರಂತರವಾಗಿ ಅರ್ಥಗಳನ್ನು ಮುಂದೂಡಿ ಹೇಗೆ ಹೊಸ ಅರ್ಥಗಳನ್ನು ಕೃತಿಗೆ ಕೊಡಲು ಪ್ರಯತ್ನಪಟ್ಟರು? ಅದು ಹಂತ ಹಂತವಾಗಿ ಹೇಗೆ ಬೆಳೆಯಿತು ಎಂಬುದನ್ನು ನನ್ನ ಸಂಶೋಧನೆಯಲ್ಲಿ ಮೂಲಭೂತವಾಗಿ ತೋರಿಸುವ ಪ್ರಯತ್ನ ಪ್ರಜ್ಞಾಪೂರ್ವಕವಾಗಿ ಕೆಲವು ಕಡೆಗಳಲ್ಲಿ ಮಾಡಲಾಗಿದೆ. ಆದರೆ ಅದು ಎಷ್ಟರ ಮಟ್ಟಿಗೆ ಯಶಸ್ವಿ ಪ್ರಯತ್ನವೆಂಬುದು ಮಾತ್ರ ಅಸ್ಪಷ್ಟ. ಜೊತೆಗೆ ಕಿ. ರಂ. ನಾಗರಾಜ ಅವರ ವಿಮರ್ಶೆಯಲ್ಲಿ ಲಿಟರರಿ ಥಿಯರಿಗಳು ಹೇಗೆ ವ್ಯಕ್ತವಾಗುತ್ತವೆ? ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆ ಎರಡನ್ನೂ ರೂಪಿಸಿಕೊಂಡ ಆಧಾರದಲ್ಲಿ ಮೂಡುವ ಅಂಶವಾದ ಲಿಟರರಿ ಥಿಯರಿಗಳನ್ನು ಅವರು ಹೇಗೆ ಅನುಸಂಧಾನ ಮಾಡಿದ್ದಾರೆ? ಯಾವುದೇ ಒಂದು ಕೃತಿಯನ್ನು ಪ್ರವೇಶಿಸಬೇಕಾದರೆ ಎಲ್ಲಿಂದ ಪ್ರವೇಶಿಸುತ್ತಿದ್ದರು? ಆ ನಂತರ ಯಾವ ಯಾವ ಕ್ರಿಟಿಕಲ್ ಟೂಲ್ಸ್‌ಗಳನ್ನು ಬಳಸುತ್ತಿದ್ದರು? ಯಾವ ಯಾವ ವಿಮರ್ಶಾ ಪರಿಕಲ್ಪನೆಗಳನ್ನು, ಮಾರ್ಗಗಳನ್ನು ತಮ್ಮ ತರಗತಿಯಲ್ಲಿ, ಭಾಷಣ, ಉಪನ್ಯಾಸಗಳಲ್ಲಿ ತರುತ್ತಿದ್ದರು? ಎಂಬುದನ್ನು ಗುರುತಿಸಲಾಗಿದೆ. ಕುಮಾರವ್ಯಾಸನ ಕುರಿತು ಪಠ್ಯವನ್ನು ತರಗತಿಯಲ್ಲಿ ಬೋಧಿಸುವಾಗ ರಾಮಮನೋಹರ ಲೋಹಿಯಾ ಅವರ ರಾಮಕೃಷ್ಣ ಲೇಖನವನ್ನು ಓದಿಕೊಂಡು ಭಿನ್ನವಾದ ರಾಜಕೀಯ ಓದಿನ ಪರಿಪ್ರೇಕ್ಷೆಯನ್ನು ಮುಂದಿಟ್ಟಿದ್ದರು. ಅದು ಎಪ್ಪತ್ತರ ದಶಕದ ಕಾಲಘಟ್ಟ. ಎಪ್ಪತ್ತರಲ್ಲೇ ಇಂತಹ ಆಲೋಚನೆಗಳನ್ನು ತರುವ ಮೂಲಕ ಓದಿನ ಇನ್ನೊಂದು ಮಾದರಿಯನ್ನು ಅವರು ಪರಿಚಯಿಸಿದ್ದರು. ಇಂತಹ ಸಾಧ್ಯತೆಗಳು ಕಿ. ರಂ. ನಾಗರಾಜ ಅವರ ಬರವಣಿಗೆಯಲ್ಲಿ ಕಾಣಲು ಸಾಧ್ಯವಿಲ್ಲ. ಬರೆಯುವಾಗ ಅವರು ತುಂಬಾ ಪ್ರಜ್ಞಾಪೂರ್ವಕವಾಗುತ್ತಾರೆಂದು ಅವರ ಶಿಷ್ಯರು, ಸಮಕಾಲೀನರು ಹೇಳುತ್ತಾರೆ. ಅವರು ತಮ್ಮನ್ನು ಮೀರಿ ಬರೆಯಲು ಪ್ರಯತ್ನ ಪಡಲಿಲ್ಲ ಎಂಬುದು ನಿಜ. ಅವರು ಬರವಣಿಗೆ ಮಾಡದಿರಲು ಕೆಲವಾರು ಕಾರಣಗಳಿವೆ. ವಿಮರ್ಶಕರಿಗೆ ಬರೆಯುತ್ತಿದ್ದಂತೆ ಆಲೋಚನೆಗಳು ಸ್ಪಷ್ಟವಾಗುತ್ತಾ ಹೋಗುತ್ತದೆ. ಕಿ. ರಂ. ನಾಗರಾಜ ಅವರಿಗೆ ಮಾತು ಆಲೋಚನೆಗಳನ್ನು ವಿಸ್ತರಿಸುವಂತೆ ಬರಹ ಮಾತಿನಷ್ಟು ವಿಸ್ತಾರವಾಗಲಿಲ್ಲ. ಬರಹಗಳಲ್ಲಿ ಅವರ ಆಲೋಚನೆ ಕಡಿಮೆ ಮಟ್ಟದಲ್ಲಿ ವ್ಯಕ್ತವಾಗಲು ಇದೇ ಕಾರಣ. ಕಿ. ರಂ. ನಾಗರಾಜ ಅವರು ತೀವ್ರವಾದ ಆಲೋಚನೆ ಮಾಡುತ್ತಿದ್ದರಿಂದ ಆಲೋಚನೆಗಳು ಬರಹದಲ್ಲಿ ಸ್ವಲ್ಪಮಟ್ಟಿಗೆ ಕಡಿಮೆಯಾಗಿ ವ್ಯಕ್ತವಾಗುತ್ತಿತ್ತು. ಆದರೆ ಭಾಷಣಗಳಲ್ಲಿ, ಉಪನ್ಯಾಸಗಳಲ್ಲಿ, ಚರ್ಚೆ, ಸಂವಾದಗಳಲ್ಲಿ ಹೊಸಹೊಳಹು ಚಿಮ್ಮಿ ಬರುತ್ತಿದ್ದವು. ಈ ಪ್ರಕ್ರಿಯೆಯನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು ಎಂಬ ಉದ್ದೇಶದಿಂದ ಅಧ್ಯಾಯ ನಾಲ್ಕರಲ್ಲಿ ಕಿ. ರಂ. ನಾಗರಾಜ ಅವರ ವಿಮರ್ಶೆಯು ಮೌಖಿಕ ವಿಮರ್ಶೆಯು ತೋಂಡಿ ವಿನ್ಯಾಸದಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ ಎಂಬುದನ್ನೂ ಚರ್ಚಿಸಲಾಗಿದೆ.

ಇನ್ನು ಕನ್ನಡ ಸಂಸ್ಕೃತಿ ವಿಮರ್ಶೆ ಮತ್ತು ಸಂಸ್ಕೃತಿ ಚಿಂತನೆಯ ಸ್ವರೂಪದ ಬಗ್ಗೆ ಕಿ. ರಂ. ನಾಗರಾಜ ಅವರು ಏನು ಹೇಳಿದ್ದರು? ಸಂಸ್ಕೃತಿ ವಿಮರ್ಶೆಯು ಕಿ. ರಂ. ನಾಗರಾಜ ಅವರ ವಿಮರ್ಶೆಯಲ್ಲಿ ಹೇಗೆ ಅಂತಸ್ಥವಾಗಿದೆ ಎಂಬುದನ್ನು ಗುರುತಿಸಲಾಗಿದೆ. ಅವರು ಯಾವ ಯಾವ ವಿಮರ್ಶಾ ಪಠ್ಯಗಳನ್ನು ಹೆಚ್ಚು ಮುನ್ನೆಲೆಗೆ ತರುತ್ತಿದ್ದರು? ಭಾರತೀಯ ಕಾವ್ಯಮೀಮಾಂಸೆಗೆ ಕನ್ನಡ ಕಾವ್ಯಮೀಮಾಂಸೆಯನ್ನು ಮುಖಾಮುಖಿಯಾಗಿಸುತ್ತಿದ್ದ ಮಾದರಿಗಳನ್ನು ಅವರು ಹೇಗೆ ನಿರ್ವಹಿಸುತ್ತಿದ್ದರು? ಎಂಬುದನ್ನು ವಿವೇಚಿಸಲಾಗಿದೆ. ಆಧುನಿಕ ಕನ್ನಡ ವಿಮರ್ಶೆ ಎಂಬುದು ಕಿ. ರಂ. ನಾಗರಾಜ ಅವರು ಬರೆಯುವ ಅಥವಾ ಮಾತನಾಡುವ ಹೊತ್ತಿಗೆ ಎಲ್ಲಿಯವರೆಗೆ ಬಂದು ನೆಲೆಗೊಂಡಿತ್ತು? ಕಿ. ರಂ. ನಾಗರಾಜ ಅವರು ವಿಮರ್ಶೆ

ಬರೆಯುವ ಕಾಲಕ್ಕೆ ಯಾವ ಯಾವ ರೀತಿಯ ವಿಮರ್ಶೆ ಚಾಲ್ತಿಯಲ್ಲಿತ್ತು? ಆ ಮೂಲಕ ಅವರು ಭಿನ್ನ ಹಾದಿಯ ವಿಮರ್ಶೆಯ ಕೇಂದ್ರಕ್ಕೆ ಹೇಗೆ ಬರುತ್ತಾರೆ? ಎಂಬ ಚರ್ಚೆಗಳನ್ನು ಸಾಧ್ಯವಾದಷ್ಟರ ಮಟ್ಟಿಗೆ ಪೂರಕ ಆಕರಗಳನ್ನು ಸಂಯೋಜಿಸಿ ಮಾಡಲಾಗಿದೆ.

ಅಧ್ಯಾಯ–೫ ಕಿ ರಂ ನಾಗರಾಜ ಮತ್ತು ಕಾವ್ಯ ವಿಮರ್ಶೆಯ ವಿಶ್ಲೇಷಣೆ

ಕಿ. ರಂ. ನಾಗರಾಜ ಅವರು ವಿಮರ್ಶೆಗಾಗಿ ಕಾವ್ಯವನ್ನೇ ಹೆಚ್ಚಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಕಥೆ, ಕಾದಂಬರಿಯ ಕುರಿತು ಅವರು ಮಾತನಾಡಿದ್ದು ಅಪರೂಪ. ಈ ಹಿನ್ನೆಲೆಯಿಂದ ಅವರು ವಿಮರ್ಶಿಸಿದ ಕನ್ನಡ ಕಾವ್ಯಗಳನ್ನು ಸಾಹಿತ್ಯ ಚರಿತ್ರೆ ಒದಗಿಸಿಕೊಟ್ಟಂತಹ ಕಾಲಘಟ್ಟದ ಆಧಾರದಲ್ಲಿ ಚರ್ಚಿಸಲಾಗಿದೆ. ಆದರೆ ಕಿ. ರಂ. ನಾಗರಾಜ ಅವರು ಯಾವತ್ತೂ ಸಾಹಿತ್ಯವನ್ನು ಇದು ಆಧುನಿಕ, ಇದು ಪ್ರಾಚೀನ ಎಂದು ಕಾಲಘಟ್ಟದ ಆಧಾರದಲ್ಲಿ ವಿಭಾಗಿಸುವ ಪ್ರಮೇಯವನ್ನು ಮುಂದಿಟ್ಟಿರಲಿಲ್ಲ. ಬದಲಾಗಿ ಕಾಲಾತೀತವಾಗಿ ಕವಿಯನ್ನು ಕಾವ್ಯವನ್ನು ಸಮಕಾಲೀನತೆಗೆ ತಂದು ನಿಲ್ಲಿಸುವ ಕೆಲಸವನ್ನು ಮಾಡುತ್ತಿದ್ದರು. ಅದು ಪಂಪನಾಗಿರಲಿ ಅಥವಾ ಬೇಂದ್ರೆಯಾಗಿರಲಿ. ಈ ಬಗೆಯ ಮಾದರಿಯನ್ನು ಮುಂದಿಟ್ಟಂತಹ ಕಿ. ರಂ ನಾಗರಾಜರ ಕಾವ್ಯ ಕೇಂದ್ರಿತ ವಿಮರ್ಶಾ ದೃಷ್ಟಿಕೋನಗಳನ್ನು ಸಂಶೋಧನೆಯ ಸವಲತ್ತಿಗಾಗಿ ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ.

ಹಳಗನ್ನಡ ಸಾಹಿತ್ಯ ಪ್ರಕಾರದ ಪ್ರಮುಖ ಲಾಕ್ಷಣಿಕನಾದ ಶ್ರೀವಿಜಯನ ಕವಿರಾಜ ಮಾರ್ಗದ ಕುರಿತು, ಪಂಪನ ವಿಕ್ರಮಾರ್ಜುನ ವಿಜಯ, ಆದಿಪುರಾಣ ಕೃತಿಗಳ ಕುರಿತು ಕಿ. ರಂ. ನಾಗರಾಜ ಅವರು ಮುಂದಿಟ್ಟಂತಹ ವಿಮರ್ಶೆಯನ್ನು, ಕಾಲಾತೀತವಾಗಿ ರೂಪಿಸಿದ ಚಿಂತನಾ ಮಾದರಿಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ. ಇತರ ವಿಮರ್ಶಕರಿಗಿಂತ ಪಂಪನನ್ನು, ರನ್ನ, ಜನ್ನನನ್ನು ಕುರಿತು ಅವರು ಕಟ್ಟಿಕೊಟ್ಟ ವಿಮರ್ಶಾ ಒಳನೋಟಗಳಾವು ಎಂಬಂತಹ ಹಲವು ಸಾಹಿತ್ಯ ವಿಮರ್ಶೆಯ ಪ್ರಶ್ನೆಗಳನ್ನು ಈ ಭಾಗ ಕೇಳಿಕೊಳ್ಳುವ ಮೂಲಕ ಹೊಸ ವಿಚಾರವನ್ನು ದರ್ಶಿಸುವ ಪ್ರಯತ್ನ ಮಾಡಲಾಗಿದೆ.

ಮಧ್ಯಕಾಲೀನ ಕನ್ನಡ ಸಾಹಿತ್ಯ ಪರಂಪರೆಯ ಪ್ರಮುಖ ಭಕ್ತಿ ಪಂಥವಾದ ವಚನಗಳ ಕುರಿತು, ವಚನಕಾರರಾದ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿಯ ಕುರಿತು ಕಿ. ರಂ. ನಾಗರಾಜ ಅವರು ಹಲವಾರು ಬರಹ, ಚರ್ಚೆ, ಸಂವಾದಗಳನ್ನು ಹುಟ್ಟುಹಾಕಿದ್ದಾರೆ. ಈ ಹಿನ್ನೆಲೆಯಲ್ಲಿ ಅನುಭಾವ ಪರಂಪರೆಯ ಚಾರಿತ್ರಿಕ ನೋಟಗಳನ್ನು, ವಚನಗಳ ವಿನ್ಯಾಸವನ್ನು, ವಚನಗಳನ್ನು ಆಧುನಿಕ ಪ್ರತಿಕ್ರಿಯೆಯಾಗಿ ಬದಲಾಯಿಸಿದ ಕಿ. ರಂ. ನಾಗರಾಜ ಅವರ ದೃಷ್ಟಿಕೋನವನ್ನು ಈ ಭಾಗದಲ್ಲಿ ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.

ಜನಪದದ ಕುರಿತು ಕಿ. ರಂ. ನಾಗರಾಜ ಅವರಿಗೆ ಅಪಾರವಾದ ಆಸಕ್ತಿ ಇತ್ತು. ನೆಲದ ಸಂಸ್ಕೃತಿಯನ್ನು ಉಳಿಸುವ ಮತ್ತು ಕನ್ನಡ ಸಾಹಿತ್ಯವನ್ನು ಆ ಮೂಲಕ ಪ್ರತಿನಿಧಿಸುವ ಕಾಯಕದಲ್ಲಿ ಅವರು ತೊಡಗಿಕೊಂಡಿದ್ದರು. ಮಂಟೇಸ್ವಾಮಿ, ಕನಕದಾಸರಂತಹ ನೆಲದ ನಾಯಕರ ಮೂಲಕ ದೇಶೀಯ ಪ್ರಜ್ಞೆಯನ್ನು ಮತ್ತಷ್ಟು ಭದ್ರಪಡಿಸುವ ಅವರ ಯೋಜನೆಗೆ ಕಾಲಜ್ಞಾನಿ ಕನಕ ನಾಟಕ ಉತ್ತಮ ಉದಾಹರಣೆಯಾಗಿದೆ. ಈ ಭಾಗದಲ್ಲಿ ಒಟ್ಟು ಕಿ. ರಂ. ನಾಗರಾಜ ಅವರು ಜನಪದವನ್ನು ಪರಿಭಾವಿಸಿದ ನೆಲೆಗಳು ಯಾವುದು? ಆ ಮೂಲಕ ನೆಲದ ನಾಯಕರನ್ನು ತಮ್ಮ ವಿಮರ್ಶಾ ಒಳನೋಟಗಳ ಮೂಲಕ ಕಟ್ಟಿಕೊಟ್ಟ ಕ್ರಮಗಳು ಯಾವುವು? ಆ ಮೂಲಕ ಸ್ಥಾಪಿಸಲು ಪ್ರಯತ್ನಿಸಿದ ವಿಚಾರಧಾರೆಗಳು ಯಾವುವು? ಎಂಬುದನ್ನು ಸ್ಪಷ್ಟಪಡಿಸುವ ಪ್ರಯತ್ನವನ್ನು ಈ ಭಾಗದಲ್ಲಿ ಮಾಡಲಾಗಿದೆ.

ಕಿ. ರಂ. ನಾಗರಾಜ ಅವರ ಕಾವ್ಯ ವಿಮರ್ಶೆಯ ಸ್ವರೂಪಗಳು ಯಾವುವು? ಎಂಬುದನ್ನು ಚರ್ಚಿಸುತ್ತಲೇ, ಕುವೆಂಪು, ಬೇಂದ್ರೆ, ಗೋಪಾಲಕೃಷ್ಣ ಅಡಿಗ, ಸಿದ್ಧಲಿಂಗಯ್ಯನವರ ಕಾವ್ಯಗಳನ್ನು ಪ್ರಾತಿನಿಧಿಕವಾಗಿ ಆಯ್ಕೆಮಾಡಿಕೊಂಡು ಪ್ರಾಯೋಗಿಕ ನೆಲೆಯಲ್ಲಿ ಅಭ್ಯಸಿಸುವ ಪ್ರಯತ್ನವನ್ನು ಮಾಡಲಾಗಿದೆ. ಬೇಂದ್ರೆಯ ಕವನದ ಕುರಿತು ಕಿ. ರಂ. ನಾಗರಾಜ ಅವರು ಹೊಸಬಗೆಯ ಒಳಹನ್ನು ಕನ್ನಡಕ್ಕೆ ಪರಿಚಯಿಸಿದವರು. ಪಿ. ಲಂಕೇಶ್, ಚಂದ್ರಶೇಖರ ಕಂಬಾರರ ನಾಟಕವನ್ನು ಬಹುಮಟ್ಟಿಗೆ ಮೆಚ್ಚಿ ನುಡಿದವರು. ಅಡಿಗರ ಕಾವ್ಯ ಶೈಲಿಯ ಬಗ್ಗೆ ಕುರುಡು ಭಕ್ತಿಯನ್ನು ಪ್ರದರ್ಶಿಸಿದವರು. ಈ ಕಾರಣದಿಂದಾಗಿ ಅವರ ಆಸಕ್ತಿಯ ನೆಲೆಯನ್ನು ಕೆಲವು ಮಿತಿಗಳನ್ನು ಒಳಗೊಂಡಂತೆ, ಆಧುನಿಕ ಕನ್ನಡ ಸಾಹಿತ್ಯದ ಹೊಸಬಗೆಯ ಕಾಣ್ಕೆಗಳೇನು ಎಂಬುದನ್ನು ಈ ಭಾಗದಲ್ಲಿ ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ. ಇನ್ನೂ ಜಾಗತಿಕ ಸಾಹಿತ್ಯ ಮತ್ತು ಕಿ. ರಂ ನಾಗರಾಜ ವಿಮರ್ಶೆ ಎಂಬ ಭಾಗದಲ್ಲಿ ಒಟ್ಟು ಜಾಗತಿಕ ಸಾಹಿತ್ಯದ ಬಗ್ಗೆ ಕಿ. ರಂ. ನಾಗರಾಜ ಅವರ ಆಲೋಚನೆಗಳೇನು ಎಂಬುದನ್ನು ಚರ್ಚಿಸಲಾಗಿದೆ.

ಇನ್ನೊಂದು ಬಹುಮುಖ್ಯ ಅಂಶವನ್ನು ಇಲ್ಲಿ ಹೇಳಲೇಬೇಕು. ಕಿ. ರಂ. ನಾಗರಾಜ ಅವರು ತಮ್ಮ ವಿಮರ್ಶೆಯಲ್ಲಿ ಪ್ರಶ್ನೆಗಳನ್ನು ಮಾತ್ರ ಎತ್ತುತ್ತಾರೆ. ಅದಕ್ಕೆ ಪೂರ್ಣಪ್ರಮಾಣದ ಉತ್ತರ ನೀಡುವುದಿಲ್ಲ ಎಂಬ ಅಪವಾದವಿದೆ. ಇದಕ್ಕೆ ಕಾರಣ ಕಿ. ರಂ ನಾಗರಾಜ ಅವರು ಕೆಲವು ಪ್ರಶ್ನೆಗಳನ್ನು ಎತ್ತಿ ಮುಂದಕ್ಕೆ ಹೋಗುತ್ತಾರೆ ಎನ್ನುವಾಗಲೂ ಅವರು ಪೂರ್ಣ ಪ್ರಮಾಣದ ತತ್ತ್ವಜ್ಞಾನಿಯಲ್ಲ ಎಂಬುದನ್ನು ಸಹ ನಾವು ಅರ್ಥಮಾಡಿಕೊಳ್ಳಬೇಕು. ಅವರ ಸಾಧ್ಯತೆಗಳಷ್ಟೇ ಮಿತಿಯ ಬಗೆಯೂ ನಮಗೆ ಅರಿವಿರಬೇಕು. ಪ್ರಶ್ನೆಗಳನ್ನು ಎತ್ತುವುದು ಕೂಡ ಸಾಹಿತ್ಯ, ಸಂಸ್ಕೃತಿ ವಿಮರ್ಶೆಯ ಬಹು ಮುಖ್ಯವಾದ ಕೆಲಸ. ವಿಮರ್ಶೆಯಲ್ಲಿ ಅಥವಾ ಎಲ್ಲೇ ಆಗಲಿ ಅವರು ಪ್ರಶ್ನೆಗಳನ್ನು ಎತ್ತಿದ್ದಾರೆಂದರೆ ಉತ್ತರ ಕೊಡಲು ಆ ಪ್ರಶ್ನೆ ಎತ್ತಿದ್ದಾರೆಂದಲ್ಲ. ಅನೇಕ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕಾಗಿಯೂ ಇಲ್ಲ. ಆದ್ದರಿಂದ ಸಂಶೋಧಕನಾಗಿ ನಾನು ಬಿಡಿಸಬೇಕಾದ ತೊಡಕುಗಳು ಯಾವುದೆಂದರೆ ಕಿ. ರಂ. ನಾಗರಾಜ ಅವರು ಸಾಹಿತ್ಯಕವಾಗಿ ವಿಮರ್ಶೆಯ ಮೂಲಕ ಎತ್ತಿದ ಪ್ರಶ್ನೆಗಳು ಇನ್ನೆಲ್ಲೂ ಪ್ರತಿಫಲನಗೊಂಡಿದೆಯೆ? ಎಂಬುದನ್ನು ಗುರುತಿಸುವುದೇ ಆಗಿದೆ. ಈ ಗುರುತಿಸುವ ಪ್ರಯತ್ನವನ್ನು ಸಣ್ಣ ಮಟ್ಟಿಗೆ ಮಾಡಲಾಗಿದೆ.

ಅಧ್ಯಾಯ–೬ ಕಿ ರಂ ನಾಗರಾಜ ಸಾಹಿತ್ಯ ಸಂಸ್ಕೃತಿ ವಿಮರ್ಶಾ ವಾಗ್ವಾದಗಳ ಮಾದರಿ

ಕನ್ನಡ ಸಂಸ್ಕೃತಿಯ ಕುರಿತು, ಭಾಷೆಯ ಕುರಿತು ಕಿ. ರಂ ನಾಗರಾಜ ಅವರಿಗೆ ವಿಶಿಷ್ಟವಾದ ಆಲೋಚನೆಗಳಿದ್ದು, ಅವುಗಳೆಲ್ಲವು ಸಹ ವಾಗ್ವಾದಗಳ ಸ್ವರೂಪದಲ್ಲಿ ವ್ಯಕ್ತವಾಗಿದೆ. ಪ್ರತಿ ವಾಗ್ವಾದಗಳು ಜ್ಞಾನಶಾಖೆಗಳನ್ನು ಕಟ್ಟುವ ಕೆಲಸವನ್ನು ಮಾಡುತ್ತವೆ. ಅಂತಹ ಪ್ರಮುಖ ವಿದ್ಯಮಾನಗಳನ್ನು ಈ ಅಧ್ಯಾಯದಲ್ಲಿ ಶೋಧಿಸುವ ಕೆಲಸ ಮಾಡಲಾಗಿದೆ.

ಗೋಕಾಕ್ ಚಳುವಳಿಯ ಸಂದರ್ಭ ಕಿ. ರಂ. ನಾಗರಾಜ ಅವರು ಇಡೀ ಚಳುವಳಿಗೆ ವಿರೋಧಾತ್ಮಕವಾಗಿ ಮುಖಾಮುಖಿಯಾಗುತ್ತಾರೆ. ಈ ಬಗೆಯ ನಿಲುವಿಗೆ ಕಾರಣಗಳೇನು? ಪ್ರಸ್ತುತ ಗೋಕಾಕ್ ಚಳುವಳಿಯ ಪರಿಣಾಮಗಳೇನು? ಎಂಬ ಚಾರಿತ್ರಿಕ ವಿಚಾರಗಳನ್ನು ಈ ಭಾಗದಲ್ಲಿ ಚರ್ಚಿಸುವ ಕೆಲಸ ಮಾಡಲಾಗಿದೆ. ಸಂಸ್ಕೃತ ವಿಶ್ವವಿದ್ಯಾಲಯ ಕರ್ನಾಟಕದಲ್ಲಿ ಸ್ಥಾಪನೆಯಾಗುವ ಪ್ರಸ್ತಾವನೆಯನ್ನು ಆಗಿನ ಬಿಜೆಪಿ ಸರಕಾರ ಮುಂದಿಟ್ಟಾಗ ಅದನ್ನು ವಿರೋಧಿಸಿದ ಮೊದಲಿಗರಲ್ಲಿ ಕಿ. ರಂ. ನಾಗರಾಜ ಅವರು ಓರ್ವರು. ಕನ್ನಡದ ಬಗೆಗಿನ ಅಪಾರವಾದ ಕಾಳಜಿ ಮತ್ತು ಕನ್ನಡ ಮತ್ತು ಸಂಸ್ಕೃತದ ನಡುವಿನ ವ್ಯತ್ಯಾಸವಿಲ್ಲದ ಮೀಮಾಂಸೆಯ ವಿಧಾನ, ಕನ್ನಡ ಸಾಹಿತ್ಯದ ಪ್ರೇರಣಾ ಶಕ್ತಿ ಸಂಸ್ಕೃತ ಎಂಬ ಆರೋಪಣೆ

ಹಾಗೂ ಅಭಿಜಾತ ಭಾಷೆಯಾಗಿ ಸಂಸ್ಕೃತದ ಪ್ರಭುತ್ವವಾದಿ ನೆಲೆಗಳು ಅವರನ್ನು ಸಂಸ್ಕೃತ ವಿಶ್ವವಿದ್ಯಾಲಯ ರೂಪುಗೊಳ್ಳುವುದನ್ನು ವಿರೋಧಿಸುವಂತೆ ಮಾಡಿತು. ಈ ಬಗೆಯ ವಿಸ್ತೃತ ವಿವರಗಳ ಜೊತೆಗೆ ಸ್ಥಾವರ ಭಾಷಿಕ ಸಂಸ್ಥೆಯೊಂದಕ್ಕೆ ಅವರು ಅಪ್ಪಟ ಕನ್ನಡಿಗ ವಿರೋಧಾತ್ಮಕವಾಗಿ ಸ್ಪಂದಿಸಿದ ಚಾರಿತ್ರಿಕ ಚಳುವಳಿಗಳ ಅಂಶಗಳನ್ನು ಈ ಭಾಗದಲ್ಲಿ ತೆರೆದಿಡಲಾಗಿದೆ. ಕಿ. ರಂ. ನಾಗರಾಜ ಅವರು ಮೂಲತಃ ಬ್ರಾಹ್ಮಣ ಸಮಾಜದಿಂದ ಬಂದವರಾದರೂ ಅವರ ಆಲೋಚನಾ ಕ್ರಮಗಳು ಸೆಕ್ಯುಲರ್ ತಾತ್ತ್ವಿಕತೆಯನ್ನು ಪರಿಚಯಿಸುತ್ತಿದ್ದವು. ತಮ್ಮ ವಿಮರ್ಶಾ ಮಾದರಿಯಲ್ಲಿ ಪ್ರತಿ ಬಾರಿಯೂ ಪುರೋಹಿತಶಾಹಿತ್ವಕ್ಕೆ ಮುಖಾಮುಖಿಯಾಗುತ್ತಾ ಸಾಗಿದವರು. ಆದ್ದರಿಂದ ಅವರು ಪುರೋಹಿತಶಾಹಿತ್ವಕ್ಕೆ ಮುಖಾಮುಖಿಯಾಗಲು ಪ್ರಮುಖ ಕಾರಣಗಳೇನು? ಅದರ ಹಿಂದಿರುವ ತಾತ್ತ್ವಿಕತೆಗಳೇನು? ಅವರು ಪ್ರತಿಪಾದಿಸುವ ಸೆಕ್ಯುಲರಿಸಂ ಯಾವ ಬಗೆಯದ್ದು ಎಂಬುದನ್ನು ಈ ಭಾಗದಲ್ಲಿ ಸ್ಪಷ್ಟಪಡಿಸಲಾಗಿದೆ.

ಅಕಡೆಮಿಕ್ ವಲಯಗಳನ್ನು, ಮಾರುಕಟ್ಟೆ ಶಕ್ತಿಗಳನ್ನು, ಜಾನಪದ, ಭಾಷಾವಿಜ್ಞಾನದಂತಹ ಸ್ಥಾಪಿತ ಹಿತಾಸಕ್ತಿಗಳನ್ನೊಳಗೊಂಡ ಜಡ ಅಧ್ಯಯನ ಕೇಂದ್ರಗಳ ಅಧ್ಯಯನ ಮಾರ್ಗಗಳನ್ನು ಪ್ರಶ್ನಿಸುತ್ತಾ ಸಾಹಿತ್ಯವನ್ನು ನಿಯಂತ್ರಿಸುವ ಪ್ರತಿಷ್ಠಿತ ಶಕ್ತಿಗಳ ಕುರಿತು ಒಂದು ಬಗೆಯ ಗುಮಾನಿಯನ್ನು, ಪ್ರತಿಭಟನಾತ್ಮಕ ಧ್ವನಿಯನ್ನು ಕಿ.ರಂ. ನಾಗರಾಜ ಅವರು ಮುಂದಿಟ್ಟಿದ್ದರು. ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಶ್‌ನಲ್ಲಿ ಬೋಧನಾ ಕ್ರಮವನ್ನು ರೂಪಿಸುವ ಕುರಿತ ಚಳುವಳಿಗಳಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದ್ದರು. ಆ ಕುರಿತ ಅಂಶವನ್ನು ಇಲ್ಲಿ ಚರ್ಚಿಸಲಾಗಿದೆ.

ಕಿ. ರಂ. ನಾಗರಾಜ ಅವರಲ್ಲಿ ಪ್ರಖರವಾಗಿದ್ದ ರಾಜಕೀಯ ದಾರ್ಶನಿಕತೆ ಯಾವುದು? ಸಮಾಜವಾದಿ ರಾಜಕೀಯ ಪ್ರಜ್ಞೆ ಅವರ ಸಾಹಿತ್ಯ ವಿಮರ್ಶೆಯ ಯಾವ ಭಾಗದಲ್ಲಿ ಸ್ಪಷ್ಟವಾಗಿ ಗೋಚರಿಸಿದೆ? ಅವುಗಳ ಹಿಂದಿರುವ ತಾತ್ವಿಕತೆ ಯಾವುದು? ಒಟ್ಟು ಸಮಾಜವಾದದ ಕುರಿತು ಕಿ. ರಂ. ನಾಗರಾಜ ಅವರ ಅಭಿಪ್ರಾಯಗಳೇನು? ಕನ್ನಡ ವಿಮರ್ಶಾ ಸಾಹಿತ್ಯ ಸಮಾಜವಾದವನ್ನು ಹೇಗೆ ಒಂದು ಸಾಹಿತ್ಯಕ ಸಿದ್ಧಾಂತವಾಗಿ ಸ್ಥಾಪಿಸುವ ಪ್ರಯತ್ನ ಮಾಡಿದೆ ಎಂಬ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರಗಳನ್ನು ಈ ಭಾಗದಲ್ಲಿ ಕಂಡುಕೊಳ್ಳುವ ಕೆಲಸ ಮಾಡಲಾಗಿದೆ.

ಅಧ್ಯಾಯ-೭ ಕಿ.ರಂ ನಾಗರಾಜ ಅವರನ್ನು ಕನ್ನಡ ಜಗತ್ತು ಕಂಡ ನೆಲೆ

ಈ ಅಧ್ಯಾಯದಲ್ಲಿ ಕಿ. ರಂ. ನಾಗರಾಜ ಅವರ ಕುರಿತು ಬಂದಂತಹ ಕವಿತೆಗಳನ್ನು ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ. ಪಂಪ ತನ್ನ ಪ್ರಭುವಾದ ಅರಿಕೇಸರಿಯನ್ನು ಚಿರಸ್ಥಾಯಿಗೊಳಿಸಿದ್ದು ಕಾವ್ಯದ ಮೂಲಕ. ಕಿ ರಂ. ನಾಗರಾಜ ಅವರು ಪಂಪನ ಕುರಿತು ಮಾತನಾಡುವಾಗ ಈ ಮಾತನ್ನು ಉಲ್ಲೇಖಿಸುತ್ತಾರೆ. "ಕವಿಗಳಿಂದಾಗಿ ರಾಜರ ಹೆಸರು ಶಾಶ್ವತವಾಗಿ ಉಳಿಯಿತು. ಪಂಪನಿಂದಾಗಿ ಅರಿಕೇಸರಿ ನಮಗಿಂದು ನೆನಪಾಗುತ್ತಾನೆ. ಬಸವಣ್ಣನಿಂದ ಬಿಜ್ಜಳ" (ಪ್ರದೀಪ್ ಮಾಲ್ಗುಡಿ (ಸಂ), ೨೦೧೧, ಪುಟ-xiii) ಹೀಗೆ ಜನ್ನ, ಪೊನ್ನ, ರನ್ನರ ಕಾವ್ಯದ ನಾಯಕರ ಬಗೆಯೂ ಅಲ್ಲಿ ವ್ಯಕ್ತವಾಗುವ ಆ ನಾಯಕರ ಇತಿವೃತ್ತಾಂತದ ಬಗೆಯನ್ನು ಗಮನಿಸಬಹುದು.

ಹರಿಹರ ತಾನು ಸಾವವರ ಮೇಲೆ ಕಾವ್ಯ ರಚಿಸಲಾರೆ. ಶಿವನ ಕುರಿತು, ಶಿವಶರಣರ ಕುರಿತು, ಭಕ್ತಿಯ ಮೂರ್ತರೂಪದ ಕುರಿತು ರಗಳೆ ರಚಿಸುತ್ತೇನೆಂದು ಪ್ರಭುತ್ವದ, ವ್ಯಕ್ತಿಕೇಂದ್ರಿತ ಶಕ್ತಿಯಾದ ರಾಜನ ಕುರಿತು ನಿರೂಪಣೆಗೊಳ್ಳುವ ಕಾವ್ಯವನ್ನು ತಿರಸ್ಕರಿಸಿದನು. ಇದೇ ಕಾರಣಕ್ಕಾಗಿ ಹರಿಹರನ ರಗಳೆಯ ನಾಯಕರಾದದ್ದು ಬಸವಣ್ಣ, ಅಕ್ಕಮಹಾದೇವಿಯಂತಹ ಶರಣರು; ಮಾದಾರ ಚೆನ್ನಯ್ಯನಂತಹ ಗುಪ್ತ ಭಕ್ತರು.

ಇನ್ನು ವಚನಕಾರರು ತಮ್ಮೊಳಗೆ ಇರುವ ಇತರ ಶರಣರ ಕುರಿತು ವಚನ ರಚಿಸಿರುವ ಹಲವು ಉದಾಹರಣೆಗಳಿರುವುದನ್ನು ಗಮನಿಸಬಹುದು. ದಾಸ ಸಾಹಿತ್ಯದೊಳಗೆ ಇಂತಹ ಪ್ರಯೋಗಗಳಿರುವಂತಹ ಕೀರ್ತನೆಗಳನ್ನು ಅಲ್ಲಲ್ಲಿ ಗಮನಿಸಬಹುದು. ಒಟ್ಟಿನಲ್ಲಿ ಕಾವ್ಯದ ಕಥಾನಾಯಕ ದೈವತ್ವದ ರೂಪವಾಗಿಯೂ, ತನ್ನ ಕಾಲದ ಪ್ರಭುತ್ವದ ರೂಪಕವಾದ ರಾಜನಾಗಿಯೂ, ಭಕ್ತಿ ಚಳುವಳಿಯ ಕೇಂದ್ರನೆಲೆಯ ವ್ಯಕ್ತಿಯಾಗಿಯೂ ಕನ್ನಡ ಕವಿಗಳ ಕಾವ್ಯವನ್ನು ಸೇರಿರುವುದು ವಿಶೇಷ. ಆದರೆ ಆಧುನಿಕ ಕನ್ನಡ ಸಾಹಿತ್ಯ ಸ್ವಲ್ಪಮಟ್ಟಿಗೆ ಭಿನ್ನವಾದ ವ್ಯಕ್ತಿಕೇಂದ್ರಿತ ಕವಿತೆಗಳನ್ನು ಮುಂದಿಡುತ್ತದೆ. ಆ ಕವಿತೆಗಳು ತಾನು ನಿರೂಪಿಸಿದ ವ್ಯಕ್ತಿಯನ್ನು ಆತನ ಕಾರ್ಯಚಟುವಟಿಕೆಗಳನ್ನು ವಿಮರ್ಶಿಸುವ ಕೆಲಸವನ್ನು ಮಾಡುತ್ತದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಾಹಿತಿಗಳ ಮೇಲೆ ಕವಿಗಳು ಬರೆದ ಕವನಗಳು ಹೆಚ್ಚಾಗಿ ಕಾಣಸಿಗುವುದು ಅಭಿನಂದನಾಗ್ರಂಥಗಳಲ್ಲಿ. ಅಭಿನಂದನೆಗೆ ಅರ್ಹವಾದ ಸಾಹಿತಿಯ ಮೇಲೆ ಅವರ ಶಿಷ್ಯರು, ಸಹೋದ್ಯೋಗಿಗಳು, ಹಿರಿಯ ಕಿರಿಯ ಕವಿಗಳು, ಲೇಖಕರು ಕಾವ್ಯ ಮತ್ತು ಅವರ ಸಾಹಿತ್ಯದ ಕುರಿತ ಅಭಿನಂದನಾ ಲೇಖನವನ್ನು ಬರೆಯುವುದನ್ನು ಕಾಣಬಹುದು. ಈ ಬರಹಗಳಲ್ಲಿ ಕೆಲವಾರು ವಿವರಣಾತ್ಮಕವಾಗಿದ್ದರೆ ಮತ್ತೆ ಕೆಲವು ವಿಶ್ಲೇಷಣಾತ್ಮಕ ವಿಮರ್ಶಾ ಅಂಶಗಳನ್ನು ಮುಂದಿಡುತ್ತದೆ. ಕುವೆಂಪು, ಬೇಂದ್ರೆ, ಮಾಸ್ತಿಯವರಂತಹ ಸೃಜನಶೀಲ ಸಾಹಿತಿಗಳ ಮೇಲೆ ಈ ಬಗೆಯ ಕಾವ್ಯಪ್ರಯೋಗ ನಡೆದಿದೆ. ಆದರೆ ಓರ್ವ ವಿಮರ್ಶಕನ ಕುರಿತು ಕಾವ್ಯ ಕಟ್ಟುವ ಬಗೆಯನ್ನು ಕಾಣುವುದು ಅಪರೂಪವೇ ಸರಿ.

ಆದರೆ ಸಾಹಿತ್ಯ ವಿಮರ್ಶಕರಾದ ಕಿ. ರಂ. ನಾಗರಾಜರ ಕುರಿತು ಒಂದಿಷ್ಟು ಕವನಗಳು ಕನ್ನಡದಲ್ಲಿ ಬಂದಿದೆ. ಆ ಕವನಗಳ ಕುರಿತ ಚರ್ಚೆಯನ್ನು ಮುಂದಿಡುವ ಮೊದಲು ಓರ್ವ ಸಾಹಿತ್ಯ ವಿಮರ್ಶಕನ ಮೇಲೆ ಕಾವ್ಯ ಹುಟ್ಟಲು ಕಾರಣವಾದ ಪ್ರಮುಖಾಂಶವನ್ನು ಚರ್ಚಿಸಲಾಗಿದೆ. ಆ ಮೂಲಕ ಕಾವ್ಯ ಸೃಷ್ಟಿಯ ಹಿಂದಿನ ರಾಜಕೀಯ, ಸಾಮಾಜಿಕ, ಸಾಹಿತ್ಯಕ, ಸಾಂಸ್ಕೃತಿಕ ಅಂಶಗಳನ್ನು ಮುನ್ನೆಲೆಗೆ ತರುವ ಅಗತ್ಯವನ್ನು ಈ ಭಾಗ ಮಾಡಿದೆ.

ಕಿ. ರಂ. ನಾಗರಾಜ ಅವರ ಕುರಿತು ಕನ್ನಡ ಸಾಹಿತಿಗಳ ಅಭಿಪ್ರಾಯಗಳು ಎಂಬ ಶೀರ್ಷಿಕೆಯಲ್ಲಿ ಈ ಅಧ್ಯಾಯದ ಎರಡನೆಯ ಭಾಗವನ್ನು ರೂಪಿಸಲಾಗಿದೆ. ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಓರ್ವ ವಿಮರ್ಶಕನ ವಿಮರ್ಶೆಯ ಬಗ್ಗೆ ಮತ್ತೊಬ್ಬ ವಿಮರ್ಶಕ ಮೌಲ್ಯಮಾಪನಿಕರೀಸುವುದನ್ನು ಪಾಶ್ಚಾತ್ಯರಲ್ಲಿ ಗಮನಿಸಬಹುದು. ಇದಕ್ಕೆ ಮೊದಲನೆಯ ಉದಾಹರಣೆ ವಿಮರ್ಶಕ ಜೊನಾಥನ್ ಕಲರ್ ಅವರು ವಿಮರ್ಶಕ ರೋಲನ್ ಬಾರ್ಥ್ಸ್ ಮೇಲೆ ಬರೆದಿರುವ ಪುಸ್ತಕ. ಇಬ್ಬರು ಪೂರ್ಣಕಾಲಿಕ ವಿಮರ್ಶಕರು. ಎರಡನೆಯದು ಎಫ್. ಆರ್. ಲಿವಿಸ್ ಬಗ್ಗೆ ಜಾರ್ಜ್ ಸ್ಟೇಲರ್ ಬರೆದ ಒಂದು ಲೇಖನ. ಎಫ್ ಆರ್ ಲಿವಿಸ್– ೨೦ನೇ ಶತಮಾನದ ವಿಮರ್ಶೆ ಎಂಬ ಇಂಗ್ಲಿಶ ಶೀರ್ಷಿಕೆಯ ಲೇಖನವದು. ಈ ಎರಡು ಉದಾಹರಣೆಗಳುನ್ನು ಗಮನಿಸುವ ಮೂಲಕ ಓರ್ವ ವಿಮರ್ಶಕ ಮತ್ತೊಬ್ಬ ವಿಮರ್ಶಕನ ಮೇಲೆ ವಿಮರ್ಶೆ ಮಾಡುವ ಪ್ರತಿಕ್ರಿಯೆಯನ್ನು ಗುರುತಿಸಬಹುದು. ಆದರೆ ಕನ್ನಡದಲ್ಲಿ ವಿಮರ್ಶಕನನ್ನು ಮತ್ತೊಬ್ಬ ವಿಮರ್ಶಕ ವಿಮರ್ಶಿಸುವ ಮಾದರಿ ತೀರಾ ಕಡಿಮೆ. ಹಾಗೆ ಚರ್ಚೆ ಮಾಡಿದ್ದೇ ಆಗಿದ್ದರೆ ವಿಮರ್ಶಕನ ವಿಮರ್ಶೆಯ ದರ್ಶನ ಇತರರಿಗೂ ಪ್ರಾಪ್ತವಾಗುತ್ತಿತ್ತು. ಆದರೂ ಅಂತಹ ಪ್ರಯೋಗಗಳು ಅಭಿಪ್ರಾಯದ ಮಾದರಿಯಲ್ಲಾದರೂ ರೂಪುಗೊಂಡಿದೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುತ್ತಲೇ ಕಿ. ರಂ. ನಾಗರಾಜ ಅವರ ಸಮಕಾಲೀನ ಸಾಹಿತಿಗಳ ಅಭಿಪ್ರಾಯಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕಿ. ರಂ. ನಾಗರಾಜ ಅವರ ಕುರಿತ ನೆನಪಿನ ಕಾರ್ಯಕ್ರಮಗಳು ಮತ್ತು ಕಿ. ರಂ ನಾಗರಾಜ ಕೇಂದ್ರಿತ ಸಂಸ್ಥೆಗಳು ವಿವರಗಳನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

ಸಮಾರೋಪ

ಈ ಸಂಶೋಧನಾ ಅಧ್ಯಯನದಲ್ಲಿ ಹಲವು ಮಹತ್ವದ ವಿಷಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆಯಾ ಅಧ್ಯಾಯಗಳ ಅನುಸಂಧಾನದ ಸಂದರ್ಭದಲ್ಲಿ ಹುಟ್ಟಿದ ಫಲಿತಗಳನ್ನು ಆಯಾ ಅಧ್ಯಾಯಗಳಲ್ಲಿ ಮಂಡಿಸಲಾಗಿದೆ. ಈ ಮಹಾಪ್ರಬಂಧದ ಕೊನೆಯಲ್ಲಿ ಸಂಶೋಧನಾತ್ಮಕ ಅಧ್ಯಯನದ ಫಲಿತಾಂಶವನ್ನು ಕ್ರೋಢೀಕರಿಸಿ ವಿವೇಚಿಸಲಾಗಿದೆ.

ಅನುಬಂಧಗಳು

ಅನುಬಂಧದಲ್ಲಿ ಅಧ್ಯಯನಕ್ಕಾಗಿ ಬಳಸಿದ ಪರಾಮರ್ಶನ ಗ್ರಂಥಗಳ ವಿವರವನ್ನು, ನಿಯತಕಾಲಿಕೆಗಳ ವಿವರವನ್ನು, ಅಂತರ್ಜಾಲ ಮಾಹಿತಿಗಳನ್ನು, ಸಂದರ್ಶನದ ವಿವರಗಳನ್ನು, ವಿಚಾರ ಸಂಕಿರಣದ ಭಾಷಣಗಳ ವಿವರವನ್ನು, ಸಾಹಿತ್ಯಕ ಕಾರ್ಯಕ್ರಮದ ದಾಖಲಾತಿಗಳ ವಿವರವನ್ನು, ಆಡಿಯೋ ಮತ್ತು ವಿಡಿಯೋ ದಾಖಲೆಗಳ ವಿವರ ಮತ್ತು ಲಿಂಕ್‌ಗಳನ್ನು, ಛಾಯಾಚಿತ್ರಗಳನ್ನು ವಸ್ತುನಿಷ್ಠವಾಗಿ ಸಂಶೋಧನೆಯ ಆಕರಸೂಚಿಯ ಮಾದರಿಯನ್ನು ಅನುಸರಿಸಿ ಅಳವಡಿಸಿಕೊಳ್ಳಲಾಗಿದೆ.

- ಪರಾಮರ್ಶನ ಗ್ರಂಥಗಳ ವಿವರಗಳನ್ನು, ನಿಯತಕಾಲಿಕೆಗಳ ವಿವರವನ್ನು ಪಾಶ್ಚಾತ್ಯ ಸಂಶೋಧನೆಯಲ್ಲಿ ವೈಜ್ಞಾನಿಕವಾಗಿ ಬಳಸುವ **'ಎಪಿಎ'** ಎಂಬ ಮಾದರಿಯನ್ನು ಅನುಸರಿಸಲಾಗಿದೆ. ಅಂತರ್ಜಾಲ ಮಾಹಿತಿಗಳನ್ನು, ಸಂದರ್ಶನದ ವಿವರಗಳನ್ನು, ವಿಚಾರ ಸಂಕಿರಣದ ಭಾಷಣಗಳ ವಿವರವನ್ನು, ಸಾಹಿತ್ಯಕ ಕಾರ್ಯಕ್ರಮದ ದಾಖಲಾತಿಗಳ ವಿವರವನ್ನು, ಆಡಿಯೋ ಮತ್ತು ವಿಡಿಯೋ ದಾಖಲೆಗಳ ವಿವರ ಮತ್ತು ಲಿಂಕ್‌ಗಳನ್ನು ಸ್ವತಂತ್ರವಾಗಿ ಏಕಮುಖ ಮಾದರಿಯನ್ನು ಅನುಸರಿಸಿ ನೀಡಲಾಗಿದೆ.

ಅನುಬಂಧ ೧:

ಛಾಯಾಚಿತ್ರಗಳು

ಅನುಬಂಧ ೨:

ಪರಾಮರ್ಶನ ಗ್ರಂಥಗಳು

(ಎಪಿಎ ಮಾದರಿಯನ್ನು ಅನುಸರಿಸಲಾಗಿದೆ)

❖ ಅನಂತಮೂರ್ತಿ ಯು ಆರ್, (೨೦೧೨) ಸುರಗಿ, ಹೆಗ್ಗೋಡು: ಅಕ್ಷರ ಪ್ರಕಾಶನ.

❖ ಅಮರೇಶ ನುಗಡೋಣಿ (ಸಂ), (೨೦೦೫) ಬಸವಣ್ಣನ ವಚನಗಳು–ಸಾಂಸ್ಕೃತಿಕ ಮುಖಾಮುಖಿ, ಹಂಪಿ: ಕನ್ನಡ ವಿಶ್ವವಿದ್ಯಾನಿಲಯ.

❖ ಅರವಿಂದ ಮಾಲಗತ್ತಿ (ಸಂ), (೨೦೦೨) ದಲಿತ ಮಾರ್ಗ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.

❖ ಅಶೋಕ್ ಟಿ ಪಿ (ಸಂ), (೧೯೯೩) ಶಿವರಾಮ ಕಾರಂತ– ಕನ್ನಡ ಸಾಹಿತ್ಯ ಈ ಶತಮಾನದ ನೋಟ, ಹಂಪಿ: ಕನ್ನಡ ವಿಶ್ವವಿದ್ಯಾಲಯ.

❖ ಅಶೋಕ್ ಟಿ ಪಿ (ಸಂ), (೧೯೯೪) ಕಾರಂತ ಮಂಥನ, ಪುತ್ತೂರು: ಕರ್ನಾಟಕ ಸಂಘ.

❖ ಅಶೋಕ್ ಟಿ ಪಿ (೨೦೨೦) ಮೊಕಾಶಿ ಕಥನ, ಬೆಂಗಳೂರು: ಅಭಿನವ ಪ್ರಕಾಶನ

❖ ಅಶ್ವಿನ್ ಕುಮಾರ್ ಎ ಪಿ, (೨೦೧೮), ಮಿಶೆಲ್ ಫುಕೋ, ಬೆಂಗಳೂರು: ಪರಸ್ಪರ ಪ್ರಕಾಶನ

❖ ಅಕ್ಷತಾ ಕೆ (ಸಂ), (೨೦೧೫) ಮತ್ತೆ ಮತ್ತೆ ಬೇಂದ್ರೆ, ಶಿವಮೊಗ್ಗ: ಅಹರ್ನಿಶಿ ಪ್ರಕಾಶನ.

❖ ಅಕ್ಷರ ಕೆ ವಿ, (೨೦೧೧) ಅಂತಃಪಠ್ಯ ಮತ್ತು ಇತರ ಪ್ರಬಂಧಗಳು, ಹೆಗೋಡು: ಅಕ್ಷರ ಪ್ರಕಾಶನ.

❖ ಆನಂದಮೂರ್ತಿ ಜಿ ವಿ (ದಾಖಲೀಕರಣ), (೧೯೯೬) ಮೂರು ದಲಿತ ಕಮ್ಮಟಗಳು, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ.

❖ ಆನಂದ ಕೋಡಿಂಬಳ, (೨೦೦೨), ಮಾರ್ಕ್ಸ್‌ವಾದ ಮತ್ತು ಕನ್ನಡ ವಿಮರ್ಶೆ (ಅಪ್ರಕಟಿತ ಮಹಾಪ್ರಬಂಧ), ಮಂಗಳಗಂಗೋತ್ರಿ: ಮಂಗಳೂರು ವಿಶ್ವವಿದ್ಯಾನಿಲಯ.

❖ ಅಯ್ಯನಗೌಡರ ಎಸ್. ವಿ. (೨೦೦೯), ವಿಮರ್ಶೆ ಧಾರವಾಡ: ಅನುಗ್ರಹ ಪ್ರಕಾಶನ

❖ ಇಂದಿರಾ ಲಂಕೇಶ್ (೨೦೧೪) ಹುಳಿಮಾವು ಮತ್ತು ನಾನು. ಬೆಂಗಳೂರು: ಲಂಕೇಶ್ ಪ್ರಕಾಶನ.

❖ ಇನಾಂದಾರ್. ವಿ ಎಂ, (೧೯೭೭) ಪಾಶ್ಚಾತ್ಯ ವಿಮರ್ಶೆಯ ಸಂಪ್ರದಾಯ ಯುಗ, ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.

❖ ಈಶ್ವರ ಭಟ್ಟ ಬೋಳಂತಕೋಡಿ (ಪ್ರ ಸಂ), (೧೯೮೬) ನಿರಂಜನ (ಅಭಿನಂದನ), ಪುತ್ತೂರು: ಕರ್ನಾಟಕ ಸಂಘ.

❖ ಕಲ್ಲಿಗನೂರು ಪುಂಡಲೀಕ, (೨೦೧೧) ಮಿನಿ ಸೆಂಟ್ರಲ್ ಲೈಬ್ರರಿ ಕಿರಂ, ಬೆಂಗಳೂರು: ಕನ್ನಡ ಪ್ರಕಾಶನ.

❖ ಕಿಕ್ಕೇರಿ ನಾರಾಯಣ, (೨೦೧೮) ಸಂರಚನಾವಾದ, ಬೆಂಗಳೂರು: ಅಭಿನವ ಪ್ರಕಾಶನ

❖ ಕೀರ್ತಿನಾಥ ಕುರ್ತಕೋಟಿ, (೨೦೦೨) (ಐದನೆಯ ಮುದ್ರಣ), ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಧಾರವಾಡ: ಮನೋಹರ ಗ್ರಂಥಮಾಲಾ

❖ ಕುವೆಂಪು, (೨೦೧೬), ಕುವೆಂಪು ನಾಡು ನುಡಿ ಮತ್ತು ವೈಚಾರಿಕತೆ, ಕುಪ್ಪಳ್ಳಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ.

❖ ಕೃಷ್ಣಶಾಸ್ತ್ರಿ. ಎ ಆರ್, (೧೯೬೦), ಭಾಷಣಗಳು ಮತ್ತು ಲೇಖನಗಳು, ಮೈಸೂರು: ಶಾರದಾ ಮಂದಿರ.

❖ ಕೃಷ್ಣಮೂರ್ತಿ ಎಚ್.ಟಿ, (೨೦೦೮), ಆಧುನಿಕ ಕನ್ನಡ ವಿಮರ್ಶೆಯ ವೈಚಾರಿಕ ಆಕೃತಿಗಳು (ಅಪ್ರಕಟಿತ ಪಿ ಎಚ್.ಡಿ) ಶಿವಮೊಗ್ಗ: ಕುವೆಂಪು ವಿಶ್ವವಿದ್ಯಾನಿಲಯ

❖ ಕೇಶವ ಶರ್ಮ (೨೦೦೦), ರಚನೆ- ನಿರಚನೆ, ಬೆಂಗಳೂರು: ಅಭಿನವ ಪ್ರಕಾಶನ.

❖ ಕೇಶವಶರ್ಮ (೨೦೧೧) ನೀಲಿನಕ್ಷೆ, ಶಿವಮೊಗ್ಗ: ಗೀತಾಂಜಲಿ ಪುಸ್ತಕ ಪ್ರಕಾಶನ.

❖ ಗಿರಡ್ಡಿ ಗೋವಿಂದರಾಜು (ಸಂ) (೨೦೧೬), ಓದುವ ದಾರಿಗಳು, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ

❖ ಗುರುಸ್ವಾಮಿ, (೨೦೦೭), ನವೋದಯ ವಿಮರ್ಶೆ: ಪರಂಪರೆಯ ವಿಭಿನ್ನ ವಿನ್ಯಾಸಗಳು (ಅಪ್ರಕಟಿತ ಮಹಾಪ್ರಬಂಧ), ಹಂಪಿ: ಕನ್ನಡ ವಿಶ್ವವಿದ್ಯಾಲಯ.

❖ ಗೋಪಾಲಕೃಷ್ಣ ಅಡಿಗ (೧೯೮೭) ಚಿಂತಾಮಣಿಯಲ್ಲಿ ಕಂಡ ಮುಖ, ಬೆಂಗಳೂರು: ಪ್ರಜಾ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್

❖ ಗೌರಿ ಲಂಕೇಶ್ (ಸಂ) (೨೦೦೯) ಬಸವರಾಜ ಮಾರ್ಗ- ವ್ಯಕ್ತಿ ವಿಚಾರ ಸಂಗ್ರಹ, ಬೆಂಗಳೂರು: ಲಂಕೇಶ ಪ್ರಕಾಶನ.

❖ ಗಂಗಾಧರಯ್ಯ ಎಸ್, (೨೦೦೬) (ದ್ವಿತೀಯ ಮುದ್ರಣ) ವೈಕಂ ಕಥೆಗಳು, ತಿಪಟೂರು: ಬಿಸಿಲ ಕೋಲು ಪ್ರಕಾಶನ.

❖ ಗಂಗರಾಜು. ಜಿ, (೨೦೧೩), ಕನ್ನಡ ಸಾಂಸ್ಕೃತಿಕ ವಿಮರ್ಶೆ: ತಾತ್ವಿಕ ಸ್ವರೂಪ (ಅಪ್ರಕಟಿತ ಮಹಾಪ್ರಬಂಧ) ಹಂಪಿ: ಕನ್ನಡ ವಿಶ್ವವಿದ್ಯಾಲಯ

❖ ಚಂದ್ರಶೇಖರ ಕಂಬಾರ (೨೦೦೪) ದೇಶಿಯ ಚಿಂತನ, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.

❖ ಚಂದ್ರಶೇಖರ ಕಂಬಾರ, (೨೦೦೫) ಸಿರಿಸಂಪಿಗೆ, ಹೆಗ್ಗೋಡು: ಅಕ್ಷರ ಪ್ರಕಾಶನ.

❖ ಚಂದ್ರಿಕಾ ಪಿ (ಸಂ), (೧೯೯೯) ಯಾರ ಜಪ್ತಿಗೂ ಸಿಗದ ನವಿಲುಗಳು, ಬೆಂಗಳೂರು: ಅಭಿನವ ಪ್ರಕಾಶನ.

❖ ಜಯಪ್ರಕಾಶ ಮಾವಿನಕುಳಿ (ಸಂ) (೧೯೯೯) ಲಂಕೇಶರ ನಾಟಕಗಳು, ಪುತ್ತೂರು: ಕರ್ನಾಟಕ ಸಂಘ

❖ ಜಲದರ್ಶಿನಿ ಜೆ ಇ, (೨೦೧೩) ಕನ್ನಡ ಸಾಹಿತ್ಯ ವಿಮರ್ಶಾ ಪರಂಪರೆ ಮತ್ತು ಕೀರ್ತಿನಾಥ ಕುರ್ತಕೋಟಿ (ಅಪ್ರಕಟಿತ ಮಹಾಪ್ರಬಂಧ), ಹಂಪಿ: ಕನ್ನಡ ವಿಶ್ವವಿದ್ಯಾಲಯ

❖ ಜಯಶಂಕರ ಹಲಗೂರು (ಸಂ), (೨೦೧೯), ಕಿರಂ ಹೊಸ ಕವಿತೆ, ಬೆಂಗಳೂರು: ಸಂಸ ಪ್ರಕಾಶನ.

❖ ತಿಪ್ಪೆರುದ್ರಸ್ವಾಮಿ ಎಚ್. (೧೯೯೫), ವಿಮರ್ಶೆಯ ಮೂಲಭೂತ ತತ್ವಗಳು, ಮೈಸೂರು: ಅನುಗ್ರಹ ಪ್ರಕಾಶನ

❖ ತಿಪ್ಪೇಸ್ವಾಮಿ, (ಮೂಲ: ಗೋಪಿಚಂದ್ ನಾರಂಗ್), (೨೦೧೩), ಸಂರಚನಾವಾದ ಸಂರಚನೋತ್ತರವಾದ ಹಾಗೂ ಪ್ರಾಚ್ಯ ಕಾವ್ಯಮೀಮಾಂಸೆ, ದೆಹಲಿ: ಸಾಹಿತ್ಯ ಅಕಾದೆಮಿ

❖ ದಂಡಪ್ಪ ಎಚ್ (ಸಂ), (೨೦೦೧) ಬಡವರ ನಗುವಿನ ಶಕ್ತಿ. ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ

❖ ದಂಡಪ್ಪ ಎಚ್– ಸುಮಿತ್ರಾಬಾಯಿ ಬಿ ಎನ್ (ಸಂ) (೨೦೦೭) ಸುವರ್ಣ ಸಾಹಿತ್ಯ ವಿಮರ್ಶೆ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ

❖ ನಟರಾಜ್ ಹುಳಿಯಾರ್ (ಸಂ) (೨೦೧೨), ಹಸಿರು ಸೇನಾನಿ, ಚೆನ್ನಪಟ್ಟಣ: ಪಲ್ಲವ ಪ್ರಕಾಶನ.

❖ ನಟರಾಜ ಹುಳಿಯಾರ್ (ಸಂ) (೨೦೧೨) ತೆರದ ಪಠ್ಯ. ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.

❖ ನಟರಾಜ್ ಹುಳಿಯಾರ್ (೨೦೧೪) ಇಂತಿ ನಮಸ್ಕಾರಗಳು, ಚೆನ್ನಪಟ್ಟಣ: ಪಲ್ಲವ ಪ್ರಕಾಶನ.

❖ ನಟರಾಜ ಹುಳಿಯಾರ್, (೨೦೧೭), ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಚೆನ್ನಪಟ್ಟಣ: ಪಲ್ಲವ ಪ್ರಕಾಶನ.

❖ ನಟರಾಜ ಬೂದಾಳ್ ಎಸ್, (೨೦೧೬) ಕನ್ನಡ ಕಾವ್ಯಮೀಮಾಂಸೆ, ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.

❖ ನಾಗರಾಜ. ಕಿ. ರಂ, (೧೯೭೩) ಪ್ರತಿಷ್ಠಿತ ಶಕ್ತಿ ಮತ್ತು ಕನ್ನಡ ಸಾಹಿತ್ಯ, ಬೆಂಗಳೂರು: ಕ್ರೈಸ್ಟ್ ಯುನಿವರ್ಸಿಟಿ.

❖ ನಾಗರಾಜ. ಕಿ. ರಂ, (೧೯೭೭) ಅಪತ್ಕಾಲೀನ ಕವಿತೆಗಳು, ಬೆಂಗಳೂರು: ಇಳಾ ಮುದ್ರಣ.

❖ ನಾಗರಾಜ. ಕಿ. ರಂ, (೧೯೮೬) ನೀಗಿಕೊಂಡ ಸಂಸ, ಬೆಂಗಳೂರು: ರಂಗಸಂಪದ

❖ ನಾಗರಾಜ. ಕಿ. ರಂ (ಸಂ), (೧೯೯೦) ಸಿಂಹಾಲೋಕ, ಬೆಂಗಳೂರು:ಲಿಪಿ ಪ್ರಕಾಶನ

❖ ನಾಗರಾಜ ಕಿ. ರಂ, (೨೦೧೩) ಕಾಲಜ್ಞಾನಿ ಕನಕ, ಬೆಂಗಳೂರು: ಅಭಿನವ ಪ್ರಕಾಶನ.

❖ ನಾಗರಾಜ. ಡಿ. ಆರ್ (೨೦೦೧) ಎರಡನೆ ಮುದ್ರಣ, ಅಲ್ಲಮ ಪ್ರಭು ಮತ್ತು ಶೈವಪ್ರತಿಭೆ, ಹೆಗ್ಗೋಡು: ಅಕ್ಷರ ಪ್ರಕಾಶನ

❖ ನಾಗರಾಜ ಡಿ ಆರ್, (೨೦೧೧) ಸಾಹಿತ್ಯ ಕಥನ– ವಿಮರ್ಶಾ ಲೇಖನಗಳ ಸಂಗ್ರಹ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ

❖ ನಾಗಭೂಷಣ ಸ್ವಾಮಿ ಓ ಎಲ್, (೧೯೯೮), ಬೇಂದ್ರೆ ವಿಮರ್ಶೆ, ಧಾರವಾಡ: ಮನೋಹರ ಗ್ರಂಥಮಾಲೆ

❖ ನಾಗಭೂಷಣ ಸ್ವಾಮಿ ಓ ಎಲ್, (೨೦೧೧) ವಿಮರ್ಶೆಯ ಪರಿಭಾಷೆ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ

❖ ನಾಯಕ ಜಿ. ಎಚ್ (ಸಂ), (೨೦೦೦) ಶತಮಾನದ ಕನ್ನಡ ಸಾಹಿತ್ಯ ಭಾಗ–೨, ಅಂಕೋಲ: ರಾಘವೇಂದ್ರ ಪ್ರಕಾಶನ.

❖ ನಾಯಕ ಹಾ ಮಾ (ಸಂ), (೧೯೮೩) ಡಿವಿಜಿ ಸಂಪುಟ–೧, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ

❖ ನಾವಡ ಎ ವಿ, (೨೦೧೫) ಸಾಹಿತ್ಯ ಶೋಧ, ಮಂಗಳೂರು: ಶೋಧನ ಪ್ರಕಾಶನ.

❖ ನಿಸಾರ್ ಅಹಮದ್ ಕೆ ಎಸ್ (೨೦೧೨), ಅಡಿಗ ಕಾವ್ಯ– ಒಂದು ಪುನರವಲೋಕನ, ಬೆಂಗಳೂರು: ವಿಜಯ ಕಾಲೇಜು

❖ ಪಂಪ, (೨೦೦೫) ಪಂಪಭಾರತ. ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು

❖ ಪಂಪ, (೨೦೦೦) ಆದಿಪುರಾಣ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು

❖ ಪಾರ್ವತೀಶ್, (೨೦೦೯) ಚೆಕ್‌ಪೋಸ್ಟ್, ಬೆಂಗಳೂರು: ಚಾರು ಪ್ರಕಾಶನ.

❖ ಪಾರ್ವತೀಶ್, (೨೦೧೩), ಬಿಡಿ ಚಿತ್ರಗಳು ಸಂಗ್ರಹ–೨, ಬೆಂಗಳೂರು: ಚಾರು ಪ್ರಕಾಶನ.

❖ ಪ್ರದೀಪ್ ಮಾಲ್ಗುಡಿ (ಸಂ), (೨೦೧೧) ನಿಜದ ನಾಡೋಜ, ಬೆಂಗಳೂರು: ಸಂಸ ಪ್ರಕಾಶನ.

❖ ಪ್ರಭಾಕರ ಜೋಶಿ ಎಂ (ಡಾ), (೨೦೧೫) ಯಕ್ಷಗಾನ ಸ್ಥಿತಿಗತಿ, ಮಂಗಳೂರು: ಡಾ. ದಯಾನಂದ ಪೈ ಮತ್ತು ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ.

❖ ಪ್ರಸಾದ ಸ್ವಾಮಿ. ಎಸ್ (೨೦೧೦) ಪರಂಪರೆ ಮತ್ತು ವಿಕ್ಷಿಪ್ತತೆ, ಬೆಂಗಳೂರು: ಕಣ್ವಪ್ರಕಾಶನ.

❖ ಬಸವರಾಜ ಕಲ್ಗುಡಿ (ಸಂ), (೧೯೯೨) ಕನ್ನಡ ವಾರ್ಷಿಕ-೧೯೯೧, ಹಂಪಿ: ಕನ್ನಡ ವಿಶ್ವವಿದ್ಯಾನಿಲಯ.

❖ ಬಸವರಾಜ ಕಲ್ಗುಡಿ, (೨೦೧೩) ಮೈಯೆ ಸೂರು ಮನವೇ ಮಾತು, ಬೆಂಗಳೂರು: ಅಭಿನವ ಪ್ರಕಾಶನ.

❖ ಬಸವರಾಜು. ಜಿ. ಪಿ, (೨೦೦೫) ಭೂಮಿಗಂಧ, ಅಂಕೋಲ: ರಾಘವೇಂದ್ರ ಪ್ರಕಾಶನ.

❖ ಬಿ ಎಂ ಶ್ರೀ, (೧೯೬೨) (ಮೂರನೆಯ ಮುದ್ರಣ), ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ ಭಾಗ-೧, ೨, ೩, ಮೈಸೂರು: ಕಾವ್ಯಲಯ ಪ್ರಕಾಶಕರು.

❖ ಭೀಮೇಶ ಯರಡೋಣಿ ಮತ್ತು ರವಿ ಎಂ (ಸಂ), (೨೦೨೧), ವಿಮರ್ಶೆ ಓದು, ಕೊಪ್ಪಳ: ಲೋಕನುಡಿ ಪ್ರಕಾಶನ

❖ ಮಮತಾ ಜಿ ಸಾಗರ (೧೯೯೨) ಕಾಡನವಿಲಿನ ಹೆಜ್ಜೆ. ಹೆಗ್ಗೋಡು: ಅಕ್ಷರ ಪ್ರಕಾಶನ

❖ ಮಾಸ್ತಿ ವೆಂಕಟೇಶ ಅಯ್ಯಂಗಾರ್, (೧೯೮೨), ವಿಮರ್ಶೆ (ಸಮಗ್ರ ಸಂಪುಟ), ಬೆಂಗಳೂರು: ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್.

❖ ಮಾಧವ ಪೆರಾಜೆ (೨೦೦೩), ಡೆರಿಡಾ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.

❖ ಮೋಹನ್ ಆಳ್ವಾ (ಪ್ರ ಸಂ) (೨೦೧೧) ನುಡಿಸಿರಿ ೨೦೧೦ ಸಮಗ್ರ ವಾಙ್ಮಯ. ಮೂಡಬಿದಿರೆ: ಆಳ್ವಾಸ್ ಪ್ರಕಾಶನ.

❖ ಯರವಿನ ತೆಲಿಮಠ ಸಿ.ಆರ್, (೨೦೦೬), ನವ್ಯ ವಿಮರ್ಶೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

❖ ಯರವಿನ ತೆಲಿಮಠ ಸಿ.ಆರ್, (೨೦೦೬), ಸಾಹಿತ್ಯ ಮಾದರಿಗಳು ಭಾಗ-೧, ಧಾರವಾಡ: ಕರ್ನಾಟಕ ವಿಶ್ವವಿದ್ಯಾನಿಲಯ

❖ ಯರವಿನ ತೆಲಿಮಠ ಸಿ.ಆರ್, (೨೦೧೧, ಮೂರನೇ ಮುದ್ರಣ),ಪಾಶ್ಚಾತ್ಯ ಸಾಹಿತ್ಯ ವಾದಗಳು, ಧಾರವಾಡ: ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾನಿಲಯ

❖ ರಘುನಂದನ್ ಬೇಲೂರು (ಸಂ), (೨೦೧೭), ಕಿರಂ ಹೊಸ ಕವಿತೆ ಸಂಪುಟ-೧, ಬೆಂಗಳೂರು: ಸಂಸ ಪ್ರಕಾಶನ.

❖ ರಘುನಂದನ್ ಬೇಲೂರು (ಸಂ), (೨೦೧೮), ಕಿರಂ ಹೊಸ ಕವಿತೆ ಸಂಪುಟ-೨, ಬೆಂಗಳೂರು: ನಿರುತ್ತರ ಪ್ರಕಾಶನ

❖ ರನ್ನ, (೧೯೯೫) ಗದಾಯುದ್ಧ, ಕಾಸರಗೋಡು: ಹನುಮಾನ್ ಆಫಿಸ್ ಸೆಟ್ ಪ್ರಿಂಟರ್ಸ್.

- ರಂಗನಾಥ ಕಂಟನಕುಂಟೆ, (೨೦೧೬) ಓದಿನ ಜಾಡು–ಸಾಹಿತ್ಯ ಸಂಸ್ಕೃತಿ ಬರಹಗಳು, ಗದಗ: ಲಡಾಯಿ ಪ್ರಕಾಶನ.
- ರವಿಕುಮಾರ್ ನೀಹ, (೨೦೦೬) ಪುಸ್ತಕ ವಿಮರ್ಶೆಯ ಕಥನಗಳು, ಬೆಂಗಳೂರು: ಅನ್ನಪೂರ್ಣ ಪ್ರಕಾಶನ.
- ರವಿಕುಮಾರ್ ನ (ಸಂ), (೨೦೧೫, ಎರಡನೇ ಮುದ್ರಣ), ಆಯ್ದ ವಿಮರ್ಶೆ, ಬೆಂಗಳೂರು: ಅಭಿನವ ಪ್ರಕಾಶನ.
- ರಹಮತ್ ತರೀಕೆರೆ (ಸಂ), (೨೦೦೧) ಕನ್ನಡ ಸಾಹಿತ್ಯ ಮಿಮಾಂಸೆ, ಹಂಪಿ: ಕನ್ನಡ ವಿಶ್ವವಿದ್ಯಾಲಯ.
- ರಹಮತ್ ತರೀಕೆರೆ, (೨೦೦೪), ಸಾಂಸ್ಕೃತಿ ಅಧ್ಯಯನ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ
- ರಹಮತ್ ತರೀಕೆರೆ, (೨೦೦೭) ಇಂಗ್ಲಿಷ್ ಗೀತೆಗಳು– ಸಾಂಸ್ಕೃತಿಕ ಮುಖಾಮುಖಿ, ಹಂಪಿ: ಕನ್ನಡ ವಿಶ್ವವಿದ್ಯಾಲಯ.
- ರಹಮತ್ ತರೀಕೆರೆ (ಸಂ), (೨೦೦೮ ಎರಡನೇ ಮುದ್ರಣ) ಕವಿರಾಜ ಮಾರ್ಗ– ಸಾಂಸ್ಕೃತಿಕ ಮುಖಾಮುಖಿ, ಹಂಪಿ: ಕನ್ನಡ ವಿಶ್ವವಿದ್ಯಾಲಯ
- ರಹಮತ್ ತರೀಕೆರೆ (ಸಂ), (೨೦೧೪, ಎರಡನೇ ಮುದ್ರಣ) ಕುಮಾರವ್ಯಾಸ ಭಾರತ– ಸಾಂಸ್ಕೃತಿಕ ಮುಖಾಮುಖಿ, ಹಂಪಿ: ಕನ್ನಡ ವಿಶ್ವವಿದ್ಯಾಲಯ
- ರಹಮತ್ ತರೀಕೆರೆ, (೨೦೧೧), ಇಲ್ಲಿ ಯಾರು ಮುಖ್ಯರಲ್ಲ, ಗದಗ: ಲಡಾಯಿ ಪ್ರಕಾಶನ.
- ರಾಜಕುಮಾರ್ ಬಿ ಸಿ (೨೦೧೭), ಸಂಸ ದರ್ಪಣ, ಬೆಂಗಳೂರು: ಸ್ನೇಹ ಬುಕ್ ಹೌಸ್.
- ರಾಜಪ್ಪ ದಳವಾಯಿ (ಸಂ), (೨೦೦೮), ಕನ್ನಡ ಸಾಹಿತ್ಯ ಪುನರ್ಮನನ– ೨೦೦೫, ಬೆಂಗಳೂರು: ದಾಮಿನಿ ಸಾಹಿತ್ಯ
- ರಾಜಪ್ಪ ದಳವಾಯಿ (ಸಂ), (೨೦೦೮), ಕನ್ನಡ ಸಾಹಿತ್ಯ ಪುನರ್ಮನನ– ೨೦೦೬, ಬೆಂಗಳೂರು: ದಾಮಿನಿ ಸಾಹಿತ್ಯ
- ರಾಜೇಂದ್ರ ಚೆನ್ನಿ (೨೦೦೪) ನಡುಹಗಲಿನ ಕಂದೀಲುಗಳು, ಬಳ್ಳಾರಿ: ಲೋಹಿಯಾ ಪ್ರಕಾಶನ.
- ರಾಜೇಂದ್ರ ಚೆನ್ನಿ, (೨೦೧೩) ಸದ್ಯದ ಹಂಗು, ಚೆನ್ನಪಟ್ಟಣ: ಪಲ್ಲವ ಪ್ರಕಾಶನ.
- ರಾಜೇಂದ್ರ ಚೆನ್ನಿ, (೨೦೧೩), ದೇಶಿವಾದ, ಬೆಂಗಳೂರು: ಅಭಿನವ ಪ್ರಕಾಶನ

❖ ರಾಘವೇಂದ್ರರಾವ್ ಎಚ್. ಎಸ್, (೧೯೫೫) ಹಾಡೆ ಹಾದಿಯ ತೋರಿತು, ಬೆಂಗಳೂರು: ಕನ್ನಡ ಸಂಘ ಕ್ರೈಸ್ಟ್ ಕಾಲೇಜು

❖ ರಾಘವೇಂದ್ರರಾವ್ ಎಚ್. ಎಸ್, (೧೯೮೮), ನಿಲುವು, ಬೆಂಗಳೂರು: ಕನ್ನಡ ಸಂಘ ಕ್ರೈಸ್ಟ್ ಕಾಲೇಜು.

❖ ರಾಘವೇಂದ್ರರಾವ್ ಎಚ್. ಎಸ್, (ಸಂ) (೨೦೦೧) ಶತಮಾನದ ಸಾಹಿತ್ಯ ವಿಮರ್ಶೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.

❖ ರಾಘವೇಂದ್ರರಾವ್ ಎಚ್. ಎಸ್, (೨೦೧೮) ಪ್ರಗತಿಶೀಲತೆ, ಬೆಂಗಳೂರು: ಅಭಿನವ ಪ್ರಕಾಶನ

❖ ರಾಮಚಂದ್ರನ್. ಸಿ. ಎನ್, (೨೦೦೦) ವಸಾಹತ್ತೋತ್ತರ ಚಿಂತನೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ

❖ ರಾಮಚಂದ್ರನ್. ಸಿ. ಎನ್, (೨೦೧೬) (ಎಂಟನೆಯ ಮುದ್ರಣ), ಸಾಹಿತ್ಯ ವಿಮರ್ಶೆ ಮತ್ತು ವಸಾಹತ್ತೋತ್ತರ ಚಿಂತನೆ, ಬೆಂಗಳೂರು: ಅಂಕಿತ ಪ್ರಕಾಶನ.

❖ ರಾಮಲಿಂಗಪ್ಪ ಟಿ ಬೇಗೂರು, (೨೦೧೭) ನುಡಿಯಾಟ, ಬೆಂಗಳೂರು:ಸಪ್ನ ಬುಕ್ ಹೌಸ್

❖ ಲಕ್ಷ್ಮೀನಾರಾಯಣ ಭಟ್ಟ ಎನ್ ಎಸ್ (ಸಂ), (೧೯೭೭) ಅನನ್ಯ- ಗೋಪಾಲ ಕೃಷ್ಣ ಅಡಿಗರ ಸಮಗ್ರ ಕಾವ್ಯ ಪರಿಶೀಲನೆ, ಬೆಂಗಳೂರು: ಕ್ಷಮಾ ಪ್ರಕಾಶನ.

❖ ಲಂಕೇಶ್. ಪಿ, (೨೦೧೨) (ಮೂರನೇ ಮುದ್ರಣ), ನೀಲು ಕಾವ್ಯ, ಬೆಂಗಳೂರು: ಲಂಕೇಶ್ ಪ್ರಕಾಶನ.

❖ ಲಂಕೇಶ್. ಪಿ, (೧೯೯೭) ಹುಳಿಮಾವಿನ ಮರ, ಬೆಂಗಳೂರು: ಲಂಕೇಶ್ ಪ್ರಕಾಶನ.

❖ ಲಿಂಗಪ್ಪ ಮರೆಪ್ಪ, (೨೦೦೩) ಡಾ. ಡಿ. ಆರ್ ನಾಗರಾಜ ಅವರ ವಿಮರ್ಶೆ ಹಾಗೂ ಕನ್ನಡ ಸಾಹಿತ್ಯ;- ಒಂದು ಪುನರ್ ಮೌಲ್ಯಮಾಪನ (ಅಪ್ರಕಟಿತ ಪಿ ಎಚ್ ಡಿ), ಗುಲ್ಬರ್ಗಾ: ಕನ್ನಡ ಅಧ್ಯಯನ ಸಂಸ್ಥೆ ಗುಲ್ಬರ್ಗಾ ವಿಶ್ವವಿದ್ಯಾಲಯ.

❖ ಲಿಂಗದೇವರು ಹಳೆಮನೆ, (೨೦೦೪) ರಂಗಸಂಪನ್ನರು ಸಿ ಜಿ ಕೃಷ್ಣಮೂರ್ತಿ, ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ.

❖ ವಾಸುದೇವಮೂರ್ತಿ ಟಿ ಎನ್ (೨೦೧೧), ಪಾಷಾಣದ ಹಂಗು ಅಲ್ಲಮನ ದಾರ್ಶನಿಕ ಮೀಮಾಂಸೆಯ ಅಧ್ಯಯನ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.

❖ ವಾಸುದೇವಮೂರ್ತಿ ಟಿ ಎನ್, (೨೦೧೨), ಶಿಶು ಕಂಡ ಕನಸು, ಬೆಂಗಳೂರು: ನುಡಿ ಪುಸ್ತಕ

❖ ವಾಸುದೇವಮೂರ್ತಿ ಟಿ ಎನ್ (೨೦೨೦ ಎರಡನೇಪರಿಷ್ಕೃತ ಮುದ್ರಣ), ಕಿರಂ ನೆನಪು, ಬೆಂಗಳೂರು: ವಂಶಿ ಪಬ್ಲಿಕೇಷನ್ಸ್.

❖ ವಿಕ್ರಮ ವಿಸಾಜಿ (೨೦೨೦) ಪಥ್ಯದ ಭವಾವಳಿ, ಬೆಂಗಳೂರು: ಅಭಿನವ ಪ್ರಕಾಶನ.

❖ ವೀರಣ್ಣ ದಂಡೆ (೨೦೦೭, ಎರಡನೇ ಮುದ್ರಣ), ಜನಪದ ಕಾವ್ಯಮೀಮಾಂಸೆ ಹಾಗೂ ವಿಮರ್ಶಾ ಪ್ರಸ್ಥಾನಗಳು, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.

❖ ವೀರಣ್ಣ ದಂಡೆ (೨೦೧೮, ಮೂರನೇ ಮುದ್ರಣ), ಕನ್ನಡ ಕಾವ್ಯ ಮೀಮಾಂಸೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

❖ ವೀರೇಶಬಡಿಗೇರ (ಸಂ), (೨೦೦೪) ಹಸ್ತಪ್ರತಿ ಅಧ್ಯಯನ, ಹಂಪಿ: ಕನ್ನಡ ವಿಶ್ವವಿದ್ಯಾಲಯ.

❖ ವೀರಭದ್ರಪ್ಪ ಬಿಸ್ಲಳ್ಳಿ (ಸಂ), (೨೦೦೮) (ಎರಡನೇ ಮುದ್ರಣ), ಪ್ರೊಫೆಸರ್ ಎಂ.ಡಿ.ಎನ್, ಮೈಸೂರು: ಅಭಿರುಚಿ ಪ್ರಕಾಶನ.

❖ ವೆಂಕಟೇಶ ಇಂದ್ವಾಡಿ (ಸಂ), (೨೦೦೪) ಮಂಟೇಸ್ವಾಮಿ ಕಾವ್ಯ ಸಾಂಸ್ಕೃತಿಕ ಮುಖಾಮುಖಿ, ಹಂಪಿ: ಕನ್ನಡ ವಿಶ್ವವಿದ್ಯಾನಿಲಯ.

❖ ವೆಂಕಟೇಶ. ಜಿ ಮಲ್ಲೇಪುರಂ (ಸಂ), (೧೯೯೩) ಕನ್ನಡ ವಾರ್ಷಿಕ-೧೯೯೨, ಹಂಪಿ: ಕನ್ನಡ ವಿಶ್ವವಿದ್ಯಾನಿಲಯ.

❖ ವೆಂಕಟೇಶ್ ಜಿ ಮಲ್ಲೇಪುರಂ, (೧೯೯೭) ತಳಿವ ತೇಜದ ಮುಂದೆ, ಹುಬ್ಬಳ್ಳಿ ಸಾಹಿತ್ಯ ಪ್ರಕಾಶನ.

❖ ವೆಂಕಟೇಶ ಜಿ ಮಲ್ಲೇಪುರಂ, (೨೦೦೪) ಅರಿವಿನ ಕಥನ, ಬೆಂಗಳೂರು: ಸಿ ವಿ ಜಿ ಪಬ್ಲಿಕೇಷನ್.

❖ ವೆಂಕಟೇಶಮೂರ್ತಿ. ಟಿ, (೨೦೧೯), ಯಾಜಮಾನ್ಯ ಸಂಕಥನ, ಬೆಂಗಳೂರು: ಕಿರಂ ಪ್ರಕಾಶನ

❖ ಶಂಕರ ಎಂ, (೨೦೦೮) ಕನ್ನಡದಲ್ಲಿ ಪ್ರಾಯೋಗಿಕ ವಿಮರ್ಶೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

❖ ಶಂಕರ ನಾರಾಯಣ ಎ ಎಸ್ (ಸಂ), (೨೦೦೮) ಆಕಾಶ ದೀಪ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.

❖ ಶಾಂತಿನಾಥ ದೇಸಾಯಿ (ಸಂ), (೧೯೮೭) ಚಿತ್ತಾಲರ ಕಾವ್ಯಸೃಷ್ಟಿ, ಅಂಕೋಲ: ಶ್ರೀ ರಾಘವೇಂದ್ರ ಪ್ರಕಾಶನ.

❖ ಶಿವತೀರ್ಥನ್ ಕೆ ಎನ್ ಮತ್ತು ಕೃಷ್ಣಮೂರ್ತಿ ಹಾನೂರು (ಸಂ), (೨೦೦೪) ದೇವ ಸಾಹಿತ್ಯ, ಮೈಸೂರು: ನೈರುತ್ಯ ಪ್ರಕಾಶನ.

❖ ಶಿವಪ್ರಕಾಶ ಎಚ್ ಎಸ್ (೨೦೧೦), ಕವಿತೆ ಇಂದಿನ ತನಕ, ಮೈಸೂರು: ವಿಸ್ಮಯ ಪ್ರಕಾಶನ.

❖ ಶಿವರಾಜ ಬ್ಯಾಡರಹಳ್ಳಿ (ಸಂ), (೨೦೧೯) ನುಡಿ ಬೆಡಗು, ಬೆಂಗಳೂರು: ಸಂಸ ಪ್ರಕಾಶನ

❖ ಶಿವರುದ್ರಪ್ಪ ಜಿ ಎಸ್ (ಸಂ), (೧೯೭೨) ಚಂದನ (ಕೆ ಎಸ್ ನ ಅಭಿನಂದನಾ ಗ್ರಂಥ), ಮೈಸೂರು: ಗೀತಾ ಬುಕ್ ಹೌಸ್

❖ ಶಿವರುದ್ರಪ್ಪ ಜಿ ಎಸ್ (ಸಂ), (೧೯೭೩) ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ, ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.

❖ ಶಿವರುದ್ರಪ್ಪ ಜಿ ಎಸ್ (ಸಂ), (೧೯೭೩) ಸಾಹಿತ್ಯವಾರ್ಷಿಕ, ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.

❖ ಶಿವರುದ್ರಪ್ಪ ಜಿ ಎಸ್ (ಸಂ), (೧೯೮೨) ದಶವಾರ್ಷಿಕ ಸಾಹಿತ್ಯ ಸಮೀಕ್ಷೆ, ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.

❖ ಶಿವರುದ್ರಪ್ಪ ಜಿ ಎಸ್ (ಸಂ), (೧೯೮೨) ಸಾಹಿತ್ಯವಾರ್ಷಿಕ, ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.

❖ ಶಿವರುದ್ರಪ್ಪ ಜಿ ಎಸ್ (ಸಂ), (೧೯೮೨) ಭಾರತೀಯತೆ ಮತ್ತು ಕನ್ನಡ ಲೇಖಕ, ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.

❖ ಶಿವರುದ್ರಪ್ಪ ಜಿ ಎಸ್ (ಪ್ರ. ಸಂ), (೧೯೮೨) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ-೩, ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.

❖ ಶಿವರುದ್ರಪ್ಪ ಜಿ ಎಸ್ (ಸಂ), (೧೯೮೪) ಸಾಹಿತ್ಯವಾರ್ಷಿಕ, ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.

❖ ಶಿವರುದ್ರಪ್ಪ ಜಿ ಎಸ್ (ಸಂ), (೧೯೮೬), ಮಾಸ್ತಿ ಸಾಹಿತ್ಯ ಒಂದು ಅಧ್ಯಯನ, ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ

❖ ಶಿವರುದ್ರಪ್ಪ ಜಿ ಎಸ್ (ಸಂ), (೧೯೯೦) ಷೇಕ್ಸ್‌ಪಿಯರ್ ಮತ್ತು ಕನ್ನಡ ಕವಿತೆ, ಬೆಂಗಳೂರು: ಸಾಹಿತ್ಯ ಅಕಾಡೆಮಿ.

❖ ಶಿವರುದ್ರಪ್ಪ. ಜಿ ಎಸ್, (೨೦೦೭), ಕಾವ್ಯಾರ್ಥಚಿಂತನ, ಬೆಂಗಳೂರು: ಕನ್ನಡ ಸಂಸ್ಕೃತಿ ಇಲಾಖೆ

❖ ಶಿವರುದ್ರಪ್ಪ. ಜಿ. ಎಸ್, (೨೦೧೦) (ಹತ್ತನೆಯ ಮುದ್ರಣ) ವಿಮರ್ಶೆಯ ಪೂರ್ವ ಪಶ್ಚಿಮ, ಬೆಂಗಳೂರು: ಸಾಹಿತ್ಯ ಭಂಡಾರ.

❖ ಶಿವಪ್ರಕಾಶ್ ಎಚ್ ಎಸ್, (೧೯೯೩)(ಏಳನೇ ಮುದ್ರಣ), ಮಹಾಚೈತ್ರ, ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್.

❖ ಶ್ರೀನಿವಾಸಶೂದ್ರ, (೨೦೧೯), ಕಿರಂ ಲೋಕ, ಬಹುರೂಪಿ: ಬೆಂಗಳೂರು

❖ ಶ್ರೀನಿವಾಸರಾಜು (ಸಂ), (೧೯೮೭) ಅಂಕಣ, ಬೆಂಗಳೂರು: ಅಂಕಣ ಪ್ರಕಾಶನ.

- ಶ್ರೀನಿವಾಸ ಶೂದ್ರ (ಸಂ), (೧೯೯೦) ಸಾಹಿತ್ಯದಲ್ಲಿ ಶ್ರೇಷ್ಠತೆ- ಒಂದು ಸಂವಾದ, ಬೆಂಗಳೂರು: ಶೂದ್ರ ಪ್ರಕಾಶನ.
- ಶ್ರೀನಿವಾಸಮೂರ್ತಿ. ಕಾ ವೆಂ (೨೦೧೫), ಸಾಹಿತ್ಯ ಯಾನ, ಬೆಂಗಳೂರು: ಅಕ್ಷರ ಮಂಟಪ.
- ಶ್ರೀನಿವಾಸ ಗೌಡ ಕೆ ಎಂ, ನಾಗರಾಜ ಕಿ ರಂ, ಚಂದ್ರಶೇಖರ್ ಎಸ್ (ಸಂ), (೨೦೦೦) ಸಿಂಹಾಲೋಕ, ಬೆಂಗಳೂರು: ಲಿಪಿ ಪ್ರಕಾಶನ.
- ಶೇಷಗಿರಿರಾವ್ ಎಲ್ ಎಸ್, (೧೯೮೮) ಹೊಸಗನ್ನಡ ಸಾಹಿತ್ಯ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ
- ಶೇಷಗಿರಿರಾವ್ ಎಲ್ ಎಸ್, (೧೯೯೦) ಭಾರತೀಯ ಸಾಹಿತ್ಯ ಸಮೀಕ್ಷೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಸರ್ಜಾಶಂಕರ್ ಅರಳೀಮಠ (ಡಾ), (೨೦೧೭) ವೈಚಾರಿಕ ಆಕೃತಿಗಳು (ಅಪ್ರಕಟಿತ ಮಹಾಪ್ರಬಂಧ), ಹಂಪಿ: ಕನ್ನಡ ವಿಶ್ವವಿದ್ಯಾಲಯ.
- ಸತ್ಯನಾರಾಯಣ ಕೆ, (೨೦೦೯) ಖಾಸಗೀವಿಮರ್ಶೆ, ಬೆಂಗಳೂರು: ವಸಂತ ಪ್ರಕಾಶನ.
- ಸಬಿಹಾ ಭೂಮಿಗೌಡ (ಸಂ), (೨೦೦೯) ಕುವೆಂಪು ಶತಮಾನೋತ್ತರ ನೋಟ, ಕುಪ್ಪಳ್ಳಿ: ರಾಷ್ಟ್ರೀಯ ಕುವೆಂಪು ಪ್ರತಿಷ್ಠಾನ.
- ಸಿ.ಜಿ. ಕೆ, (೨೦೦೩) ಕತ್ತಾಲೆ ಬೆಳದಿಂಗಳೊಳಗ, ಬೆಂಗಳೂರು: ರಂಗನಿರಂತರ
- ಸಿದ್ಧಲಿಂಗಯ್ಯ, (೧೯೮೫) ಹೊಲೆ ಮಾದಿಗರ ಹಾಡು, ಬೆಂಗಳೂರು: ಮೈತ್ರಿ ಪ್ರಕಾಶನ
- ಸಂಧ್ಯಾದೇವಿ, (೨೦೦೫) ಮಾತು ಚಿಟ್ಟೆ ಬೆಂಕಿ-ಬೆರಳು ಮುರಿದ ಮುರಿದ ಮುಳ್ಳಿನಂತೆ ಜ್ಞಾನ, ಬೆಮಗಳೂರು: ಅಧ್ಯಯನ ಮಂಡಲ.
- ಸುರೇಶ್ ನಾಗಲ ಮಡಿಕೆ, (೨೦೧೧), ಮುತ್ತು ಬಂದಿತು ಕೇರಿಗೆ: ಕನಕದಾಸರ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು: ಸಿರಿವರ ಪ್ರಕಾಶನ.
- ಸೋಮಣ್ಣ ಜೆ (ಸಂ), (೨೦೦೯) ಒಡನಾಟದ ನೆನಪು, ಮೈಸೂರು: ಉನ್ನತಿ ಪ್ರಕಾಶನ.
- ಹರೀಶ ಜಿ ಬಿ (ಸಂ), (೨೦೦೯), ನೀರಬೆಳಗು- ಶಂಕರ ಮೊಕಾಶಿ ಪುಣೇಕರ ಲೇಖನಗಳು, ಬೆಂಗಳೂರು: ಸಪ್ನ ಬುಕ್ ಹೌಸ್.
- ಹರೀಶ ಜಿ ಬಿ (ಸಂ), (೨೦೧೨), ಮಹತಿ- ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ತೌಲನಿಕ ಚಿಂತನೆ, ಬೆಂಗಳೂರು: ಅಭಿನವ ಪ್ರಕಾಶನ
- ಹಿರೇಮಠ ಆರ್ ಸಿ, (೧೯೫೧) ಸಾಹಿತ್ಯ ಸಂಸೃಷ್ಟಿ, ಬೆಳಗಾವಿ: ಶೋಭಾ ಗ್ರಂಥಮಾಲಾ.

❖ ಹಿರೇಮಠ. ಆರ್ ಸಿ, (೧೯೭೬) (ಎರಡನೆಯ ಮುದ್ರಣ) ಸಾಹಿತ್ಯ ವಿಮರ್ಶೆ (ಆರು ಉಪನ್ಯಾಸಗಳು), ಧಾರವಾಡ: ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ.

❖ ಹೆಗಡೆ. ಎಂ. ಜಿ, (೧೯೯೧) ಮಾಸ್ತಿ ವಿಮರ್ಶೆ: ಒಂದು ಅಧ್ಯಯನ, ಧಾರವಾಡ: ಶ್ರೀ ಮಾತಾ ಪ್ರಕಾಶನ.

❖ ೧೯೯೬ ಮೂರು ದಲಿತ ಕಮ್ಮಟಗಳು–ಕಾವ್ಯಕಮ್ಮಟ, ಕನ್ನಡ ಕಾವ್ಯದಲ್ಲಿ ದಲಿತ ಸಂವೇದನೆ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.

ಅನುಬಂಧ ૩:
ನಿಯತಕಾಲಿಕೆಗಳು

❖ ಅನಂತಮೂರ್ತಿ ಯು ಆರ್ (ಸಂ), (೧೯೪೪ ಜುಲೈ) ರುಜುವಾತು, ಸಂಚಿಕೆ–೩೬ ಹೆಗ್ಗೋಡು: ಅಕ್ಷರ ಪ್ರಕಾಶನ.

❖ ಅನಂತಮೂರ್ತಿ. ಯು ಆರ್ (ಸಂ), (೧೯೮೭ ಏಪ್ರಿಲ್– ಜೂನ್) ರುಜುವಾತು, ಸಂಚಿಕೆ–೨೬, ಹೆಗ್ಗೋಡು: ಅಕ್ಷರ ಪ್ರಕಾಶನ.

❖ ಅಮರೇಶ ನುಗಡೋಣಿ (ಸಂ), (೨೦೦೬ ಜುಲೈ–ಡಿಸೆಂಬರ್) ಕನ್ನಡ ಅಧ್ಯಯನ, ಸಂಚಿಕೆ–೨, ಸಂಪುಟ–೧೨. ಹಂಪಿ– ಕನ್ನಡ ವಿಶ್ವವಿದ್ಯಾಲಯ.

❖ ಇಂದೂಧರ ಹೊನ್ನಾಪುರ (ಸಂ) (೨೦೧೦ ಸೆಪ್ಟಂಬರ್) ಸಂವಾದ, ಸಂಚಿಕೆ–೧೨, ಸಂಪುಟ–೦೮. ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್.

❖ ಉಮೇಶ್ ಎಚ್ ಎಸ್ (ಸಂ), (೨೦೧೩ ಅಕ್ಟೋಬರ್ ಡಿಸೆಂಬರ್) ಅರುಹು ಕುರುಹು, ಸಂಚಿಕೆ–೫, ಸಂಪುಟ–೧೯, ಮೈಸೂರು.

❖ ಗೋಪಾಲಕೃಷ್ಣ ಅಡಿಗ (ಸಂ) (೧೯೬೩) ಸಂಚಿಕೆ–೧, ಸಂಪುಟ–೧, ಸಾಕ್ಷಿ, ಬೆಂಗಳೂರು

❖ ಚಂದ್ರಕಾಂತ್ ವಡ್ಡು (ಸಂ), (೨೦೧೯ ಆಗಸ್ಟ್) ಸಮಾಜಮುಖಿ ಮಾಸಿಕ, ಸಂಪುಟ–೨, ಸಂಚಿಕೆ–೮, ಬೆಂಗಳೂರು

❖ ಚಂದ್ರಶೇಖರ ಪಾಟೀಲ (ಸಂ), (೧೯೮೧ ಜನವರಿ ಫೆಬ್ರವರಿ) ಸಂಕ್ರಮಣ, ಸಂಚಿಕೆ–೮–೯, ಸಂಪುಟ–೧೬. ಬೆಂಗಳೂರು–ಸಂಕ್ರಮಣ ಪ್ರಕಾಶನ

❖ ಚಂದ್ರಶೇಖರ ಪಾಟೀಲ (ಸಂ) (೨೦೦೦ ಜನವರಿ ಫೆಬ್ರವರಿ) ಸಂಕ್ರಮಣ. ಸಂಚಿಕೆ–೮, ಸಂಪುಟ–೩೫ ಬೆಂಗಳೂರು–ಸಂಕ್ರಮಣ ಪ್ರಕಾಶನ

❖ ಚಂದ್ರಶೇಖರ ಪಾಟೀಲ (ಸಂ), (೨೦೦೮ ಏಪ್ರಿಲ್ ಮಾರ್ಚ್) ಸಂಕ್ರಮಣ, ಸಂಚಿಕೆ–೨, ಸಂಪುಟ–೪೩. ಬೆಂಗಳೂರು–ಸಂಕ್ರಮಣ ಪ್ರಕಾಶನ

❖ ಚಂದ್ರಶೇಖರ ಪಾಟೀಲ (ಸಂ), (೨೦೧೦ ಜನವರಿ ಫೆಬ್ರವರಿ) ಸಂಕ್ರಮಣ, ಸಂಚಿಕೆ–೦೪, ಸಂಪುಟ–೪೫. ಬೆಂಗಳೂರು––ಸಂಕ್ರಮಣ ಪ್ರಕಾಶನ.

❖ ನಾಗರಾಜ ಆರ್ ಜಿ ಹಳ್ಳಿ (ಸಂ), (೧೯೯೧ ಜುಲೈ–ಆಗಸ್ಟ್) ಆನ್ವೇಷಣೆ ಸಾಹಿತ್ಯ ಪತ್ರಿಕೆ, ಸಂಪುಟ–೭, ಸಂಚಿಕೆ–೫, ಬೆಂಗಳೂರು

❖ ನಾಗರಾಜು ಆರ್ ಜಿ ಹಳ್ಳಿ (ಸಂ) (೨೦೧೧ ಜುಲೈ–ಸೆಪ್ಟಂಬರ್) ಅನ್ವೇಷಣೆ ಸಾಹಿತ್ಯ ಪತ್ರಿಕೆ, ಸಂಚಿಕೆ–೧ ಸಂಪುಟ ೧೧, ಬೆಂಗಳೂರು

❖ ಪ್ರಹ್ಲಾದ್. ಡಿ.ವಿ (ಸಂ), (೨೦೧೦, ಸೆಪ್ಟಂಬರ್ ಅಕ್ಟೋಬರ್), ಸಂಚಯ, ಸಂಪುಟ–೧೯, ಸಂಚಿಕೆ–೮೮,೮೯ (ಸಂಯುಕ್ತ ಸಂಚಿಕೆ) ಬೆಂಗಳೂರು.

❖ ಬಾಕಿನ (ಸಂ) (೨೦೧೦ ಆಗಸ್ಟ್), ಗಾಂಧಿ ಬಜಾರ್– ಸಾಹಿತ್ಯ ಮಾಸಿಕ, ಸಂಚಿಕೆ–೦೮, ಸಂಪುಟ–೨೪. ಬೆಂಗಳೂರು.

❖ ಬೋರೇಗೌಡ (ಸಂ), (ಅಗಸ್ಟ್ ೨೦೧೦), ಅಭಿವ್ಯಕ್ತಿ, ಸಂಚಿಕೆ –೮, ಸಂಪುಟ–೩, ಮಂಡ್ಯ: ಕರ್ನಾಟಕ ಸಂಘ.

❖ ಮಹಲಿಂಗ ಭಟ್ (ಸಾರಸಂಗ್ರಹ), (೨೦೦೮, ಡಿಸೆಂಬರ್ ೧೨ ಮತ್ತು ೧೯) ಉದಯವಾಣಿ ದಿನಪತ್ರಿಕೆ, ಮೌಖಿಕ ಪರಂಪರೆಗಳು ಮತ್ತು ತಾಳಮದ್ದಳೆ, ಮಣಿಪಾಲ: ಉದಯವಾಣಿ ಪ್ರಿಂಟರ್ಸ್

❖ ರಹಮತ್ ತರೀಕೆರೆ (ಸಂ) (೨೦೦೧ ಏಪ್ರಿಲ್–ಜೂನ್) ಕನ್ನಡ ಅಧ್ಯಯನ–ಬಿಸಿಲು ಸಂಚಿಕೆ. ಸಂಚಿಕೆ–೪, ಸಂಪುಟ–೭. ಹಂಪಿ: ಕನ್ನಡ ವಿಶ್ವವಿದ್ಯಾಲಯ.

❖ ರಾಮಕೃಷ್ಣ ಜಿ (ಸಂ), (೨೦೧೦ ಸೆಪ್ಟಂಬರ್), ಹೊಸತು– ಮಾಸಿಕ, ಸಂಚಿಕೆ ೬, ಸಂಪುಟ–೮. ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್

❖ ರೇಶ್ಮ ಭಟ್ (ಸಂ), (೨೦೧೩ ಜುಲೈ ಸೆಪ್ಟಂಬರ್) ಚಿಂತನ ಬಯಲು, ಸಂಚಿಕೆ–೧, ಸಂಪುಟ–೨. ಬೆಳ್ತಂಗಡಿ: ಚಿಂತನ ಬಯಲು ಪ್ರಕಾಶನ.

❖ ವಿರೇಶ್ ಬಡಿಗೇರ (ಸಂ) (೨೦೦೮ ಜುಲೈ ಡಿಸೆಂಬರ್ ಮತ್ತು ೨೦೦೯ ಜನವರಿ ಜೂನ್) ಹಸ್ತಪ್ರತಿ ಅಧ್ಯಯನ- ಸಂಯುಕ್ತ ಸಂಚಿಕೆ. ಸಂಚಿಕೆ-೧ ಮತ್ತು ೨, ಸಂಪುಟ-೬, ಹಂಪಿ: ಕನ್ನಡ ವಿಶ್ವವಿದ್ಯಾಲಯ

❖ ಸಿದ್ಧಲಿಂಗಯ್ಯ (ಸಂ), (೨೦೧೨ ಅಕ್ಟೋಬರ್- ಡಿಸೆಂಬರ್) ಪುಸ್ತಕ ಲೋಕ,ಸಂಪುಟ-೪, ಸಂಚಿಕೆ-೦೨, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.

❖ ಸುರೇಶ್ ಪಿ (ಸಂ), (೨೦೧೪) ಸಂಸ ರಂಗಪತ್ರಿಕೆ, ಸಂಪುಟ-೭, ಸಂಚಿಕೆ-೧, ಬೆಂಗಳೂರು: ಸಂಸ ಪ್ರಕಾಶನ.

❖ ಶ್ರೀನಿವಾಸ ಶೂದ್ರ (ಸಂ), (೧೯೮೧ ನವೆಂಬರ್) ಶೂದ್ರ, ಸಂಚಿಕೆ- ೧, ಸಂಪುಟ-೭ ಬೆಂಗಳೂರು

❖ ಶ್ರೀನಿವಾಸ ಶೂದ್ರ (ಸಂ), (೧೯೮೯ ಜೂನ್ ಜುಲೈ) ಶೂದ್ರ, ಸಂಚಿಕೆ- ೮-೯, ಸಂಪುಟ-೧೫. ಬೆಂಗಳೂರು: ಶೂದ್ರ ಪ್ರಕಾಶನ

❖ ಶ್ರೀನಿವಾಸ ಶೂದ್ರ (ಸಂ), (೧೯೮೯ ಆಗಸ್ಟ್) ಶೂದ್ರ, ಸಂಚಿಕೆ- ೧೦, ಸಂಪುಟ-೧೫. ಬೆಂಗಳೂರು: ಶೂದ್ರ ಪ್ರಕಾಶನ

❖ ಶ್ರೀನಿವಾಸ ಶೂದ್ರ (ಸಂ), (೧೯೯೦ ಆಗಸ್ಟ್) ಶೂದ್ರ, ಸಂಚಿಕೆ- ೧೦, ಸಂಪುಟ-೧೬. ಬೆಂಗಳೂರು: ಶೂದ್ರ ಪ್ರಕಾಶನ

❖ ಶೂದ್ರ ಶ್ರೀನಿವಾಸ (ಸಂ), (೧೯೮೯, ಜೂನ್-ಜುಲೈ) ಶೂದ್ರ, ಸಂಪುಟ-೧೫, ಸಂಚಿಕೆ-೮,೯, ಬೆಂಗಳೂರು: ಶೂದ್ರ ಪ್ರಕಾಶನ

❖ ಶೂದ್ರ ಶ್ರೀನಿವಾಸ (ಸಂ), (೧೯೮೯) ಸಂಚಿಕೆ ೧೦, ಸಂಪುಟ-೫, ಶೂದ್ರ ಸಾಹಿತ್ಯ ಪತ್ರಿಕೆ, ಬೆಂಗಳೂರು: ಶೂದ್ರ ಪ್ರಕಾಶನ

ಅನುಬಂಧ ೪:

ಅಂತರ್ಜಾಲ ಮಾಹಿತಿಗಳು

ಅಂತರ್ಜಾಲ ಮಾಹಿತಿಗಳು

❖ ಅನಂತಮೂರ್ತಿ ಯು ಆರ್ (೨೦೧೦ ಅಗಸ್ಟ್ ೧೩) ಹಿಂದೂ ದಿನಪತ್ರಿಕೆ (ಅಂತರ್ಜಾಲ ಪುಟ) http://www.thehindu.com/todays-paper/tp-features/tp-fridayreview/When-speech-showered-like-snow.../article16129489.ece

❖ ಅಬ್ದುಲ್ ರಶೀದ್ (ಸಂ) (೨೦೦೭ ನವೆಂಬರ್ ೫) ದ ಮೈಸೂರ್ ಪೋಸ್ಟ್ https://mysorepost.wordpress.com/2007/05/11/kirumnagaraj/

❖ ಅಬ್ದುಲ್ ರಶೀದ್ (ಸಂ) (೨೦೦೭ ನವೆಂಬರ್ ೨೬) ದ ಮೈಸೂರ್ ಪೋಸ್ಟ್ https://mysorepost.wordpress.com

❖ ಕಿರಣ್ ಗಾಜನೂರು, ನವೆಂಬರ್ ೧೬, ೨೦೧೬ (ಕನಕನ ಮರುಓದು: ಏನು? ಮತ್ತು ಹೇಗೆ) varthabharat.in

❖ ಕಿ. ರಂ. ನಾಗರಾಜ ಮಠಾಧೀಶರನ್ನು ಯಾಕೆ ಟೀಕಿಸಬಾರದು?:ಕಿ.ರಂ annada.webdunia.comarticlekarnataka-news ಮಠಾಧೀಶರನ್ನು–ಯಾಕೆ–ಟೀಕಿಸಬಾರದು–ಕಿ–ರಂ–109020700015_1.htm

❖ ಕಿ. ರಂ ನಾಗರಾಜ, ಕಿ.ರಂ ನಾಗರಾಜ ಅವರ ಕೊನೆಯ ಉಪನ್ಯಾಸ http://ruthumana.com/2017/03/21/kiram_last_leacture/

❖ ಕಿ.ರಂ ಬರೆದಿದ್ದಾರೆ ಜೀವಚೈತನ್ಯದೆಡೆಗಿನ ಚಲನೆ (೨೦೦೯ ಮಾರ್ಚ್ ೧) https://odubazar.wordpress.com/2009/03/01/%E0%B2%95%E0%B2%BF-%E0%B2%B0%E0%B2%82-%E0%B2%AC%E0%B2%B0%E0%B3%86%E0%B2%A6%E0%B2%BF%E0%B2%A6%E0%B3%8D%E0%B2%A6%E0%B2%BE%E0%B2%B0%E0%B3%86/

❖ ಕಿ.ರಂ ಬರೆದಿದ್ದಾರೆ ಶಬ್ಧಚಿತ್ರಗಳ ಭಾವಲೋಕ (೨೦೦೯ ಏಪ್ರಿಲ್ ೩) http://avadhimag.com/2009/04/03/%E0%B2%95%E0%B2%BF-%E0%B2%B0%E0%B2%82-%E0%B2%AC%E0%B2%B0%E0%B3%86%E0%B2%A6%E0%B2%BF%E0%B2%A6%E0%B3%8D%E0%B2%A6%E0%B2%BE%E0%B2%B0%E0%B3%86-%E0%B2%B6%E0%B2%AC%E0%B3%8D%E0%B2%A6-%E0%B2%9A%E0%B2%BF/

❖ ಗಿರಿಜಾಶಾಸ್ತ್ರಿ, (೨೦೧೪, ಆಗಸ್ಟ್ ೭), ಕನ್ನಡ ಕಾವ್ಯಲೋಕದ ಮಾಂತ್ರಿಕ ಕಿ ರಂ ಮೇಷ್ಟು’ http://avadhimag.com/2014/08/07/%E0%B2%95%E0%B2%BF-%E0%B2%B0%E0%B2%82-

%E0%B2%AE%E0%B3%87%E0%B2%B7%E0%B3%8D%E0%B2%9F%E0%B3%8D%E0%B2%B0%E0%B3%81/

❖ ಪ್ರದೀಪ್ ಮಾಲ್ಗುಡಿ, (೨೦೧೪, ಏಪ್ರಿಲ್ ೧೪) ನಿಜದ ನಾಡೋಜ http://lokatannoladabalika.blogspot.in/2014/04/blog-post_126.html

❖ ೨. ಭಾಗೇಶ್ರೀ (೨೦೧೦, ಆಗಸ್ಟ್ ೮) ಭಾಗೇಶ್ರೀ ನೆನಪಲ್ಲಿ ಕಿ ರಂ, http://avadhimag.com/2010/08/08/%E0%B2%AD%E0%B2%BE%E0%B2%97%E0%B3%87%E0%B2%B6%E0%B3%8D%E0%B2%B0%E0%B3%80-%E0%B2%A8%E0%B3%86%E0%B2%A8%E0%B2%AA%E0%B2%B2%E0%B3%8D%E0%B2%B2%E0%B2%BF-%E0%B2%95%E0%B2%BF-%E0%B2%B0%E0%B2%82/

❖ ಮಣಿಕಾಂತ್, ಎ.ಆರ್. (೨೦೦೩, ಏಪ್ರಿಲ್ ೧೬), ಇವ್ರಿರೋದೇ ಹೀಗೆ : ಡೀರಂಗೆ ಪ್ರಾಸವಾಗಿ –

'ಕೀರಂ'! http://kannada.oneindia.com/literature/articles/2003/081003keeram.html

❖ ಮೋಹನ್ ಜಿ ಎನ್ (ಸಂ) (೨೦೧೩ ನವೆಂಬರ್ ೧೩) ಅವಧಿ http://avadhimag.com

❖ ವಾಸುದೇವ ಶೆಟ್ಟಿ, (ಡಾ) (೨೦೧೩, ಸೆಪ್ಟಂಬರ್, ೨೨) ಓದೋ ಸುಖದ ಮರುನೆನಕೆ, http://www.kannadaprabha.com/supplements/sapthahikaprabha/%E0%B2%93%E0%B2%A6%E0%B3%8B-%E0%B2%B8%E0%B3%81%E0%B2%96%E0%B2%A6-%E0%B2%AE%E0%B2%B0%E0%B3%81%E0%B2%A8%E0%B3%86%E0%B2%A8%E0%B2%95%E0%B3%86/112224.html

❖ ವಿಜಯ ರಾಘವನ್ (೨೦೧೨, ಜನವರಿ ೨) ಕಿ ರಂ ಒಂದು ನೆನಪು, http://avadhimag.com/2012/01/02/%E0%B2%95%E0%B2%BF-%E0%B2%B0%E0%B3%A6-%E0%B2%92%E0%B3%A6%E0%B2%A6%E0%B3%81-

%E0%B2%A8%E0%B3%86%E0%B2%A8%E0%B2%AA%E0%B3%81-%E0%B2%B5%E0%B2%BF%E0%B2%9C%E0%B2%AF-%E0%B2%B0%E0%B2%BE%E0%B2%98%E0%B2%B5/

ಅನುಬಂಧ ೫:
ಸಂದರ್ಶನದ ವಿವರ

ಸಂಶೋಧಕರು ಮಾಡಿದ ಸಂದರ್ಶನಗಳ ವಿವರ

- ರಾಮು, ಸಾಹಿತ್ಯ ಚಿಂತಕರು, ಮೈಸೂರು, ದಿನಾಂಕ: ಜುಲೈ ೨, ೨೦೧೮
- ಪ್ರೊ. ನಟರಾಜ್ ಹುಳಿಯಾರ್, ಪ್ರಾಧ್ಯಾಪಕರು, ಬೆಂಗಳೂರು, ೮ ನವೆಂಬರ್ ೨೦೧೮ ಮಂಗಳೂರಿನಲ್ಲಿ ಮತ್ತು ನವೆಂಬರ್ ೨೪ರಂದು ದೂರವಾಣಿ ಮೂಲಕ ಮಾತನಾಡಲಾಗಿದೆ.
- ಪ್ರೊ. ಬಿ. ಎ. ವಿವೇಕ ರೈ, ನಿವೃತ್ತ ಪ್ರಾಧ್ಯಾಪಕರು, ಮಂಗಳೂರು, ಏಪ್ರಿಲ್ ೧೦, ೨೦೧೭
- ಪ್ರೊ. ರಹಮತ್ ತರೀಕೆರೆ, ನಿವೃತ್ತ ಪ್ರಾಧ್ಯಾಪಕರು, ಹಂಪಿ, ಜೂನ್ ೧೫, ೨೦೧೭
- ಡಾ. ಸಿದ್ದಲಿಂಗಯ್ಯ, ಕವಿಗಳು, ಚಿಂತಕರು, ಬೆಂಗಳೂರು, ಆಗಸ್ಟ್ ೦೬, ೨೦೧೭
- ಡಾ. ನಟರಾಜ್ ಬೂದಾಳ್, ಸಾಹಿತ್ಯ ಚಿಂತಕರು, ತುಮಕೂರು, ಆಗಸ್ಟ್ ೧೮, ೨೦೧೮
- ಡಾ. ಪ್ರದೀಪ್ ಮಾಲ್ಗುಡಿ, ಪತ್ರಕರ್ತರು, ಬೆಂಗಳೂರು, ಸೆಪ್ಟಂಬರ್ ೦೮, ೨೦೧೮
- ಡಾ. ರಾಜಪ್ಪ ದಳವಾಯಿ, ಪ್ರಾಧ್ಯಾಪಕರು ಬೆಂಗಳೂರು ವಿಶ್ವವಿದ್ಯಾಲಯ ಸೆಪ್ಟಂಬರ್ ೨೦, ೨೦೧೮
- ಶ್ರೀಮತಿ ಚಂದನಾ, ಕಿ ರಂ ನಾಗರಾಜ ಅವರ ಕಿರಿಯ ಪುತ್ರಿ, ಬೆಂಗಳೂರು ಡಿಸೆಂಬರ್ ೨೭, ೨೦೧೭

ಅನುಬಂಧ ೬:
ವಿಚಾರ ಸಂಕಿರಣದ ಭಾಷಣಗಳು

ವಿಚಾರ ಸಂಕಿರಣ ಮತ್ತು ಇತರ ಕಾರ್ಯಕ್ರಮದಲ್ಲಿನ ಭಾಷಣಗಳ ಧ್ವನಿಸುರುಳಿ

- ಅಗ್ರಹಾರ ಕೃಷ್ಣಮೂರ್ತಿ ಅವರು ಕಿ. ರಂ. ನಾಗರಾಜ ಅವರ ತೋಂಡಿ ಪರಂಪರೆಯ ಬಗ್ಗೆ ೨೦೧೭, ಆಗಸ್ಟ್ ೮ರಂದು ಬೆಂಗಳೂರಿನಲ್ಲಿ ನಡೆದ ಕಾಡುವ ಕಿರಂ ಕಾರ್ಯಕ್ರಮದಲ್ಲಿ ವಿಚಾರ ಮಂಡಿಸಿರುತ್ತಾರೆ.

❖ ಬಿ ವಿ. ತಾರಕೇಶ್ವರ್. ಅವರು ಕಿ.ರಂ. ನಾಗರಾಜ ಅವರ ಓದಿನ ಮಾದರಿ ಕುರಿತು ೨೦೧೭, ಆಗಸ್ಟ್ ೮ರಂದು ಬೆಂಗಳೂರಿನಲ್ಲಿ ನಡೆದ ಕಾಡುವ ಕಿರಂ ಕಾರ್ಯಕ್ರಮದಲ್ಲಿ ವಿಚಾರ ಮಂಡಿಸಿರುತ್ತಾರೆ.

❖ ಆರ್ ಜಿ ಹಳ್ಳಿ ನಾಗರಾಜ ಅವರು ಕಿ.ರಂ. ನಾಗರಾಜ ಅವರ ಕಾವ್ಯವನ್ನು ಹೇಗೆ ವಿಮರ್ಶೆಗೆ ಒಳಪಡಿಸುತ್ತಿದ್ದರು ಎಂಬ ವಿಷಯದ ಕುರಿತು ೨೦೧೭, ಆಗಸ್ಟ್ ೮ರಂದು ಬೆಂಗಳೂರಿನಲ್ಲಿ ನಡೆದ ಕಾಡುವ ಕಿರಂ ಕಾರ್ಯಕ್ರಮದಲ್ಲಿ ವಿಚಾರ ಮಂಡಿಸಿರುತ್ತಾರೆ.

❖ ಕೆ ಸಿ ಶಿವಾರೆಡ್ಡಿ ಅವರು ಕಿ. ರಂ. ನಾಗರಾಜ ಅವರ ಕಾಲಜ್ಞಾನಿ ಕನಕ ನಾಟಕದ ಮೂಲಕ ಆಧುನಿಕ ಪ್ರಭುತ್ವದ ಧೋರಣೆಗಳನ್ನು ಪರಾಮರ್ಶಿಸುವ ವಿಚಾರಧಾರೆಗಳನ್ನು ೨೦೧೭, ಆಗಸ್ಟ್ ೮ರಂದು ಬೆಂಗಳೂರಿನಲ್ಲಿ ನಡೆದ ಕಾಡುವ ಕಿರಂ ಕಾರ್ಯಕ್ರಮದಲ್ಲಿ ಮಾಡಿರುತ್ತಾರೆ.

❖ ಪ್ರದೀಪ್ ಮಾಲ್ಗುಡಿ ಅವರು ಕಿ.ರಂ. ನಾಗರಾಜ ಅವರು ಒಡನಾಟದ ನೆನಪು ಅವರ ವಿಮರ್ಶೆಯ ರಹದಾರಿಯ ಬಗ್ಗೆ ೨೦೧೭, ಆಗಸ್ಟ್ ೮ರಂದು ಬೆಂಗಳೂರಿನಲ್ಲಿ ನಡೆದ ಕಾಡುವ ಕಿರಂ ಕಾರ್ಯಕ್ರಮದಲ್ಲಿ ಮಾತನಾಡಿರುತ್ತಾರೆ.

❖ ಎಲ್ ಎನ್ ಮುಕುಂದರಾಜ್ ಅವರು ಕಿ.ರಂ. ನಾಗರಾಜ ಅವರ ವಿಮರ್ಶೆಯ ನೋಟದಲ್ಲಿ ಕಾಲಜ್ಞಾನದ ವಿನ್ಯಾಸದ ಬಗ್ಗೆ ೨೦೧೭, ಆಗಸ್ಟ್ ೮ರಂದು ಬೆಂಗಳೂರಿನಲ್ಲಿ ನಡೆದ ಕಾಡುವ ಕಿರಂ ಕಾರ್ಯಕ್ರಮದಲ್ಲಿ ಮಾತನಾಡಿರುತ್ತಾರೆ.

❖ ಬೇಲೂರು ರಘುನಂದನ್ ಅವರು ಕಿ.ರಂ ನಾಗರಾಜ ಅವರ ಕಾವ್ಯ ಪ್ರೀತಿಯ ಬಗ್ಗೆ ೨೦೧೭, ಆಗಸ್ಟ್ ೮ರಂದು ಬೆಂಗಳೂರಿನಲ್ಲಿ ನಡೆದ ಕಾಡುವ ಕಿರಂ ಕಾರ್ಯಕ್ರಮದಲ್ಲಿ ಮಾತನಾಡಿರುತ್ತಾರೆ.

❖ ರಾಜಪ್ಪ ದಳವಾಯಿ ಅವರು ಕಿ.ರಂ. ನಾಗರಾಜ ಪ್ರಶಸ್ತಿಯನ್ನು ಸ್ವೀಕರಿಸುತ್ತಾ ಕಿ.ರಂ. ಅವರ ಎರಡು ನಾಟಕಗಳ ಕುರಿತು ೨೦೧೭, ಆಗಸ್ಟ್ ೮ರಂದು ಬೆಂಗಳೂರಿನಲ್ಲಿ ನಡೆದ 'ಕಾಡುವ ಕಿರಂ' ಕಾರ್ಯಕ್ರಮದಲ್ಲಿ ಮಾತನಾಡಿರುತ್ತಾರೆ.

❖ ಚಂದನಾ. ಕೆ ಎನ್ (ಕಿ. ರಂ. ನಾಗರಾಜ ಅವರ ಮಗಳು) ಇವರು ತಮ್ಮ ತಂದೆಯವರಿಗಿದ್ದ ತಂತ್ರಜ್ಞಾನದ ಒಲವನ್ನು, ವೈಯಕ್ತಿಕ ಕಥನಗಳ ಬಗ್ಗೆ ೨೦೧೭, ಆಗಸ್ಟ್ ೮ರಂದು ಬೆಂಗಳೂರಿನಲ್ಲಿ ನಡೆದ 'ಕಾಡುವ ಕಿರಂ' ಕಾರ್ಯಕ್ರಮದಲ್ಲಿ ಮಾತನಾಡಿರುತ್ತಾರೆ.

❖ ಡಾ. ಟಿ. ಯಲ್ಲಪ್ಪ ಅವರು ಕಿ.ರಂ. ನಾಗರಾಜ ಅವರು ಬೋಧಕರಾಗಿ, ವಿಮರ್ಶಕರಾಗಿ ನಿರ್ವಹಿಸಿದ ಜವಾಬ್ದಾರಿಗಳ ಕುರಿತು ೨೦೧೭, ಆಗಸ್ಟ್ ೮ರಂದು ಬೆಂಗಳೂರಿನಲ್ಲಿ ನಡೆದ 'ಕಾಡುವ ಕಿರಂ' ಕಾರ್ಯಕ್ರಮದಲ್ಲಿ ಮಾತನಾಡಿರುತ್ತಾರೆ.

❖ ಡಾ. ಎನ್ ಎಸ್ ಮೂರ್ತಿ ೨೦೧೭, ಆಗಸ್ಟ್ ೮ರಂದು ಬೆಂಗಳೂರಿನಲ್ಲಿ ನಡೆದ 'ಕಾಡುವ ಕಿರಂ' ಕಾರ್ಯಕ್ರಮದಲ್ಲಿ ಅಧ್ಯಕ್ಷೀಯ ನುಡಿಗಳನ್ನಾಡಿರುತ್ತಾರೆ.

ಅನುಬಂಧ ೭:

ಆಡಿಯೋ ಮತ್ತು ವಿಡಿಯೋ ದಾಖಲೆಗಳು

- ❖ ಬಾಲಕೃಷ್ಣ ಕಾಕತ್ಕರ್ ಅವರ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪುಸ್ತಕದ ಕುರಿತು ಕಿ.ರಂ. ನಾಗರಾಜ ಅವರು ಮಾತನಾಡುತ್ತಿರುವುದು– https://youtu.be/HIH47J9WmIo
- ❖ ಕೆ.ಎಸ್. ನರಸಿಂಹಸ್ವಾಮಿ ಅವರನ್ನು ಕಿ. ರಂ. ನಾಗರಾಜ ಮತ್ತು ಶೂದ್ರ ಶ್ರೀನಿವಾಸ್ ಅವರು ಸಂದರ್ಶನ ಮಾಡಿದ ಧ್ವನಿಸುರುಳಿ– https://youtu.be/FiRuF-r59ZI
- ❖ ಕಾಡುವ ಕಿ.ರಂ ಕಾರ್ಯಕ್ರಮದ ಮೊದಲ ಆವೃತ್ತಿಯಲ್ಲಿ ಆಯೋಜಕರಾದ ಪ್ರದೀಪ್ ಮಾಲ್ಗುಡಿಯವರು ಮಾಧ್ಯಮಗಳೊಂದಿಗೆ ಮಾತನಾಡುತ್ತಿರುವ ದೃಶ್ಯ– https://youtu.be/_ZAyG3rz0WQ
- ❖ ಜೋಗಿ ಕವಿತೆಯ ವಿಭಿನ್ನ ನೆಲೆಗಳು ಎಂಬ ವಿಷಯದ ಬಗ್ಗೆ ಕಿ.ರಂ. ನಾಗರಾಜ ಅವರು ಮಾತನಾಡುತ್ತಿರುವ ದೃಶ್ಯ– https://youtu.be/k6T4zV-GEUk
- ❖ ದೂರದರ್ಶನದ ಕಾರ್ಯಕ್ರಮದಲ್ಲಿ ಕಿ.ರಂ. ನಾಗರಾಜ ಅವರು ಮಾತನಾಡುತ್ತಿರುವ ಧ್ವನಿ ಸುರುಳಿhttps://youtu.be/-2Y71Nr8Jk8
- ❖ ಕಿ.ರಂ.ನಾಗರಾಜ ಅವರ ಶಿಷ್ಯವೃಂದ ಆಯೋಜಿಸಿದ ಕಾವ್ಯಶಿವರಾತ್ರಿ– ಕಿ.ರಂ ನೆನಪಿನ ಕಾರ್ಯಕ್ರಮದಲ್ಲಿ ಕಿ.ರಂ. ನಾಗರಾಜ ಅವರ ಬಗ್ಗೆ ಡಾ. ಎಲ್. ಎನ್. ಮುಕುಂದ್ ರಾಜ್ ಅವರು ಮಾತನಾಡುತ್ತಿರುವ ದೃಶ್ಯ– https://youtu.be/PE3MaxHjH90
- ❖ ಕಿ.ರಂ.ನಾಗರಾಜ ಅವರ ಶಿಷ್ಯವೃಂದ ಆಯೋಜಿಸಿದ ಕಾವ್ಯಶಿವರಾತ್ರಿ– ಕಿ.ರಂ ನೆನಪಿನ ಕಾರ್ಯಕ್ರಮದಲ್ಲಿ ಕಿ.ರಂ. ನಾಗರಾಜ ಅವರ ಬಗ್ಗೆ ಶ್ರೀಮತಿ ಮಂಗಳಾ ಅವರು ಮಾತನಾಡುತ್ತಿರುವ ದೃಶ್ಯ– https://youtu.be/_32kvaqMbdg
- ❖ ಕಿ.ರಂ.ನಾಗರಾಜ ಅವರ ಶಿಷ್ಯವೃಂದ ಆಯೋಜಿಸಿದ ಕಾವ್ಯಶಿವರಾತ್ರಿ– ಕಿ.ರಂ ನೆನಪಿನ ಕಾರ್ಯಕ್ರಮದಲ್ಲಿ ಕಿ.ರಂ. ನಾಗರಾಜ ಅವರ ಬಗ್ಗೆ ಡಾ. ಜಯಶಂಕರ ಅಲಗೂರು ಅವರು ಮಾತನಾಡುತ್ತಿರುವ ದೃಶ್ಯ– https://youtu.be/28GmdTwg-jM

- ❖ ಕಿ.ರಂ.ನಾಗರಾಜ ಅವರ ಶಿಷ್ಯವೃಂದ ಆಯೋಜಿಸಿದ ಕಾವ್ಯಶಿವರಾತ್ರಿ– ಕಿ.ರಂ ನೆನಪಿನ ಕಾರ್ಯಕ್ರಮದಲ್ಲಿ ಕಿ.ರಂ. ನಾಗರಾಜ ಅವರ ಬಗ್ಗೆ ಆಗಿನ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಪ್ಪಣ್ಣ ಅವರು ಮಾತನಾಡುತ್ತಿರುವ ದೃಶ್ಯ– https://youtu.be/5QrgbG-4TCI
- ❖ ಪಿ. ಲಂಕೇಶ್ ಅವರ ಕಾವ್ಯದ ಬಗ್ಗೆ ಕಿ.ರಂ. ನಾಗರಾಜ ಅವರು ಮಾತನಾಡುತ್ತಿರುವ ಧ್ವನಿ ಸುರುಳಿ https://youtu.be/HlF9yq3TaGM
- ❖ ಎಂ ಎಸ್ ವ್ಯಾಸರ ಕೃತಿಗಳ ಕುರಿತು ಕಿ.ರಂ. ನಾಗರಾಜ ಅವರ ಉಪನ್ಯಾಸದ ಧ್ವನಿ ಸುರುಳಿ– https://youtu.be/nuKHVm4nJXc
- ❖ ೨೦೧೮ರ ಕಾಡುವ ಕಿ.ರಂ ಕಾರ್ಯಕ್ರಮಕ್ಕಾಗಿ ದಲಿತ ಕವಿ ಡಾ. ಸಿದ್ದಲಿಂಗಯ್ಯನವರ ಸಂದರ್ಶನ– https://youtu.be/-xc_6g6yFPI
- ❖ ೨೦೧೧ರ ಕಾಡುವ ಕಿ.ರಂ. ಕಾರ್ಯಕ್ರಮಕ್ಕಾಗಿ ವಿಮರ್ಶಕಿ ಡಾ. ಎಂ. ಎಸ್ ಆಶಾದೇವಿ ಅವರ ಸಂದರ್ಶನ– https://youtu.be/7L6r3EwNeJM
- ❖ ೨೦೧೧ರ ಕಾಡುವ ಕಿ.ರಂ. ಕಾರ್ಯಕ್ರಮಕ್ಕಾಗಿ ಡಾ. ವಸುಂಧರಾ ಭೂಪತಿ ಅವರ ಸಂದರ್ಶನ– https://youtu.be/6ib3yjvGXn4
- ❖ ೨೦೧೧ರ ಕಾಡುವ ಕಿ.ರಂ. ಕಾರ್ಯಕ್ರಮಕ್ಕಾಗಿ ಕವಿಗಳಾದ ಸುಬ್ಬು ಹೊಲೆಯಾರ್ ಅವರ ಸಂದರ್ಶನ– https://youtu.be/IoaXQBTh1dQ
- ❖ ೨೦೧೧ರ ಕಾಡುವ ಕಿ.ರಂ. ಕಾರ್ಯಕ್ರಮಕ್ಕಾಗಿ ಪ್ರೊ. ಬಿ. ಗಂಗಾಧರಯ್ಯ ಅವರ ಸಂದರ್ಶನ– https://youtu.be/enCsq81pDwM
- ❖ ೨೦೧೧ರ ಕಾಡುವ ಕಿ.ರಂ. ಕಾರ್ಯಕ್ರಮಕ್ಕಾಗಿ ನಾಗತಿಹಳ್ಳಿ ರಮೇಶ್ ಅವರ ಸಂದರ್ಶನ– https://youtu.be/I97G6xZNetA
- ❖ ೨೦೧೧ರ ಕಾಡುವ ಕಿ.ರಂ. ಕಾರ್ಯಕ್ರಮಕ್ಕಾಗಿ ಡಾ. ಸತ್ಯಮಂಗಲ ಮಾದೇವ್ ಅವರ ಸಂದರ್ಶನ–https://youtu.be/Swhl7oBGyJA
- ❖ ೨೦೧೧ರ ಕಾಡುವ ಕಿ.ರಂ. ಕಾರ್ಯಕ್ರಮಕ್ಕಾಗಿ ಡಾ. ಎಲ್. ಎನ್. ಮುಕುಂದ್ ರಾಜ್ ಅವರ ಸಂದರ್ಶನ–https://youtu.be/yBOf5xEOIVk
- ❖ ಕಿ.ರಂ. ನಾಗರಾಜ ಅವರ ಬಗ್ಗೆ ಡಾ. ಗೀತಾ ವಸಂತ್ ಅವರು ಮಾತನಾಡುತ್ತಿರುವ ದೃಶ್ಯ– https://youtu.be/sB5UKzPfPsc

❖ ಬೇಂದ್ರೆ ಅವರ ಕಾವ್ಯದ ಬಗ್ಗೆ ಕಿ ರಂ ನಾಗರಾಜ ಮತ್ತು ಡಿ ಆರ್ ನಾಗರಾಜ ಅವರ ವಿಚಾರಧಾರೆಗಳ ಬಗ್ಗೆ ಪ್ರೊ ನಟರಾಜ್ ಹುಳಿಯಾರ್ ಅವರು ಮಾತನಾಡುತ್ತಿರುವ ದೃಶ್ಯ– https://youtu.be/zATrzidQkEc

ಮಾರ್ಗದರ್ಶಕರು	**ಅಧ್ಯಕ್ಷರು**	**ಸಂಶೋಧನಾ ವಿದ್ಯಾರ್ಥಿ**
(ಪ್ರೊ. ಸೋಮಣ್ಣ)	(ಪ್ರೊ. ಸೋಮಣ್ಣ)	(ಮುಸ್ತಾಫ ಕೆ ಎಚ್)

****